# ವಿಪ್ರನುಡಿ

ಸ್ವಾವಲಂಬನೆ–ಸಂಘಟನೆ–ಸಂಸ್ಕಾರ

ಸಂಪುಟ–35 ಶ್ರೀಶುಭಕೃತ್/ಶೋಭಕೃತ್ ನಾಮ ಸಂವತ್ಸರ, ಫಾಲ್ಗುಣ–ಚೈತ್ರ ಮಾಸ ಮಾರ್ಚ್–2023, ಸಂಚಿಕೆ–1, ಪುಟಗಳು–40 ಬೆಲೆ ರೂ.15/–


## ಸರಣಿ ಬ್ರಾಹ್ಮಣ ಸಮಾವೇಷಗಳು – ಬಲಗೊಳ್ಳುತ್ತಿರುವ ವಿಪ್ರ ಸಮಾಜ






ಹಾವೇರಿ ಜಿಲ್ಲಾ ಪ್ರಥಮ ಬ್ರಾಹ್ಮಣ ಸಮಾವೇಶ





ವಿಪ್ರ ಜಾಗೃತಿ ಮಹಾ ಸಮಾವೇಷ ಕೆಂಭಾವಿ, ಯಾದಗಿರಿ ಜಿಲ್ಲೆ





ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕು ಬ್ರಾಹ್ಮಣ ಸಮಾವೇಶ,

# ಉದಾರ ದೇಣಿಗೆ



ಶ್ರೀಮತಿ ಮತ್ತು ಶ್ರೀ ಎಂ.ಆರ್. ಮಂಜುನಾಥ್

ಮುಟುಗುಪ್ಪೆ ಸೊರಬ ತಾಲೂಕು. ಎಂ.ಆರ್. ಮಂಜುನಾಥ್ ಕೇಂದ್ರ ಕಾರ್ಯಕಾರಿ ಸಮಿತಿ ಹಿರಿಯ ಸದಸ್ಯರು ಇವರ ಮನೆಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ ಭೇಟಿ ನೀಡಿದ ಸಂದರ್ಭದಲ್ಲಿ ಮಹಾಸಭಾಗೆ ಮಂಜುನಾಥ್ ಒಂದು ಲಕ್ಷ ರೂಪಾಯಿ ದೇಣಿಗೆ ನೀಡಿ ಅಧ್ಯಕ್ಷರನ್ನು ಸನ್ಮಾನಿಸಿದರು.



ಶ್ರೀ ಪವನ್ ಕೆ.ಬಿ. ದೇಸಾಯಿ

ಸುನೀಲ್ ದೇಸಾಯಿ, ಮಾಲೀಕರು, ಬಹದ್ದೂರ್ ದೇಸಾಯಿ ಮೋಟಾರ್ಸ್, ಹೀರೋ ಕಾರ್ಪ್ ಮೋಟಾರ್ಸ್, ಕಂಪನಿ ಅಧಿಕೃತ ವಿತರಕರು ಹಾವೇರಿ ಇವರ ಶೋರೂಂಗೆ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ ಭೇಟಿ ನೀಡಿದ ಸಂದರ್ಭದಲ್ಲಿ ಮಹಾಸಭಾಗೆ 50,000 ರೂ. ದೇಣಿಗೆ ನೀಡಿರುತ್ತಾರೆ.

**ಉದಾರ ದೇಣಿಗೆ ನೀಡಿದ ದಾನಿಗಳಿಗೆ ಮಹಾಸಭೆಯ ಕೃತಜ್ಞತೆಗಳು**

# ಮಹಾಶಿವರಾತ್ರಿ ಆಚರಣೆ





ಮಹಾ ಸಭೆಯ ಗಾಯತ್ರಿ ಭವನದಲ್ಲಿ ಮಾನ್ಯ ಅಧ್ಯಕ್ಷರ ಅಪೇಕ್ಷೆಯಂತೆ ಮಹಾಶಿವರಾತ್ರಿಯ ದಿವಸ ನಾಲ್ಕು ಯಾಮಗಳ ಮಹಾನ್ಯಾಸ ಸಹಿತ ಅಭಿಷೇಕ ಪೂಜೆಯನ್ನು ಏರ್ಪಡಿಸಲಾಯಿತು. ಸಂಜೆ 6.00 ಗಂಟೆಯ ಪ್ರಥಮ ಪೂಜೆಯನ್ನು ಜಂಟಿ ಕಾರ್ಯದರ್ಶಿ ಶ್ರೀ ಎಂ.ಆರ್. ಶಿವಶಂಕರ್ ಅಳಿಯ ಮತ್ತು ಪುತ್ರಿಯರು, ರಾತ್ರಿ 9.00 ಗಂಟೆಯ ಪೂಜೆಯನ್ನು ಉಪಾಧ್ಯಕ್ಷ ಶ್ರೀ ಹೆಚ್.ಆರ್. ಸುರೇಶ್ ದಂಪತಿಗಳು, ರಾತ್ರಿ 12 ಗಂಟೆಯ ಅಭಿಷೇಕವನ್ನು ಅಧ್ಯಕ್ಷರಾದ ಹಾರನಹಳ್ಳಿ ದಂಪತಿಗಳು ಮತ್ತು ಬೆಳಗಿನ ಜಾವ 3.00 ಗಂಟೆಯ ಅಭಿಷೇಕವನ್ನು ಕಾರ್ಯಕ್ರಮದ ಪೂರ್ಣ ಹೊಣೆ ಹೊತ್ತು ಎಲ್ಲಾ ವ್ಯವಸ್ಥೆಯನ್ನು ಕಲ್ಪಿಸಿದ ಶ್ರೀ ಜಯಸಿಂಹ ದಂಪತಿಗಳು ನೆರವೇರಿಸಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ಶ್ರೀಧರಮೂರ್ತಿ, ಹಿರಿಯ ಪರಿಷತ್ ಸದಸ್ಯರಾದ ಶ್ರೀ ಹೆಚ್.ಎನ್. ಹಿರಿಯಣ್ಣಸ್ವಾಮಿ, ಶ್ರೀಮತಿ ಶುಭಮಂಗಳ ಮುಂತಾದ ಹಲವು ಪದಾಧಿಕಾರಿಗಳು ಮಹಾಸಭೆಯ ಪೂರ್ಣ ಸಿಬ್ಬಂಧಿವರ್ಗ ಸಕ್ರಿಯವಾಗಿ ಪಾಲ್ಗೊಂಡು ನೂರಾರು ಭಕ್ತರು ಆಗಮಿಸಿ ಪ್ರಸಾದ ಸ್ವೀಕರಿಸಿ ಈಶ್ವರನ ಅನುಗ್ರಹಕ್ಕೆ ಪಾತ್ರರಾದರು.






**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)**

ಗಾಯತ್ರೀ ಭವನ, ನಂ.3070, (14ನೇ ಅಡ್ಡರಸ್ತೆ), 9ನೇ ಮುಖ್ಯರಸ್ತೆ,
ಗಾಯತ್ರಿ ಭವನ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–70
ದೂರವಾಣಿ: 26771695, 26770066
E-mail: info@akbms.com
Website: www.akbms.com

ಅಧ್ಯಕ್ಷರು
**ಅಶೋಕ ಹಾರನಹಳ್ಳಿ**

ಪ್ರಧಾನ ಕಾರ್ಯದರ್ಶಿ
**ಶ್ರೀಧರಮೂರ್ತಿ ಎನ್**

ಖಜಾಂಚಿ
**ವೆಂಕಟೇಶ ಎಸ್, ನಾಯಕ್**

ಸಂಘಟನಾ ಕಾರ್ಯದರ್ಶಿ
**ಡಾ| ಜಿ.ಎಸ್. ರಾಘವೇಂದ್ರ ಭಟ್**

**ವಿಪ್ರನುಡಿ ಪ್ರಕಟಣಾ ಸಮಿತಿ**

ಪ್ರಧಾನ ಸಂಪಾದಕರು
**ಡಾ| ಎಂ.ಕೆ. ಶ್ರೀಧರ್**

ಸದಸ್ಯರು
**ಜ್ಯೋತಿಷಿ ಬ|| ಡಾ| ಮುದ್ರಾಡಿ ವಾಸುದೇವ ಭಟ್**
**ನಾರಾಯಣ ಭಟ್ ಹುಳೇಗಾರು**
**ಪ್ರಭಾಕರ ಕೆ.ಸಿ**
**ಕಾರ್ತಿಕ್ ಬಾಪಟ್**
**ಹೆಚ್.ವಿ. ಸುಬ್ಬರಾವ್**

ಕಛೇರಿ ಸಮಯ : ಮಂಗಳವಾರದಿಂದ ಶನಿವಾರ
ಬೆಳಿಗ್ಗೆ 10.00 ರಿಂದ 2.00
ಸಂಜೆ 4.00 ರಿಂದ 8.00
ಭಾನುವಾರ ಬೆಳಿಗ್ಗೆ 10.00 ರಿಂದ 2.00
ವಾರದ ರಜಾ : ಸೋಮವಾರ

ಮುದ್ರಕರು : ಪರಿಮಳ ಮುದ್ರಣಾಲಯ
ನಂ 184, 14ನೇ ಮುಖ್ಯರಸ್ತೆ, ಹನುಮಂತನಗರ
ಬೆಂಗಳೂರು–560 05. ದೂ : 26606061.

# ನಲ್ನುಡಿ

**ಅಪತ್ಸು ಮಿತ್ರಂ ಜಾನೀಯಾತ್ ಯುದ್ಧೇಶೂರಂ ಧನೇ ಶುಚಿಮ್ ।**
**ಭಾರ್ಯಾಂ ಕ್ಷೀಣೇಷು ವಿತ್ತೇಷು ವ್ಯಸನೇಷು ಚ ಬಾಂಧವಾನ್ ॥**

'ಹೊರಗಿನ ಆಪತ್ತುಗಳು ಬಂದಾಗ ಸ್ನೇಹಿತನನ್ನು, ಯುದ್ಧದಲ್ಲಿ ಶೂರನನ್ನು, ಹಣದ ವಿಷಯದಲ್ಲಿ ಪರಿಶುದ್ಧನನ್ನು, ಬಡತನದಲ್ಲಿ ಹೆಂಡತಿಯನ್ನು, ಚಿಂತೆಗಳು ಬಂದಾಗ ನೆಂಟರನ್ನು ಪರೀಕ್ಷಿಸಿ ತಿಳಿದುಕೊಳ್ಳಬಹುದು.

ಸುಭಾಷಿತ ರತ್ನ ಭಾಂಡಾಗಾರದ ಈ ಶ್ಲೋಕವು ಐದು ಬಗೆಯ ಜನರ ಮನೋವೃತ್ತಿಯ ಬಗ್ಗೆ ವಿವರಿಸುತ್ತದೆ. ಲೋಕದಲ್ಲಿ ಒಂದಾನೊಂದು ಕಾರಣದಿಂದ ಮಿತ್ರರಾಗುತ್ತಾರೆ. ಆಧುನಿಕ ಕಾಲದಲ್ಲಿ ಕಾಫಿ/ಟೀ ಸ್ನೇಹಿತ, ಮದ್ಯ ಸ್ನೇಹಿತ, ಇಸ್ಪೀಟ್ ಸ್ನೇಹಿತ, ಹರಟೆ ಸ್ನೇಹಿತ, ವೃತ್ತಿ ಸ್ನೇಹಿತ, ಎಂಬ ನಾನಾ ಬಗೆ ಇರುತ್ತಾರೆ. ಅಭಿಷೇಕ ನಾಟಕದಲ್ಲಿ ಭಾಸ ಮಹಾಕವಿ ತಿಳಿಸಿದಂತೆ ಸಮಾನವಾದ ಗುಣ ಚಿಂತೆ ಇರುವರಲ್ಲಿ, ಗೆಳೆತನ ಜಾಸ್ತಿ (**ಸಮಾನಶೀಲ ವ್ಯಸನೇಷು ಸಖ್ಯಮ್**). ಸಂಸ್ಕೃತದಲ್ಲಿ, ಸ್ನೇಹ ಎಂಬ ಪದಕ್ಕೆ ಜಿಡ್ಡು, ಎಣ್ಣೆ ಎಂಬ ಅರ್ಥವೂ ಇದೆ. ಇದು ಕೈಗೆ ಅಂಟಿಕೊಳ್ಳುತ್ತದೆ. ಸ್ನೇಹಿತನಾದವನು ಮಿತ್ರನ ಹಿತವನ್ನು ಆಶಿಸಿ, ಕಷ್ಟಕಾಲದಲ್ಲಿ ನೆರವಾಗಿ ರಕ್ಷಿಸುವವನು. ರಾಮಾಯಣದಲ್ಲಿ ರಾಮ–ಸುಗ್ರೀವ, ರಾಮ–ಹನುಮಂತ, ರಾಮ–ವಿಭೀಷಣರ ಗೆಳೆತನ ಅಸಾಧಾರಣವಾದುದು. ಆ ವೀರಕಾವ್ಯದ ಯುದ್ಧ ಕಾಂಡದ ಒಂದು ಪ್ರಸಂಗದಲ್ಲಿ ಇಂದ್ರಜಿತ್‌ನ ನಾಗಪಾಶದಿಂದ ರಾಮ–ಲಕ್ಷ್ಮಣರಿಬ್ಬರೂ ಮೂರ್ಛೆಹೊಂದಿದಾಗ, ಸುಗ್ರೀವನು ವೈದ್ಯ ಸುಷೇಣನಿಗೆ ಇವರಿಬ್ಬರನ್ನೂ ಕಿಷ್ಕಿಂಧೆಗೆ ಕರೆದುಕೊಂಡು ಹೋಗಿ ಔಷಧೋಪಚಾರ ಮಾಡು. ನಾನು ರಾವಣನ ಜೊತೆ ಯುದ್ಧ ಮಾಡುತ್ತೇನೆ ಎನ್ನುತ್ತಾನೆ. ರಾಮನು 'ನಿನ್ನಂಥ ಮಿತ್ರರು ಎಲ್ಲರಿಗೂ ದೊರಕುವುದಿಲ್ಲ ಎಂದು ಕೊಂಡಾಡುತ್ತಾನೆ. ಯುದ್ಧವು ವೀರನ ಸತ್ವವನ್ನು ಪರೀಕ್ಷಿಸುತ್ತದೆ. ಹಣವು ಮನುಷ್ಯನ ಗುಣಕ್ಕೆ ಒರೆಗಲ್ಲು, ಭ್ರಷ್ಟಾಚಾರಕ್ಕೆ ತವರು. ಹಣ ವ್ಯವಹಾರದಲ್ಲಿ ಆದಷ್ಟೂ ಎಚ್ಚರಿಕೆಯಿಂದಿರಬೇಕು.

ಬಡತನ ಬಂದಾಗ ಹೆಂಡತಿಯನ್ನು ಪರೀಕ್ಷಿಸಲಾಗುತ್ತಿದೆ. ರಾಮನನ್ನು ಹಿಂಬಾಲಿಸಿ ಸೀತೆ, ಪಾಂಡವರನ್ನು ಹಿಂಬಾಲಿಸಿ ದ್ರೌಪದಿ, ಕಾಡಿಗೆ ಹೋದರು. ಈ ಸಂದರ್ಭದಲ್ಲಿ ಅಗಸ್ತ್ಯ ಮಹರ್ಷಿಗಳು ರಾಮನಿಗೆ ಹೇಳಿದ ಮಾತುಗಳು ಗಮನಾರ್ಹ. ಎಲೈ ರಾಮನೇ! ಸೀತೆಯು ನಿನ್ನೊಡನೆ ಕಾಡಿಗೆ ಬಂದು ನಿನ್ನ ಕಷ್ಟದಲ್ಲಿ ಭಾಗಿಯಾಗಿದ್ದಾಳೆ. ಗಂಡ, ಕುಟುಂಬ ಸುಖದಲ್ಲಿದ್ದಾಗ ಮಡದಿ ಗಂಡನ ಜೊತೆಯಲ್ಲಿದ್ದು, ಅವನಿಗೆ ಕಷ್ಟ ಎದುರಾದಾಗ ದೂರವಾಗುತ್ತಾರೆ. ಸೀತೆಯು ಅಂತಹವಳಲ್ಲ. ಈ ಹಿತವಚನವು ಗಂಡನಿಗೂ ಅನ್ವಯಿಸುತ್ತದೆ. ಸೀತೆ ಅಪಹರಣವಾದಾಗ ರಾಮ ಇನ್ನೊಬ್ಬಳನ್ನು ಮದುವೆಯಾಗಲಿಲ್ಲ. ಈ ವಿವಾಹವು ಅತ್ಯಂತ ಪ್ರಾಚೀನವಾದ, ವೇದಕಾಲೀನ ಕೌಟುಂಬಿಕ ವ್ಯವಸ್ಥೆ ಇಂದಿನವರೆಗೂ ನಡೆದುಕೊಂಡು ಬಂದಿದೆ. ಯುವಪೀಳಿಗೆಗೆ ಕೌಟುಂಬಿಕ ಜೀವನದ ಮಹತ್ತ್ವವನ್ನು ತಿಳಿಸಿಕೊಡಬೇಕು. ಅದರ ರಕ್ಷಣೆಯನ್ನು ನಾವು ಮಾಡಬೇಕು.

**ಸೂಚನೆ : ವಿಪ್ರನುಡಿ ಪತ್ರಿಕೆಯಲ್ಲಿ ಮುದ್ರಿತ ವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರ ವೈಯಕ್ತಿಕ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ – ಮುದ್ರಕರ ಅಭಿಪ್ರಾಯವಲ್ಲ. ವಿಪ್ರನುಡಿಯಲ್ಲಿ ಪ್ರಕಟವಾಗುವ ಯಾವುದೇ ಜಾಹೀರಾತುಗಳಿಗೆ (ರಿಯಲ್ ಎಸ್ಟೇಟ್, ಜ್ಯೋತಿಷ್ಯ, ವಾಣಿಜ್ಯಕ್ಕೆ ಸಂಬಂಧಿಸಿದ್ದು ಮಹಾಸಭೆ ಜವಾಬ್ದಾರರಾಗಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಾಹಿರಾತುದಾರರನ್ನೇ ಸಂಪರ್ಕಿಸಬೇಕು.**

**–ಸಂಪಾದಕ ಮಂಡಳಿ**

ಹಿಂದಿನ ಸಂಚಿಕೆಯಿಂದ

# ತತ್ತ್ವ ಬೋಧ

ಸ್ವಾಮಿ ಶಿವಪ್ರಕಾಶಾನಂದ ಸರಸ್ವತಿ

**ಸಂಕಲ್ಪವಿಕಲ್ಪಾತ್ಮಕಂ ಮನಃ । ನಿಶ್ಚಯಾತ್ಮಿಕಾ ಬುದ್ಧಿಃ ।**
**ಅಹಂಕರ್ತಾ ಅಹಂಕೃತಿಃ । ಚಿಂತನಕರ್ತೃ ಚಿತ್ತಮ್ ।**

**ಅನುವಾದ :** ಸಂಕಲ್ಪವಿಕಲ್ಪಾತ್ಮಕವಾದದ್ದು ಮನಸ್ಸು. ನಿಶ್ಚಯಾತ್ಮಕವಾದದ್ದು ಬುದ್ಧಿ. 'ನಾನು' ಎಂದು ಅಭಿಮಾನವನ್ನು ಮಾಡುವುದು ಅಹಂಕೃತಿ. ಚಿಂತನೆಯನ್ನು ಮಾಡುವುದು ಚಿತ್ತ.

**ವಿವರಣೆ :** ಒಂದೇ ಅಂತಃಕರಣದಲ್ಲಿ ಹಲವಾರು ರೀತಿಯ ವೃತ್ತಿಗಳು ಮೂಡುತ್ತವೆ. ಯೋಚನೆಗಳು, ಭಾವನೆಗಳು, ತಿಳುವಳಿಕೆ ಇತ್ಯಾದಿ ಅಂತಃಕರಣದ ವೃತ್ತಿಗಳೇ ಆಗಿವೆ. ಈ ವೃತ್ತಿಗಳನ್ನು ನಾಲ್ಕಾಗಿ ವಿಂಗಡಿಸಲಾಗುತ್ತದೆ. ಸಂಕಲ್ಪ–ವಿಕಲ್ಪ ಒಂದು ರೀತಿಯ ವೃತ್ತಿ. ವಿಷಯಗಳ ಗುಣ–ದೋಷಗಳ ಬಗ್ಗೆ ಯೋಚಿಸುವ ವೃತ್ತಿಯು ಸಂಕಲ್ಪ–ವಿಕಲ್ಪ ಎನ್ನಬಹುದು. ಈ ವೃತ್ತಿಯನ್ನು ಹೊಂದಿದಾಗ ಅಂತಃಕರಣವು ಮನಸ್ಸು ಎನ್ನಲ್ಪಡುತ್ತದೆ. ನಿಶ್ಚಯ ಎನ್ನುವ ವೃತ್ತಿಯಿದ್ದಾಗ ಅಂತಃಕರಣವು ಬುದ್ಧಿ ಎನ್ನಲ್ಪಡುತ್ತದೆ. 'ನಾನು' ಎಂದು ಅಭಿಮಾನದ ರೂಪದ ವೃತ್ತಿಯಿಂದಾಗಿ ಅದು ಅಹಂಕಾರ ಎಂದು ಕರೆಯಲ್ಪಡುತ್ತದೆ. ಚಿಂತನೆ ಎಂದರೆ ಸ್ಮರಣೆಯನ್ನು ಮಾಡುವಾಗ ಅದು ಚಿತ್ತ ಎಂದು ಕರೆಯಲ್ಪಡುತ್ತದೆ.

**ಮನಸೋ ದೇವತಾ ಚಂದ್ರಮಾಃ । ಬುದ್ಧೇರ್ಬ್ರಹ್ಮಾ ।**
**ಅಹಂಕಾರಸ್ಯ ರುದ್ರಃ । ಚಿತ್ತಸ್ಯ ವಾಸುದೇವಃ ।**

**ಅನುವಾದ :** ಮನಸ್ಸಿನ ದೇವತೆ ಚಂದ್ರ. ಬುದ್ಧಿಯ (ದೇವತೆ) ಬ್ರಹ್ಮಾ. ಅಹಂಕಾರದ (ದೇವತೆ) ರುದ್ರ. ಚಿತ್ತದ ದೇವತೆ ವಾಸುದೇವ.

**ವಿವರಣೆ :** ಪ್ರತಿಯೊಂದು ಗ್ರಾಮಕ್ಕೂ ಒಂದು ಗ್ರಾಮದೇವತೆ ಇರುವಂತೆ ಈ ದೇಹದ ಒಂದೊಂದು ಅಂಗಕ್ಕೂ, ಒಂದೊಂದು ಇಂದ್ರಿಯಕ್ಕೂ ಅದರದ್ದೇ ಆದ ದೇವತೆ ಇರುವುದು ಎನ್ನುವುದನ್ನು ಶಾಸ್ತ್ರವು ತಿಳಿಸುತ್ತದೆ. ಇಲ್ಲಿ ಅಂತಃಕರಣದ ವಿವಿಧ ಭಾಗಗಳ ದೇವತೆಗಳನ್ನು ಹೇಳಲಾಗಿದೆ. ಈ ದೇವತೆಗಳ ಅನುಗ್ರದಿಂದ ಮನಸ್ಸು ಇತ್ಯಾದಿಗಳು ತಮ್ಮ ಕಾರ್ಯಗಳನ್ನು ಮಾಡುತ್ತವೆ.

ಏತೇಷಾಂ ಪಂಚತತ್ತ್ವಾನಾಂ ಮಧ್ಯೇ ಆಕಾಶಸ್ಯ ರಾಜಸಾಂಶಾದ್ ವಾಗಿಂದ್ರಿಯಂ ಸಂಭೂತಮ್। ವಾಯೋಃ ರಾಜಸಾಂಶಾತ್ ಪಾಣೀಂದ್ರಿಯಂ ಸಂಭೂತಮ್। ವಹ್ನೇಃ ರಾಜಸಾಂಶಾತ್ ಪಾದೇಂದ್ರಿಯಂ ಸಂಭೂತಮ್। ಜಲಸ್ಯ ರಾಜಸಾಂಶಾದ್ ಉಪಸ್ಥೇಂದ್ರಿಯಂ ಸಂಭೂತಮ್। ಪೃಥಿವ್ಯಾಃ ರಾಜಸಾಂಶಾತ್ ಪಾಯ್ವಿಂದ್ರಿಯಂ ಸಂಭೂತಮ್।

**ಅನುವಾದ :** ಈ ಪಂಚತತ್ತ್ವಗಳಲ್ಲಿ ಆಕಾಶದ ರಾಜಸಾಂಶದಿಂದ ವಾಗಿಂದ್ರಿಯವು ಉಂಟಾಗಿದೆ. ವಾಯುವಿನ ರಾಜಸಾಂಶದಿಂದ ಪಾಣೀಂದ್ರಿಯವು ಉಂಟಾಗಿದೆ. ವಹ್ನಿಯ ರಾಜಸಾಂಶದಿಂದ ಪಾದೇಂದ್ರಿಯವು ಉಂಟಾಗಿದೆ. ಜಲದ ರಾಜಸಾಂಶದಿಂದ ಉಪಸ್ಥೇಂದ್ರಿಯವು ಉಂಟಾಗಿದೆ. ಪೃಥಿವಿಯ ರಾಜಸಾಂಶದಿಂದ ಪಾಯು ಇಂದ್ರಿಯವು ಉಂಟಾಗಿದೆ.

**ವಿವರಣೆ :** ಆಕಾಶಾದಿ ಪಂಚಭೂತಗಳ ಸಾತ್ತ್ವಿಕಾಂಶಗಳಿಂದ ಐದು ಜ್ಞಾನೇಂದ್ರಿಯಗಳು ಹುಟ್ಟುವಂತೆ ಅವುಗಳ ರಾಜಸಾಂಶದಿಂದ ಕರ್ಮೇಂದ್ರಿಯಗಳು ಉಂಟಾಗುತ್ತವೆ. ಯಾವ ಭೂತದ ಅಂಶದಿಂದ ಯಾವ ಇಂದ್ರಿಯ ಉಂಟಾಗುವುದು ಎನ್ನುವದನ್ನು ಇಲ್ಲಿ ತಿಳಿಸಿದ್ದಾರೆ. ಕೆಲವು ಪಾಠಗಳಲ್ಲಿ ಜಲದ ರಾಜಸಾಂಶದಿಂದ ಪಾಯುವೂ, ಪೃಥಿವಿಯ ರಾಜಸಾಂಶದಿಂದ ಉಪಸ್ಥವೂ ಉಂಟಾಗುವುದು ಎಂದು ಹೇಳಿದೆ. ಆದರೆ ಇಲ್ಲಿ ಹೇಳಿರುವ ಕ್ರಮವೇ ಹೆಚ್ಚು ಸಮಂಜಸ ಎನಿಸುತ್ತದೆ.

**ಏತೇಷಾಂ ಪಂಚತತ್ತ್ವಾನಾಂ ಸಮಷ್ಟಿರಾಜಸಾಂಶಾತ್**
**ಪ್ರಾಣಪಂಚಕಂ ಸಂಭೂತಮ್।**

**ಅನುವಾದ :** ಈ ಐದು ತತ್ತ್ವಗಳ ಸಮಷ್ಟಿ ರಾಜಸಾಂಶದಿಂದ ಪ್ರಾಣಪಂಚಕವು ಉಂಟಾಗಿದೆ.

**ವಿವರಣೆ :** ಐದು ಸೂಕ್ಷ್ಮಭೂತಗಳ ರಾಜಸಾಂಶಗಳು ಸೇರಿಕೊಂಡು ಸಮಷ್ಟಿ ರಾಜಸಾಂಶ ಎನಿಸಿಕೊಳ್ಳುತ್ತವೆ. ಈ ಸಮಷ್ಟಿ ರಾಜಸಾಂಶದಿಂದ ಸೂಕ್ಷ್ಮಶರೀರದ ಅವಯವವಾದ ಪ್ರಾಣವು ಉಂಟಾಗುತ್ತದೆ. ಪ್ರಾಣವು ವೃತ್ತಿಗಳ ಭೇದದಿಂದ ಪ್ರಾಣ, ಅಪಾನ, ವ್ಯಾನ, ಉದಾನ ಹಾಗೂ ಸಮಾನ ಎನ್ನುವ ಐದು ಭೇದಗಳನ್ನು ಹೊಂದಿದೆ.

**ಏತೇಷಾಂ ಪಂಚತತ್ತ್ವಾನಾಂ ತಮೋಗುಣಪ್ರಧಾನಾನಾಂ**
**ಪಂಚೀಕರಣೇನ ಪಂಚಮಹಾಭೂತಾನಿ ಭವಂತಿ।**

**ಅನುವಾದ :** ತಮೋಗುಣಪ್ರಧಾನವಾದ ಈ ಐದು ತತ್ತ್ವಗಳ ಪಂಚೀಕರಣದಿಂದ ಐದು ಮಹಾಭೂತಗಳು ಉಂಟಾಗುತ್ತವೆ.

**ವಿವರಣೆ :** ಐದು ಸೂಕ್ಷ್ಮಭೂತಗಳ ತಮೋಗುಣಪ್ರಧಾನವಾದ ಅಂಶಗಳಿಂದ ಐದು ಸ್ಥೂಲಭೂತಗಳು ಉಂಟಾಗುತ್ತವೆ. ನಮ್ಮ ಇಂದ್ರಿಯಕ್ಕೆ ಗೋಚರಿಸುವಂತಹ ಆಕಾಶ ಇತ್ಯಾದಿಗಳನ್ನು ಸ್ಥೂಲಭೂತ ಎನ್ನುವರು. ನಮ್ಮ ಸ್ಥೂಲಶರೀರಗಳು ಹಾಗೂ ಈ ಸ್ಥೂಲಪ್ರಪಂಚ ಸ್ಥೂಲಭೂತಗಳಿಂದಲೇ ನಿರ್ಮಿತವಾಗಿವೆ. ಸೂಕ್ಷ್ಮಭೂತಗಳಿಂದ ಸ್ಥೂಲಭೂತಗಳಾಗುವ ಪ್ರಕ್ರಿಯೆಯನ್ನು ಪಂಚೀಕರಣ ಎನ್ನುವರು.

– ಮುಂದುವರಿಯುವುದು

# ಅಧ್ಯಕ್ಷರ ನುಡಿ





**ಆತ್ಮೀಯ ವಿಪ್ರಬಾಂಧವರಿಗೆ ಯುಗಾದಿ ಹಬ್ಬದ ಶುಭಾಶಯಗಳು.**

ಶುಭಕೃತ್ ನಾಮ ಸಂವತ್ಸರವು ಕಳೆದು ಶೋಭಕೃತ್ ನಾಮ ಸಂವತ್ಸರದ ಸ್ವಾಗತಕ್ಕೆ ನಾವೆಲ್ಲರೂ ಸಜ್ಜಾಗುತ್ತಿದ್ದೇವೆ. ಅದೇ ರೀತಿ ಇನ್ನು ಕೆಲವು ದಿನಗಳಲ್ಲಿ ಪ್ರಜಾಪ್ರಭುತ್ವದ ದೊಡ್ಡ ಹಬ್ಬಕ್ಕೆ ನಾವೆಲ್ಲರೂ ಸಜ್ಜುಗೊಳ್ಳಬೇಕಾಗಿದೆ. ಪ್ರಜಾಪ್ರಭುತ್ವದ ತಳಹದಿಯಲ್ಲಿ ಜಾತಿ-ಮತ, ಪಂಥ ಹೀಗೆ ನಾನಾ ವಿಧದ ಭೇದಗಳನ್ನು ಬದಿಗೊತ್ತಿ ನಮ್ಮ ಪ್ರತಿನಿಧಿಯನ್ನು ಆಯ್ಕೆ ಮಾಡಿಕೊಳ್ಳಬೇಕು. ಇದು ಸಂವಿಧಾನ ಲಿಖಿತ ನಿಯಮ. ಅಭಿವೃದ್ಧಿ, ರಾಷ್ಟ್ರಹಿತ, ಪ್ರಾಮಾಣಿಕತೆ ಇಂತಹ ಮುನ್ನೆಲೆಗೆ ಬರಬೇಕಾದ ವಿಷಯಗಳು ಚುನಾವಣೆಗಳ ವಿಷಯವೇ ಆಗದೆಯಿರುವುದು ಪ್ರಜಾಪ್ರಭುತ್ವದ ಅಣಕವಾಡುವಂತೆ ಕಂಡುಬರುತ್ತಿದೆ. ಇದೆಲ್ಲದರ ಒಟ್ಟಾರೆ ಪರಿಣಾಮವಾಗಿ ಜನಸಾಮಾನ್ಯರಲ್ಲಿ ಅದರಲ್ಲೂ ನಮ್ಮ ಯುವ ಪೀಳಿಗೆಯಲ್ಲಿ ಚುನಾವಣೆಗಳ ಬಗ್ಗೆ ಒಂದು ರೀತಿ ನಿರಾಸಕ್ತಿ ಬೆಳೆದಿರುವುದು ಕಾಣಬಹುದು. ಹಾಗೆಂದು ಭರವಸೆಯನ್ನೇ ಕಳೆದುಕೊಂಡರೆ ಮುಂದೊಂದು ದಿನ ಇದೆಲ್ಲದರ ಪರಿಣಾಮವನ್ನು ನಾವೇ ಅನುಭವಿಸಬೇಕಾಗುತ್ತದೆ. ಆದ್ದರಿಂದ ಚುನಾವಣೆಗಳ ಬಗ್ಗೆ ನಿರಾಸಕ್ತಿ ತೋರದೆ ಹಿಂದೆಂದಿಗಿಂತಲೂ ಸಕ್ರಿಯವಾಗಿ ಚುನಾವಣಾ ಪ್ರಕ್ರಿಯೆಗಳಲ್ಲಿ ಪಾಲ್ಗೊಳ್ಳುವ ಅವಶ್ಯಕತೆ ಇಂದು ನಮ್ಮ ಮೇಲಿದೆ ಎಂದು ಮರೆಯಬಾರದು.

ಈ ನಿಟ್ಟಿನಲ್ಲಿ ನಾವು ಜಾತಿ-ಮತ, ಪಂಥ, ಧರ್ಮ ಮೀರಿ ಚುನಾವಣೆಗಳಲ್ಲಿ ಪಾಲ್ಗೊಳ್ಳಬೇಕಾಗಿದ್ದರೂ ಬದಲಾದ ಸನ್ನಿವೇಶದಲ್ಲಿ ಇವೇ ಅಂಶಗಳು ಚುನಾವಣೆಗಳ ಮಾನದಂಡವಾಗುತ್ತಿರುವುದರಿಂದ ವಿಪ್ರ ಸಮುದಾಯದ ಸೇವಾಕಾಂಕ್ಷಿಗಳು ಚುನಾವಣೆಗಳಲ್ಲಿ ಸ್ಪರ್ಧಿಸುವುದೇ ವಿರಳವಾಗುತ್ತಿದೆ. ಆದ್ದರಿಂದ ಎಲ್ಲೆಲ್ಲಿ ವಿಪ್ರ ಸಮುದಾಯದ ಸೂಕ್ತ, ಸ್ವಚ್ಛ ಹಾಗೂ ಪ್ರಾಮಾಣಿಕ ಅಭ್ಯರ್ಥಿಗಳು ಸ್ಪರ್ಧಿಸುತ್ತಿದ್ದಾರೋ ಅವರೆಲ್ಲರಿಗೂ ವಿಪ್ರ ಸಮಯದಾಯವು ಒಕ್ಕೊರಲಿನಿಂದ ಗೆಲ್ಲಿಸಬೇಕು. ಸಮುದಾಯದ ಅಭ್ಯರ್ಥಿಗಳಿಲ್ಲದ ಕ್ಷೇತ್ರಗಳಲ್ಲಿ ಬ್ರಾಹ್ಮಣ ಸಮಾಜವನ್ನು ಗೌರವಿಸುವ ಹಾಗೂ ಬೆಂಬಲಿಸುವ ಅಭ್ಯರ್ಥಿಗಳನ್ನು ಪರಿಗಣಿಸಬಹುದಾಗಿದೆ. ಆ ಮೂಲಕ ನಮ್ಮ ಸಮುದಾಯದ ಹಾಗೂ ಪ್ರತಿನಿಧಿಸುವ ಕ್ಷೇತ್ರದ ಕೂಗು ವಿಧಾನಸೌಧದವರೆಗೂ ಕೇಳಿಸುವಂತಾಗಬೇಕು.

ಇವಿಷ್ಟು ಸಾರ್ವತ್ರಿಕ ಚುನಾವಣೆಯ ವಿಷಯವಾದರೆ ಅದೇಕೋ ಯುವ ಜನತೆ ಸಂಘ ಶಕ್ತಿಯಲ್ಲೂ ನಂಬಿಕೆಯನ್ನು ಕಳೆದುಕೊಂಡವರಂತೆ ಭಾಸವಾಗುತ್ತದೆ. ಅದರಲ್ಲೂ ಬೆಂಗಳೂರಿನಂತಹ ಮಹಾನಗರದಲ್ಲಿ ಈ ಸಮಸ್ಯೆ ಹೆಚ್ಚಾಗಿ ಕಂಡುಬರುತ್ತಿದೆ. ಇದೆಲ್ಲ ಸವಾಲುಗಳನ್ನು ಮೆಟ್ಟಿ ನಿಲ್ಲಲು ಮಹಾಸಭಾಗೆ ಆಯ್ಕೆಯಾದ ಕೆಲವು ತಿಂಗಳಿನಲ್ಲಿ ಯುವ ವಿಭಾಗ ಹಾಗೂ ಮಹಿಳಾ ವಿಭಾಗಕ್ಕೆ ಚಾಲನೆ ನೀಡಿದರೂ ಆಯಾ ವಿಭಾಗಗಳಲ್ಲಿ ಸಮಾಜ ಭಾಂದವರ ಪಾಲ್ಗೊಳ್ಳುವಿಕೆ ಅಷ್ಟೊಂದು ಸಮಾಧಾನಕರವಾಗಿಲ್ಲ. ಬಹುಶಃ ಮುಂಬರುವ ಹೊಸ ವರುಷದಲ್ಲಿ ಈ ಗ್ರಹಿಕೆಯನ್ನು ಸುಳ್ಳು ಮಾಡಿ ಹೆಚ್ಚಿನ ಸಂಖ್ಯೆಯಲ್ಲಿ ಯುವಕರು, ಮಹಿಳೆಯರು ಮಹಾಸಭೆಯ ಕಾರ್ಯಕ್ರಮಗಳಲ್ಲಿ ತೊಡಗಿಕೊಳ್ಳುತ್ತೀರೆಂದು ಭಾವಿಸುತ್ತೇನೆ.

ಇತ್ತೀಚೆಗೆ ವಿದ್ಯಾವಾಸಿನಿ ವಿಪ್ರ ಮಹಿಳಾ ವಸತಿ ನಿಲಯದಲ್ಲಿ ಡಾ. ಬಿ.ಎನ್.ವಿ. ಸುಬ್ರಹ್ಮಣ್ಯ ಅವರ ಪುತ್ಥಳಿ ಅನಾವರಣಗೊಳಿಸಲಾಗಿದೆ. ಅವರು ಮಾಡಿದ ಅನನ್ಯ ಕಾರ್ಯಗಳಿಗೆ ಮಹಾಸಭೆ ಏನು ಮಾಡಿದರೂ ಕಡಿಮೆಯೇ. ಆದರೆ ಪುತ್ಥಳಿ ಅನಾವರಣ ಮಾಡುವ ಮೂಲಕ ಅವರೇ ಮುತುವರ್ಜಿಯಿಂದ ಕಟ್ಟಿ ಬೆಳೆಸಿದ ವಸತಿ ನಿಲಯದಲ್ಲಿ ಅವರ ಪುತ್ಥಳಿಯನ್ನು ಸ್ಥಾಪಿಸಿ ಅವರಿಗೆ ಮಹಾಸಭೆ ಗೌರವವನ್ನು ಕೊಡುವ ಪ್ರಯತ್ನ ಮಾಡಿದೆ.

ಅದೇ ರೀತಿ ಮಹಾಸಭಾದ ಮೊದಲ ಅಧ್ಯಕ್ಷರಾದ ದಿ॥ ಡಾ. ಮಾಸ್ಟರ್ ಹಿರಣ್ಣಯನವರ ಸ್ಮರಣೆಯಲ್ಲಿ "ನಗೆ ಹಬ್ಬ" ವನ್ನು ಇದೇ ಬರುವ ಮಾರ್ಚ್ 23ರಂದು ಎನ್.ಆರ್. ಕಾಲೋನಿಯ ಪತ್ತಿ ಸಭಾಂಗಣದಲ್ಲಿ (ಶ್ರೀರಾಮ ಮಂದಿರ) ಸಂಜೆ 5.30ಕ್ಕೆ ಅಯೋಜಿಸಲಾಗಿದೆ. ಈ ಸಂದರ್ಭದಲ್ಲಿ ಹಿರಿಯ ಸಾಹಿತಿ ಹಾಗೂ ಹಾಸ್ಯ ಪ್ರವೀಣರಾದ ಶ್ರೀ ಅ.ರಾ.ಮಿತ್ರರನ್ನು ಗೌರವಿಸುವ ಕಾರ್ಯಕ್ರಮವೂ ಇದೆ. ತಾವೆಲ್ಲರೂ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ನಿಮ್ಮಲ್ಲಿ ಪ್ರಾರ್ಥನೆ.

ದಿನಾಂಕ 26.03.2023ರಂದು ಎನ್.ಆರ್. ಕಾಲೋನಿಯ ಆಚಾರ್ಯ ಪಾಠಶಾಲಾ ಕಾಲೇಜ್ ಸಭಾಂಗಣದಲ್ಲಿ 41ನೇ ವಾರ್ಷಿಕ ಸರ್ವಸದಸ್ಯರ ಸಭೆ ಕರೆಯಲಾಗಿದೆ. ತಾವೆಲ್ಲರೂ ಈ ಸಭೆಗೆ ಹಾಜರಾಗಿ ಮಹಾಸಭಾ ಹಮ್ಮಿಕೊಳ್ಳಲುದ್ದೇಶಿಸಿರುವ ಯೋಜನೆಗಳೊಂದಿಗೆ ಕೈಜೋಡಿಸಬೇಕೆಂದು ನಿಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಮುಂದಿನ ಸಂಚಿಕೆಯಲ್ಲಿ ಇನ್ನಷ್ಟು ವಿವರಗಳೊಂದಿಗೆ ಭೇಟಿಯಾಗೋಣ.

**ಅಶೋಕ ಹಾರನಹಳ್ಳಿ**
ಮಹಾಸಭಾಧ್ಯಕ್ಷರು.

# ಸಂಪಾದಕೀಯ

**ಆತ್ಮೀಯ ವಿಪ್ರಬಂಧುಗಳೇ,**

ಮಾರ್ಚ್ 8, ಅಂತಾರಾಷ್ಟ್ರೀಯ ಮಹಿಳ ದಿನಾಚರಣೆ, ಜಗತ್ತಿನಾದ್ಯಂತ ಮಹಿಳೆಯರು ಈ ದಿನವನ್ನು ಅತ್ಯಂತ ಸಂಭ್ರಮದಿಂದ ಆಚರಿಸುತ್ತಾರೆ. ಮಹಿಳೆಗೆ ನಮ್ಮ ವೈದಿಕ ಒರಂಪರೆಯಲ್ಲಿ ಮಹತ್ವದ ಸ್ಥಾನವನ್ನು ನೀಡಲಾಗಿದೆ.

ಕೆಳವರ್ಗದವರು ಸಾಧಾರಣವಾಗಿ ಸ್ತ್ರೀಯರು ವೇದಾಧ್ಯಯನವನ್ನು ಕೈಗೊಳ್ಳಬಾರದು ಎಂಬ ವೈದಿಕೋಕ್ತಿಯನ್ನು ಉದ್ಧರಿಸುತ್ತಾ ಎಲ್ಲೆಡೆಯೂ ಸಾರ್ವಜನಿಕ ತಪ್ಪುಭಾವನೆ ಹರಡುವಂತೆ ಆಗಿದೆ. ಇದಕ್ಕೆ ತದ್ವಿರುದ್ಧವಾಗಿ ವೇದಾಧ್ಯಯನವನ್ನು ಯಾರು ಬೇಕಾದರೂ ಕೈಗೊಳ್ಳಬಹುದು ಎಂಬ ಯಜುರ್ವೇದದ ವಾಕ್ಯವಿದೆ.

ಅಪಸ್ತಂಭ ಧರ್ಮಸೂತ್ರದಲ್ಲಿ ಪ್ರಸ್ತಾಪಿಸಿದಂತೆ ಧರ್ಮಪರಿಪಾಲನೆಯಿಂದ ಕೆಳವರ್ಣದವರು ಮೇಲ್ವರ್ಗಕ್ಕೆ ಅರ್ಹರಾದರೆ, ಅಧರ್ಮ ಮಾಗದಲ್ಲಿ ನಡೆಯುವ ಜನರು ಶೂದ್ರರಾಗುತ್ತಾರೆ ಎಂಬ ಮಾತಿದೆ. **"**ಜನ್ಮನಾ ಜಾಯತೇ ಶೂದ್ರಃ ಕರ್ಮಣಾ ಜಾಯತೇ ದ್ವಿಜಃ**"** ಎಂಬ ಗೀತಾಚಾರ್ಯನ ವಾಕ್ಯ ತಮಗೆಲ್ಲರಿಗೂ ಸುವಿದಿತ.

ವೇದಕಾಲದ ಸ್ತ್ರೀಯರು ವೇದವಿಶಾರದೆಯರಾಗಿದ್ದರು. ಪುರುಷರಷ್ಟೇ ಸ್ವತಂತ್ರವಾಗಿ ವೇದಪಠನ-ಪಾಠನಗಳಲ್ಲಿ ತೊಡಗಿದ್ದರು. ವೃದ್ಧಹಾರೀತ ಸ್ಮೃತಿಯು ತಿಳಿಸಿರುವಂತೆ ಹೆಂಗಸರಲ್ಲಿ ಬ್ರಹ್ಮವಾದಿನಿ ಮತ್ತು ಸದ್ಯೋವಧು ಎಂಬ ಎರಡು ಭೇದಗಳಿದ್ದು, ಬ್ರಹ್ಮವಾದಿನಿಯರಿಗೆ ಉಪನಯನ, ಅಗ್ನಿಕಾರ್ಯ, ವೇದಾಭ್ಯಾಸ, ಭಿಕ್ಷೆ ನಿಗದಿಪಡಿಸಲ್ಪಟ್ಟಿದ್ದರೆ, ಸದ್ಯೋವಧು ಮದುವೆಗೆ ಮೊದಲು ಉಪನಯನವನ್ನು ಮಾಡಿಕೊಳ್ಳಬಹುದಾಗಿತ್ತು. ವೇದಸ್ತ್ರೀಯರಲ್ಲಿ ಅತ್ಯಂತ ಪ್ರಮುಖರಾದವರು ಸರಸ್ವತೀ, ಘೋಷಾ, ವಿಶ್ವವರಾ, ಅಪಾಲಾ, ಇಂದ್ರಾಣಿ ಮುಂತಾದವರು. ಶಾಂಡಿಲ್ಯ ಮುನಿಯ ಮಗಳು ಧೃತವತೀ, ಭಾರದ್ವಾಜರ ಮಗಳು ಶ್ರುತವತೀ ತಮ್ಮ ಇಡೀ ಜೀವನವನ್ನು ವೇದಾಭ್ಯಾಸದಲ್ಲಿ ಕಳೆದರೆಂಬ ಬಗ್ಗೆ ಪ್ರಸ್ತಾಪವಿದೆ.

ಯಾಜ್ಞವಲ್ಕ್ಯರ ಪತ್ನಿಯರಾದ ಗಾರ್ಗೀ, ಮೈತ್ರೇಯಿ, ವಿಖ್ಯಾತ ವೇದವಿದ್ವಾಂಸೆಯರು. ಇಂತಹವರಿಗೆ ಋಷಿಕಾ ಎಂಬ ಇನ್ನೊಂದು ಉಪನಾಮವಿತ್ತು.

ವೈದಿಕ ಜನರಿಗೆ ಸಾಂಘಿಕ ಜೀವನ ಬಹಳ ಪ್ರಮುಖವಾಗಿತ್ತು. ಅದರ ಕೇಂದ್ರವೆಂದರೆ ಸಾಮರಸ್ಯದಿಂದ ಕೂಡಿದ ಕುಟುಂಬ. ಕೌಟುಂಬಿಕ ಆಧಾರದ ಮೇಲೆಯೇ ಸಮಾಜದ ಕಟ್ಟಳೆ ನಿರ್ಮಾಣವಾಗಿತ್ತು. ಪಿತೃಪ್ರಧಾನ ವ್ಯವಸ್ಥೆ ಜಾರಿಯಲ್ಲಿತ್ತು. ಮದುವೆ ಬಹಳ ಪವಿತ್ರ ಹಾಗೂ ಮುಖ್ಯವಾದ ಸಾಮಾಜಿಕ ಅಂಗವಾಗಿತ್ತು. ಗಂಡ ಹೆಂಡಿರ ಸೂಕ್ಷ್ಮ ಸಂಬಂಧವನ್ನು ವರ್ಣಿಸುವ ಹಲವಾರು ಸೂಕ್ತಗಳನ್ನು ಋಗ್ವೇದದಲ್ಲಿ ಕಾಣಬಹುದು. ಆಗತಾನೇ ವಿವಾಹವಾದ ವಧುವನ್ನು ಪುರೋಹಿತರು ಹೀಗೆ ಹರಸುತ್ತಾರೆ :

**ಸಮ್ರಾಜ್ಞೀ ಶ್ವಶುರೇಭವ ಸಮ್ರಾಜ್ಞೀ ಶ್ವಶ್ರಾಭವ ।**
**ನನಾಂದರಿ ಸಮ್ರಾಜ್ಞೀ ಭವ ಸಮ್ರಾಜ್ಞೀ ಅಧಿ ದೇವೃಷು ।**

'ನಿನ್ನ ಅತ್ತೆ-ಮಾವಂದಿರಿಗೆ, ಅತ್ತಿಗೆ-ನಾದಿನಿಯರಿಗೆ, ಭಾವ-ಮೈದುನರಿಗೆ ಮಹಾರಾಣಿಯಂತಿರು.**"**

ತಾನು ಮೆಚ್ಚಿ ಮದುವೆಯಾದ ಹೆಣ್ಣು ಜೀವನಪರ್ಯಂತ ಬಾಳಗೆಳತಿಯಾಗಿರಬೇಕು ಎಂಬುದು ಗಂಡನ ಅಪೇಕ್ಷೆ. ಹೀಗಾಗಿ ಪಾಣಿಗ್ರಹಣ ಸಂದರ್ಭದಲ್ಲಿ ವರನು ಹೀಗೆ ಉಚ್ಚರಿಸುತ್ತಾನೆ.

**ಗೃಹ್ಣಾಮಿ ತೇ ಸೌಭಗತ್ವಾಯ ಹಸ್ತಂ ಮಯಾ ಪತ್ಯಾಜರದಷ್ಟಿರ್ಯಥಾಸಃ।**
**ಭಗೋ ಆರ್ಯಮಾ ಸವಿತಾ ಪುರಂಧ್ರಿರ್ಮಹ್ಯಂ**
**ತ್ವಾದುರ್ಗಾರ್ಹಪತ್ಯಾಯ ದೇವಾಃ । (ಋಗ್ವೇದ)**

**"**ನನ್ನ ಸೌಭಾಗ್ಯಕ್ಕೋಸ್ಕರ ನಿನ್ನ ಕೈಹಿಡಿದಿದ್ದೇನೆ. ನನ್ನೊಂದಿಗೆ ವೃದ್ಧಾಪ್ಯದವರೆಗೂ ನೀನು ಸಹಚರಿಯಾಗಿರು. ಭಗ, ಆರ್ಯಮ, ಸೂರ್ಯ ಮುಂತಾದ ದೇವತೆಗಳು ನಿನ್ನನ್ನು ನನ್ನ ಗೃಹಸ್ಥ ಧರ್ಮಪರಿಪಾಲನೆಗೆ ನೀಡಿದ್ದಾರೆ.**"**

ವೈದಿಕ ಜನರು ಏಕಪತ್ನೀವ್ರತಸ್ಥರಾಗಿದ್ದು ಗಂಡುಹೆಣ್ಣಿನ ಸಂಬಂಧ ಚಿರಕಾಲವಿದ್ದು ಅವಳು ಪೂರ್ಣಾಯಸ್ಸು ಬದುಕಿ ಮಕ್ಕಳು, ಮೊಮ್ಮಕ್ಕಳನ್ನು ಹೊಂದಿ, ಸಂತೋಷಿಸಲಿ ಎಂದು ಹರಸುತ್ತಿದ್ದರು. **(ಕ್ರೀಣಂತೋ ಪುತ್ರೈರ್ನಪ್ತೃಭಿಃ ಮೋದಮಾನೌ ಸ್ವೇ ಗೃಹೇ 85.42).**

ಆಧುನಿಕ ವಿಜ್ಞನ-ತಂತ್ರಜ್ಞಾನದ ಫಲವಾಗಿ ಇಂದು ಅವಿಭಕ್ತ ಕೌಟಂಬಿಕ ವ್ಯವಸ್ಥೆ ಕುಸಿದು ಬಿದ್ದು, ಮಕ್ಕಳನ್ನು ತೊರೆದು ದಂಪತಿಗಳು ವಾಸಿಸುವ ಪರಿಸ್ಥಿತಿ ಎದುರಾಗುತ್ತಿದೆ. ಇದಕ್ಕೆ ವ್ಯತಿರಿಕ್ತವಾಗಿ ವೇದಕಲದಲ್ಲಿ ಅವಿಭಕ್ತ ಕುಟುಂಬ ವ್ಯವಸ್ಥೆಯಿದ್ದು ಯುವತಿಯರು ತಮಗಿಷ್ಟಬಂದ ಹುಡುಗನನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವಿತ್ತು. **(ಕತರೋಮೇನಿಂ ಪ್ರತಿ ತಂ ಮುಚಾತೇ ಯ ವಹಾತೇ ಯ ಈಂ ವಾವರೇಯಾತ್ । (ಋ 27.12)** ವಿವಾಹವು ಅತ್ಯಂತ ಪವಿತ್ರ ಬಂಧನವಾದ್ದರಿಂದ ವಿಧವ ವಿವಾಹದ ಬಗ್ಗೆ ಅಷ್ಟೊಂದು ಒಮ್ಮತವಿರಲಿಲ್ಲ. ಆದರೂ ಕೆಲವು ವಿಶೇಷ ಅನಿವಾರ್ಯ ಸಂದರ್ಭಗಳಲ್ಲಿ ಅವಳು ತನ್ನ ಮೈದುನನ್ನು ಮದುವೆಯಾಬಹುದಾಗಿತ್ತು. ಹೀಗೆ ಸ್ತ್ರೀಯರಿಗೆ ಉಜ್ವಲ ಸ್ಥಾನವನ್ನು ನೀಡಿರುವ ವೇದಗಳು ಪಠನಾರ್ಹ.

ಬಹಳ ಕಾಲದಿಂದಲೂ ವಿಪ್ರ ಮಹಿಳೆಯರು ಹಲವಾರು ಸಾಮಾಜಿಕ, ಸಾಹಿತ್ಯಕ, ದೇಶಕಟ್ಟುವ ಕೆಲಸಗಳಲ್ಲಿ ಮುಂದಿದ್ದಾರೆ. ಮನೆ-ಕಛೇರಿ, ಗೃಹಿಣಿ ಉದ್ಯೋಗ ಕೆಲಸಗಳನ್ನು ಒಟ್ಟಿಗೆ ಸಮರ್ಥವಾಗಿ ನಿರ್ವಹಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಹೊಸದಾಗಿ ರೂಪುಗೊಂಡಿರುವ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮಹಿಳಾ ಸಂಘವು ಸನ್ಮಾನ್ಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರ ಮಾರ್ಗದರ್ಶನದಲ್ಲಿ ಹಲವಾರು ಚಟುವಟಿಕೆಗಳನ್ನು ಹಮ್ಮಿಕೊಂಡು ಕಾರ್ಯಪ್ರವೃತ್ತವಾಗಿದೆ. ಇದಕ್ಕೆ ಮಹಿಳಾ ಪದಾಧಿಕಾರಿಗಳಿಗೆ ಹಾರ್ದಿಕ ಅಭಿನಂದನೆಗಳು. ಮುಂಬರುವ ದಿನಗಳಲ್ಲಿ ವಿಪ್ರಸ್ತ್ರೀ ಶಕ್ತಿ ಜಾಗೃತವಾಗಿ ಸರ್ವತೋಮುಖ ಬೆಳವಣಿಗೆ ಉಂಟಾಗಲಿ ಎಂದು ನಮ್ಮೆಲ್ಲರ ಹಾರೈಕೆ.

ತಮ್ಮ ವಿಶ್ವಾಸಿ,
**ಪ್ರೊ. ಎಂ.ಕೆ. ಶ್ರೀಧರ್**
ಪ್ರಧಾನ ಸಂಪಾದಕರು

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)

ಬನಶಂಕರಿ 2ನೇ ಹಂತ, ಬೆಂಗಳೂರು–560070.

# ಮೆಗಾ ಉಚಿತ ಆರೋಗ್ಯ ಶಿಬಿರ

| | | |
|---|---|---|
| ದಿನಾಂಕ | : | **01.04.2023, ಶನಿವಾರ** |
| ಶಿಬಿರದ ಸಮಯ | : | **ಬೆಳಿಗ್ಗೆ 10.00 ರಿಂದ ಅಪರಾಹ್ನ 4.00 ರವರೆಗೆ** |
| ಸ್ಥಳ | : | ಗಾಯತ್ರಿ ಭವನ<br>ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಕೇಂದ್ರ ಕಛೇರಿ, ಬೆಂಗಳೂರು |
| ಹೃದಯ ತಪಾಸಣೆ | : | ನಾರಾಯಣ ಹೃದಯಾಲಯ ವೈದ್ಯರಿಂದ |
| ಪ್ರಾಥಮಿಕ ಕಣ್ಣಿನ ಪರೀಕ್ಷೆ | : | ಶೇಖರ್ ಐ ಹಾಸ್ಪಿಟಲ್, ಜೆ.ಪಿ.ನಗರ, ಬೆಂಗಳೂರು |
| ಫಿಸಿಯೋಥರಪಿ ಸಲಹೆ | : | ರಾಯರ ಕಿರಣ<br>ಫಿಸಿಯೋಥರಪಿ ಮತ್ತು ರೀಹ್ಯಾಬ್ ಸೆಂಟರ್, ಬೆಂಗಳೂರು. |
| ಮೂಳೆಗಳ ಸಮಸ್ಯೆಗಳಿಗೆ ಸಲಹೆ | : | ಯುನೈಟೆಡ್ ಆಸ್ಪತ್ರೆ, ಜಯನಗರ, ಬೆಂಗಳೂರು |
| ರಕ್ತನಾಳ ಸಮಸ್ಯೆಗಳು<br>(ವೆರಿಕೋಸ್ ವೇನ್ಸ್) ಸಮಸ್ಯೆಗೆ ಸಲಹೆ | : | ಡಾ॥ ಮುರಳೀಧರ್<br>ವ್ಯಾಸ್ಕುಲಾರ್ ಸರ್ಜನ್, ಅಧ್ಯಕ್ಷರು, ವಿಪ್ರ ವೈದ್ಯ ವೇದಿಕೆ, ಬೆಂಗಳೂರು. |
| ಸ್ತ್ರೀ ರೋಗ (ಗೈನಕಾಲಜಿ) ಸಲಹೆ | : | ಡಾ॥ ಚಂದ್ರಿಕಾ |
| ಮೂತ್ರ ರೋಗ (ಯೂರಾಲಜಿ)<br>ಸಮಸ್ಯೆ ಸಲಹೆ | : | ಡಾ॥ ಸೂರಜ್ |

**ಹಿರಿಯ ನಾಗರಿಕರಿಗೆ ಪ್ರಾಮುಖ್ಯತೆ. ಮೊದಲು ಬಂದವರಿಗೆ ಆದ್ಯತೆ, (ಊಟ/ಉಪಹಾರ ವ್ಯವಸ್ಥೆ ಇರುವುದಿಲ್ಲ).**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :**

ಶ್ರೀ ವೆಂಕಟೇಶ್ ದ್ವಾರಕಾನಾಥ್, ಮೊಬೈಲ್ : 9845038669

## ಆರೋಗ್ಯ ತಪಾಸಣೆ ರಿಯಾಯಿತಿ ಹೆಲ್ತ್ ಕಾರ್ಡ್



ಮಣಿಪಾಲ್ ಆಸ್ಪತ್ರೆಯಿಂದ ಮಹಾಸಭಾ ಸದಸ್ಯರುಗಳಿಗೆ ನೀಡಿದ ಹೆಲ್ತ್ ಕಾರ್ಡ್ ಅನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಮತ್ತು ಶ್ರೀ ಕ್ಷೇತ್ರ ಹೊರನಾಡಿನ ಧರ್ಮಕರ್ತರಾದ ಶ್ರೀ ಭೀಮೇಶ್ವರ ಜೋಶಿಯವರು ವಿತರಣೆ ಮಾಡಿದರು. ಮಣಿಪಾಲ್ ಹಾಸ್ಪಿಟಲ್‌ನಲ್ಲಿ ತಪಾಸಣೆ ಹೊಂಲು ಬಯಸುವ ವಿಪ್ರಬಂಧುಗಳು ಕಾರ್ಡಿನ ಪ್ರಯೋಜನ ಪಡೆದು ಹೊರರೋಗಿ ತಪಾಸಣೆ, ಪರೀಕ್ಷೆಗಳಲ್ಲಿ ರಿಯಾಯಿತಿ ಪಡೆಯಬಹುದಾಗಿದೆ.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)

ಗಾಯತ್ರೀ ಭವನ, ನಂ. 3070, ಗಾಯತ್ರೀ ಭವನ ರಸ್ತೆ,
9ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-560 070.
ದೂರವಾಣಿ : 9945840620, 080-26771695, 26770066
E-mail : info@akbms.com
akbms.org@gmail.com www.akbms.com

# ವಿಶೇಷ ಸರ್ವಸದಸ್ಯರ ಸಭೆ

ದಿನಾಂಕ 26.03.2023ರ ಭಾನುವಾರ
ಬೆಳಿಗ್ಗೆ 9.30 ಘಂಟೆಗೆ

# 41ನೇ
# ವಾರ್ಷಿಕ ಸರ್ವಸದಸ್ಯರ ಸಭೆ

ದಿನಾಂಕ 26.03.2023ರ ಭಾನುವಾರ
ಬೆಳಿಗ್ಗೆ 11.30 ಘಂಟೆಗೆ

ಸಭೆ ಜರುಗಲಿರುವ ಸ್ಥಳ
**ಆಚಾರ್ಯ ಪಾಠಶಾಲಾ ಕಾಲೇಜ್ ಸಭಾಂಗಣ**
ಎನ್.ಆರ್. ಕಾಲೋನಿ
ಬಸವನಗುಡಿ, ಬೆಂಗಳೂರು-560019.

1

---

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)

ಗಾಯತ್ರೀ ಭವನ, ನಂ. 3070, ಗಾಯತ್ರೀ ಭವನ ರಸ್ತೆ,
9ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-560 070.
ದೂರವಾಣಿ : 9945840620, 080-26771695, 26770066

## ವಿಶೇಷ ಸರ್ವಸದಸ್ಯರ ಸಭೆ ತಿಳುವಳಿಕೆ ಪತ್ರ

ಮಾನ್ಯ ಸದಸ್ಯರೇ,

ಮಹಾಸಭೆಯ ವಿಶೇಷ ಸರ್ವಸದಸ್ಯರ ಸಭೆಯನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರ ಅಧ್ಯಕ್ಷತೆಯಲ್ಲಿ ದಿನಾಂಕ 26.03.2023ರ ಭಾನುವಾರ ಬೆಳಿಗ್ಗೆ 9.30 ಗಂಟೆಗೆ ಕರೆಯಲಾಗಿದೆ. ತಾವು ತಪ್ಪದೇ ಆಗಮಿಸಬೇಕಾಗಿ ಕೋರುತ್ತೇನೆ.

ಸಭೆ ಜರುಗಲಿರುವ ಸ್ಥಳ :
**ಆಚಾರ್ಯ ಪಾಠಶಾಲಾ ಕಾಲೇಜ್ ಸಭಾಂಗಣ**
ಎನ್.ಆರ್. ಕಾಲೋನಿ, ಬಸವನಗುಡಿ, ಬೆಂಗಳೂರು-560019.

### ಕಾರ್ಯಸೂಚಿ

1. ದೇವತಾ ಪ್ರಾರ್ಥನೆ
2. ಸ್ವಾಗತ
3. ಮಹಾಸಭೆಯ ಬೈಲಾ ಮತ್ತು ಮೆಮೊರಂಡಂಗಳಿಗೆ ತಿದ್ದುಪಡಿಗಳ ಮಂಡನೆ. ಚರ್ಚೆ. ಅನುಮೋದನೆ
4. ಅಧ್ಯಕ್ಷರ ಭಾಷಣ
5. ವಂದನಾರ್ಪಣೆ

ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ
ಸಹಿ/-
ಎಸ್. ಶ್ರೀಧರಮೂರ್ತಿ
ಪ್ರಧಾನ ಕಾರ್ಯದರ್ಶಿ

ದಿನಾಂಕ : 01.03.2023
ಬೆಂಗಳೂರು

**ಮಾನ್ಯ ಸದಸ್ಯರಿಗೆ ವಿಶೇಷ ಸೂಚನೆ**

ಬೈಲಾ ತಿದ್ದುಪಡಿಯ ಪ್ರತಿಗಳನ್ನು ಮಾನ್ಯ ಸದಸ್ಯರು ದಯಮಾಡಿ ಮಹಾಸಭಾ ಕಾರ್ಯಾಲಯದಲ್ಲಿ ಪಡೆಯಬೇಕಾಗಿ ಪ್ರಾರ್ಥನೆ. ಈ ಪ್ರತಿಗಳನ್ನು 2023ನೇ ಮಾರ್ಚ್ 15 ರಿಂದ ಪಡೆಯಬಹುದು. ಸರ್ವಸದಸ್ಯರ ಸಭೆಗೆ ಆಗಮಿಸುವ ಸದಸ್ಯರಿಗೆ ಸ್ಥಳದಲ್ಲಿಯೇ ಪ್ರತಿಗಳನ್ನು ನೀಡಲಾಗುವುದು. ಮಾನ್ಯ ಸದಸ್ಯರು ದಯಮಾಡಿ ಸಹಕರಿಸಬೇಕಾಗಿ ವಿನಂತಿ. ಉದ್ದೇಶಿಸಿರುವ ಬೈಲಾ ತಿದ್ದುಪಡಿಯ ಪ್ರಮುಖ ಅಂಶಗಳ ವಿವರವನ್ನು ಇದರೊಂದಿಗೆ ಲಗತ್ತಿಸಲಾಗಿದೆ.

2

---

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)

ಗಾಯತ್ರೀ ಭವನ, ನಂ. 3070, ಗಾಯತ್ರೀ ಭವನ ರಸ್ತೆ,
9ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-560 070.

## 41ನೇ ವಾರ್ಷಿಕ ಸರ್ವಸದಸ್ಯರ ಸಭೆ ತಿಳುವಳಿಕೆ ಪತ್ರ

ಮಾನ್ಯ ಸದಸ್ಯರೇ,

ಮಹಾಸಭೆಯ 41ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರ ಅಧ್ಯಕ್ಷತೆಯಲ್ಲಿ ದಿನಾಂಕ 26.03.2023ನೇ ಭಾನುವಾರ ಬೆಳಿಗ್ಗೆ 11.30 ಘಂಟೆಗೆ ಕರೆಯಲಾಗಿದೆ. ಮಾನ್ಯ ಸದಸ್ಯರು ಸಭೆಗೆ ಹಾಜರಾಗಿ ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ನಡೆಸಿಕೊಡಬೇಕಾಗಿ ಪ್ರಾರ್ಥನೆ.

ಸಭೆ ಜರುಗಲಿರುವ ಸ್ಥಳ :
**ಆಚಾರ್ಯ ಪಾಠಶಾಲಾ ಕಾಲೇಜ್ ಸಭಾಂಗಣ**
ಎನ್.ಆರ್. ಕಾಲೋನಿ, ಬಸವನಗುಡಿ, ಬೆಂಗಳೂರು-560019.

### ವಿಷಯಸೂಚಿ

1. ವೇದಘೋಷ
2. ಪ್ರಾರ್ಥನೆ
3. ಸ್ವಾಗತ
4. ಸರ್ವಸದಸ್ಯರ ಸಭೆಯ ಸೂಚನಾ ಪ್ರಕಟಣೆಯನ್ನು ಓದಿ ದಾಖಲು ಮಾಡುವುದು
5. ಶ್ರದ್ಧಾಂಜಲಿ
6. ಕಳೆದ ಸರ್ವಸದಸ್ಯರ ಸಭೆಯ ಬಗ್ಗೆ ವರದಿ ದೃಢೀಕರಿಸುವುದು
7. 2022-2023ನೇ ಸಾಲಿನ ಕಾರ್ಯನಿರ್ವಾಹಕ ಮಂಡಳಿಯ ವರದಿ ಮಂಡನೆ, ಪರಿಶೀಲನೆ ಮತ್ತು ಅನುಮೋದನೆ
8. 2022 ರಿಂದ 2023ರವರೆಗಿನ ಆಡಿಟ್ ಆದ ಲೆಕ್ಕಪತ್ರಗಳ ಮಂಡನೆ, ಪರಿಶೀಲನೆ ಮತ್ತು ಅನುಮೋದನೆ.
9. 2023-2024ನೇ ಸಾಲಿನ ಮುಂಗಡ ಪತ್ರದ ಮಂಡನೆ, ಪರಿಶೀಲನೆ ಮತ್ತು ಅನುಮೋದನೆ
10. ದಿನಾಂಕ 26.03.2023ರಂದು ಬೆಳಿಗ್ಗೆ ಜರುಗಿದ ವಿಶೇಷ ಸರ್ವಸದಸ್ಯರ ಸಭೆಯು ಅಂಗೀಕರಿಸಿದ ಬೈಲಾ ತಿದ್ದುಪಡಿ ಮಂಡನೆ ಮತ್ತು ದೃಢೀಕರಿಸುವುದು
11. ಮುಂದಿನ ಸಾಲಿಗೆ ಲೆಕ್ಕಪರಿಶೋಧಕರ ಆಯ್ಕೆ
12. ಸಪ್ತರ್ಷಿ ಫೌಂಡೇಶನ್ ಬಗ್ಗೆ ಸಂಕ್ಷಿಪ್ತ ವರದಿ
13. ಸದಸ್ಯರಿಂದ ಸಲಹೆ, ಸೂಚನೆಗಳು-ಅಧ್ಯಕ್ಷರ ಅಪ್ಪಣೆಯ ಮೇರೆಗೆ
14. ಅಧ್ಯಕ್ಷರ ಭಾಷಣ
15. ವಂದನಾರ್ಪಣೆ

ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ
ಸಹಿ/-
ಎಸ್. ಶ್ರೀಧರಮೂರ್ತಿ
ಪ್ರಧಾನ ಕಾರ್ಯದರ್ಶಿ

ದಿನಾಂಕ : 01.03.2023
ಬೆಂಗಳೂರು

3

ಸೂಚನೆ : ಸರ್ವಸದಸ್ಯರ ಸಭೆಯ ದಿನಾಂಕದಂದು
ಬೆಳಗ್ಗೆ 8.00 ರಿಂದ 10.00 ಗಂಟೆಯವರೆಗೆ ಉಪಹಾರ
ಮಧ್ಯಾಹ್ನ ಕ್ಕೆ ಊಟ – 12.30ರ ನಂತರ

**ಸೂಚನೆ**

1. ಮಹಾಸಭೆಯ ಸರ್ವಸದಸ್ಯರ ಸಭೆಯ ಪ್ರವೇಶಕ್ಕೆ ಮಾನ್ಯ ಸದಸ್ಯರು ದಯಮಾಡಿ ತಮ್ಮ ಮಹಾಸಭಾ ಸದಸ್ಯತ್ವ ಸಂಖ್ಯೆ ತಿಳಿಸಿ. ಫೋಟೋ ಒಳಗೊಂಡ ID ಯನ್ನು ಖಡ್ಡಾಯವಾಗಿ ತೋರಿಸಬೇಕು. (ಮಹಾಸಭೆಯ ಗುರುತಿನ ಚೀಟಿ, ಆಧಾರ ಕಾರ್ಡ್, PAN CARD, DL.... ಇತ್ಯಾದಿ)
2. ಮಾನ್ಯ ಸದಸ್ಯರು ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಬೇಕಾಗಿ ವಿನಂತಿ.
3. ಸಭೆಯಲ್ಲಿ ಚರ್ಚೆಗಾಗಿ ವಿಷಯಗಳೇನಾದರೂ ಇದ್ದಲ್ಲಿ ಅಂತಹ ವಿಷಯಗಳನ್ನು 7 ದಿವಸ ಮುಂಚಿತವಾಗಿ ಕಾರ್ಯದರ್ಶಿಯವರಿಗೆ ತಲುಪಿಸಬೇಕಾಗಿ ವಿನಂತಿ. ನಂತರ ಬಂದ ವಿಷಯಗಳನ್ನು ಸಭೆಯಲ್ಲಿ ಚರ್ಚಿಸಲು ಅವಕಾಶವಿರುವುದಿಲ್ಲ.

**ಮಾನ್ಯ ಸದಸ್ಯರಿಗೆ ವಿಶೇಷ ಸೂಚನೆ**

ಆಡಿಟ್ ಆದ ಲೆಕ್ಕಪತ್ರಗಳ ಪ್ರತಿಗಳನ್ನು ಹಾಗೂ ವರದಿಯ ಪ್ರತಿಗಳನ್ನು ಮಾನ್ಯ ಸದಸ್ಯರಿಗೆ ಖುದ್ದಾಗಿ ಕಾರ್ಯಾಲಯದಲ್ಲಿ ನೀಡಲಾಗುವುದು. ಈ ಪ್ರತಿಗಳನ್ನು 2023ನೇ ಮಾರ್ಚ್ 15 ರಿಂದ ಪಡೆಯಬಹುದು. ಸರ್ವಸದಸ್ಯರ ಸಭೆಗೆ ಆಗಮಿಸುವ ಸದಸ್ಯರಿಗೆ ಸ್ಥಳದಲ್ಲಿಯೇ ಪ್ರತಿಗಳನ್ನು ನೀಡಲಾಗುವುದು. ಮಾನ್ಯ ಸದಸ್ಯರು ದಯಮಾಡಿ ಸಹಕರಿಸಬೇಕಾಗಿ ವಿನಂತಿ.

**ವೆಂಕಟೇಶ್ ಎಸ್. ನಾಯಕ್**
ಕೋಶಾಧಿಕಾರಿ.

**ಎಸ್. ಶ್ರೀಧರಮೂರ್ತಿ**
ಪ್ರಧಾನ ಕಾರ್ಯದರ್ಶಿ.

4

## ಕರಡು ಪ್ರತಿ

### ಉದ್ದೇಶಿಸಿದ ಬೈಲಾ ತಿದ್ದುಪಡಿಯ ಪ್ರಮುಖ ಅಂಶಗಳು

**1. ಸದಸ್ಯತ್ವ ಶುಲ್ಕ :**

ಅ) ಪ್ರಧಾನ್ಯ .. ರೂ. 10,000=00 ರಿಂದ ರೂ. 1,00,000=00 ಕ್ಕೆ

ಆ) ದಾತೃ .. ರೂ. 5,000=00 ರಿಂದ ರೂ. 50,000=00 ಕ್ಕೆ

ಇ) ದಾನಿ .. ರೂ. 1,000=00 ರಿಂದ ರೂ. 25,000=00 ಕ್ಕೆ

**2. ಮಹಾಸಭಾ ಅಧ್ಯಕ್ಷರ ಸೇವಾ ಅವಧಿ :**

ಅ) 3 ವರ್ಷದಿಂದ 5 ವರ್ಷಕ್ಕೆ ಹೆಚ್ಚಳ

ಆ) ಯಾವುದೇ ಕಾರಣದಿಂದ ಚುನಾಯಿತ ಅಧ್ಯಕ್ಷರ ಸ್ಥಾನ ಅವಧಿಗೆ ಮುಂಚೆ ತೆರುವಾದಲ್ಲಿ ಹಿರಿಯ ಉಪಾಧ್ಯಕ್ಷರನ್ನು ಉಳಿದ ಅವಧಿಗೆ ಅಧ್ಯಕ್ಷರನ್ನಾಗಿ ಮುಂದುವರಿಸುವುದು.

**3. ಮಹಾಸಭಾ ಅಧ್ಯಕ್ಷರ ಚುನಾವಣೆ :**

ಅ) ನಿಗದಿತ ಕೇಂದ್ರಗಳಿಂದ ನೇರವಾಗಿ ಅಲ್ಲಿಯ ಸದಸ್ಯರು ಮಹಾಸಭಾ ಅಧ್ಯಕ್ಷರ ಚುನಾವಣೆಯಲ್ಲಿ ಮತ ನೀಡುತ್ತಾರೆ.

ಮಹಾಸಭಾಧ್ಯಕ್ಷರ ಚುನಾವಣೆ ಜೊತೆಗೆ ಆಯಾ ಕೇಂದ್ರಗಳಲ್ಲಿ ಮತ ನೀಡುವ ಅರ್ಹತೆ ಉಳ್ಳ ಮತದಾರ ಸದಸ್ಯರು ಜಿಲ್ಲಾ ಪ್ರತಿನಿಧಿಗಳಿಗೂ ಸಹ ಮತ ನೀಡುವ ಹಕ್ಕಿದೆ.

ವಾರ್ಷಿಕ ಸರ್ವಸದಸ್ಯರ ಸಭೆಯಿಂದ ಚುನಾವಣೆ ಪ್ರಕ್ರಿಯೆಯನ್ನು ಬೇರ್ಪಡಿಸಲಾಗಿದೆ. ಪ್ರತ್ಯೇಕವಾಗಿ ಸರ್ವಸದಸ್ಯರ ಸಭೆ ಮತ್ತು ಚುನಾವಣೆ ಜರುಗಿಸಲಾಗುವುದು.

**ಬೆಂಗಳೂರು ಮಹಾನಗರದ ಮಹಾಸಭಾ ಚುನಾವಣಾ ಕೇಂದ್ರ:**

ಬೆಂಗಳೂರು ಮಹಾನಗರವನ್ನು ಬೆಂಗಳೂರು ದಕ್ಷಿಣ, ಬೆಂಗಳೂರು ಕೇಂದ್ರ ಮತ್ತು ಬೆಂಗಳೂರು ಉತ್ತರ ಎಂದು ಲೋಕಸಭಾ ಕ್ಷೇತ್ರಗಳ ರೀತ್ಯಾ ವಿಂಗಡಿಸಲಾಗುವುದು. ಆ ಕ್ಷೇತ್ರಗಳಲ್ಲೇ ಚುನಾವಣೆ ನಡೆಸುವ ಹಾಗೂ ಆ ಕ್ಷೇತ್ರದ ಸದಸ್ಯರೇ ಪ್ರತಿನಿಧಿಯಾಗಿ ಸ್ಪರ್ಧಿಸುವ ಅವಕಾಶ ಕಲ್ಪಿಸಲಾಗಿದೆ.

ಅ) ಅಧ್ಯಕ್ಷ ಚುನಾವಣೆಗೆ ಸ್ಪರ್ಧಿಸುವ ಸದಸ್ಯರು ಠೇವಣಿ ಹಣ ಪ್ರಸ್ತುತ ರೂ.5,000/= ಇದ್ದು ರೂ.1,00,000/= ಗಳಿಗೆ ಹೆಚ್ಚಿಸಲಾಗಿದೆ.

ಜಿಲ್ಲಾ ಪ್ರತಿನಿಧಿ ಠೇವಣಿ ಹಣ ರೂ.5,000/=

**4. ಮಹಾಸಭಾದ ಲೆಕ್ಕಪತ್ರಗಳ ಬಗ್ಗೆ ಹೆಚ್ಚಿನ ಪಾರದರ್ಶಕತೆಗಾಗಿ:**

ಅ) ಹಾಲಿ ಇರುವ ಪದ್ಧತಿಯಂತೆ ಲೆಕ್ಕಪರಿಶೋಧಕರ ಹುದ್ದೆ ಮುಂದುವರಿಯುತ್ತದೆ.

ಆ) ನುರಿತ ಅರ್ಹ ಆಂತರಿಕ ಲೆಕ್ಕಪತ್ರ ಪರಿಶೋಧಕರ ನೇಮಕ ಮಾಡುವ ಪ್ರಸ್ತಾಪ.

5



ಓಂ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ
ಧಿಯೋ ಯೋ ನಃ ಪ್ರಚೋದಯಾತ್



ಶಂಕರಂ ಶಂಕರಾಚಾರ್ಯಂ ಕೇಶವಂ ರಾಮಾನುಜಮ್ ಮುನಿಮ್ ।
ಆನಂದತೀರ್ಥಂ ಮಧ್ವಾಚಾರ್ಯಂ ಆಚಾರ್ಯತ್ರಯಂ ಮಾತ್ರಂಭಜೇತ್ ॥

ತೆರೆದ ಅಂಚೆ

ಇವರಿಗೆ

ವಿಳೇವಾರಿಯಾಗದಿದ್ದಲ್ಲಿ ದಯವಿಟ್ಟು ಹಿಂತಿರುಗಿಸಿ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)**
ಗಾಯತ್ರೀ ಭವನ, ನಂ. 3070, ಗಾಯತ್ರೀ ಭವನ ರಸ್ತೆ,
9ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560 070.
ದೂರವಾಣಿ : 080–26771695, 26770066. ಮೊ. : 99458 40620

6

# ಹಾವೇರಿ ಜಿಲ್ಲಾ ಬ್ರಾಹ್ಮಣ ಸಮಾವೇಶ

## ಇಡಬ್ಲ್ಯೂಎಸ್ ಪ್ರಮಾಣ ಪತ್ರ ನೀಡದಿದ್ದರೆ ಕಾನೂನು ಹೋರಾಟ – ಶ್ರೀ ಅಶೋಕ ಹಾರನಹಳ್ಳಿ



ಹಾವೇರಿ : ಕೇಂದ್ರ ಸರ್ಕಾರ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಶೇ.10ರಷ್ಟು ಮೀಸಲಾತಿ (ಇಡಬ್ಲ್ಯೂಎಸ್) ವ್ಯವಸ್ಥೆ ಜಾರಿಗೊಳಿಸಿದ್ದರೂ ಸಹ ರಾಜ್ಯ ಸರ್ಕಾರ ಇದನ್ನು ಅನುಷ್ಠಾನಗೊಳಿಸುತ್ತಿಲ್ಲ. ಎರಡು–ಮೂರು ವಾರಗಳಲ್ಲಿ ಇಡಬ್ಲ್ಯೂಎಸ್ ಪ್ರಮಾಣ ಪತ್ರ ಸೌಲಭ್ಯ ನೀಡದಿದ್ದರೆ ಈ ಕುರಿತು ಹೈಕೋರ್ಟ್‌ನಲ್ಲಿ ದಾವೆ ಹೂಡಲಾಗುವುದು ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಹೇಳಿದರು.

ತಾಲ್ಲೂಕಿನ ಅಗಡಿ ಗ್ರಾಮದ ಶ್ರೀಕ್ಷೇತ್ರ ಆನಂದವನದಲ್ಲಿ ಜಿಲ್ಲಾ ಬ್ರಾಹ್ಮಣ ಸಮಾಜದ ವತಿಯಿಂದ ಜರುಗಿದ ಹಾವೇರಿ ಜಿಲ್ಲಾ ಪ್ರಥಮ ಬ್ರಾಹ್ಮಣ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಂವಿಧಾನಾತ್ಮಕವಾಗಿ ಕೇಂದ್ರ ಸರ್ಕಾರ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಶೇ.10ರಷ್ಟು ಮೀಸಲಾತಿ ಕೊಟ್ಟಿದೆ. ಇದನ್ನು ಸುಪ್ರೀಂಕೋರ್ಟ್ ಸಹ ಎತ್ತಿ ಹಿಡಿದಿದೆ. ಆದರೂ ಈ ರಾಜ್ಯ ಸರ್ಕಾರ ಮೀಸಲಾತಿ ಕೊಟ್ಟಿಲ್ಲ. ಬ್ರಾಹ್ಮಣರಿಗೆ ಅನುಕೂಲ ಮಾಡಿಕೊಟ್ಟರೆ ಬೇರೆ ಸಮುದಾಯದವರು ಬೇಸರ ಮಾಡಿಕೊಳ್ಳುತ್ತಾರೆ ಎಂಬ ಕಾರಣದಿಂದ ಮೀಸಲಾತಿಯನ್ನು ಜಾರಿಗೊಳಿಸುತ್ತಿಲ್ಲ ಎಂದು ದೂರಿದರು. ಬ್ರಾಹ್ಮಣ ಸಮುದಾಯ ಸಂಘಟನೆ ವಿಷಯದಲ್ಲಿ ಉದಾಸೀನ ತೋರುತ್ತಿದೆ. ಆಚಾರ್ಯತ್ರಯರು ನೀಡಿದ ಸಂದೇಶ ಒಂದೇ ಆಗಿದ್ದು ಅದನ್ನು ಮನನ ಮಾಡಿಕೊಂಡು ಬದುಕು ಸಾಗಿಸೋಣ ಎಂದ ಅವರು, ವೇದ ಉಪನಿಷತ್ತುಗಳ ಬಗ್ಗೆ ತಿರಸ್ಕಾರ ಮನೋಭಾವ ಬೇಡ. ಬ್ರಾಹ್ಮಣರಿಂದಲೇ ಜಾತಿ ವ್ಯವಸ್ಥೆ ಅನುಷ್ಠಾನಕ್ಕೆ ಬಂದಿದೆ ಎಂಬುದು ತಪ್ಪು ಅಭಿಪ್ರಾಯ. ನಮ್ಮಲ್ಲಿ ಒಗ್ಗಟ್ಟಿಲ್ಲ. ಅದನ್ನು ರಾಜಕೀಯ ಶಕ್ತಿಗಳು ದುರುಪಯೋಗಪಡಿಸಿಕೊಳ್ಳುತ್ತಿವೆ. ಕೆಲ ರಾಜಕೀಯ ಪಕ್ಷಗಳು ನಮ್ಮ ಸಮುದಾಯ ಕಡೆಗಣಿಸುತ್ತಿವೆ. ನಾವೆಲ್ಲಾ ಒಗ್ಗಟ್ಟಿನ ಮೂಲಕ ಹೋರಾಡಬೇಕಾಗಿದೆ. ಡಾ. ಕೆ.ಪಿ.ಪುತ್ತೂರಾಯ ಅವರು ಮಾತನಾಡಿ, ರಾಜ್ಯದಲ್ಲಿ ಬ್ರಾಹ್ಮಣರು ಅಲ್ಪಸಂಖ್ಯಾತರಾಗಿದ್ದರೂ ಅಲ್ಪಸಂಖ್ಯಾತರಿಗೆ ಸಿಗುವ ಸ್ಥಾನಮಾನ ನಮಗೆ ಸಿಗುತ್ತಿಲ್ಲ. ಬ್ರಾಹ್ಮಣರ ಸಂಸ್ಕಾರ ಇಡೀ ಸಮಾಜದ ಮೇಲೆ ಪ್ರಭಾವ ಬೀರಬೇಕು. ಸಂಸ್ಕಾರ ನೀಡುವಲ್ಲಿ ಮಾತೆಯರ ಪಾತ್ರ ದೊಡ್ಡದು. ಶಿಕ್ಷಣ ಮತ್ತು ಸಂಸ್ಕಾರ ನಮ್ಮ ಸಮಜದ ದೊಡ್ಡ ಆಸ್ತಿ ಎಂದರು. ಬ್ರಾಹ್ಮಣ ಅಭಿವೃದ್ಧಿ ಮಂಡಳಿ ನಿರ್ದೇಶಕ ರಾಘವೇಂದ್ರ ಭಟ್ ಮಾತನಾಡಿ, ಬ್ರಾಹ್ಮಣರು ಸಂಘಟನೆಗೆ ಹೆಚ್ಚಿನ ಒತ್ತು ನೀಡಬೇಕು. ಇದೇ ವೇಳೆ ಮಾಧ್ಯಮ ಅಕಾಡಮಿ ಪ್ರಶಸ್ತಿ ಪುರಸ್ಕೃತ ಹಿರಿಯ ಪತ್ರಕರ್ತ ಪ್ರಕಾಶ ಜೋಶಿ ಅವರನ್ನು ಸನ್ಮಾನಿಸಲಾಯಿತು.

ಜಿಲ್ಲಾ ಬ್ರಾಹ್ಮಣ ಸಮಾಜದ ಅಧ್ಯಕ್ಷ ವಸಂತ ಮೊಕ್ತಲಿ ಅಧ್ಯಕ್ಷತೆ ವಹಿಸಿದ್ದರು. ಅಗಡಿ ಆನಂದವನದ ಶ್ರೀ ಗುರುದತ್ತ ಚಕ್ರವರ್ತಿ ಸಾನ್ನಿಧ್ಯ ವಹಿಸಿದ್ದರು. ವಿಜಯ ನಾಡಜೋಶಿ, ಪ್ರಮೋದ ಮನವಳ್ಳಿ, ಲಲಿತಾ ದೇಶಪಾಂಡೆ, ಜಿ.ಎಲ್. ನಾಡಿಗೇರ, ಉಮೇಶ ವಿಶ್ವರೂಪ, ಪಾರ್ವತಿರಾಯ ಕಾಶಿಕರ ಇತರರಿದ್ದರು.

ತಾಲೂಕಾಧ್ಯಕ್ಷ ಎಂ.ಆರ್. ಪಾಟೀಲ ಸ್ವಾಗತಿಸಿದರು. ಪ್ರಭಾಕರರಾವ್ ಮಂಗಳೂರು ಪ್ರಾಸ್ತಾವಿಕರಾಗಿ ಮಾತನಾಡಿದರು. ದತ್ತಾತ್ರೇಯ ಕಳ್ಳಿಹಾಳ ನಿರೂಪಿಸಿದರು. ಸುರೇಶ ಕಡಕೋಳ ವಂದಿಸಿದರು. ಹನುಮಂತ ನಾಯಕ ಬಾದಾಮಿ ನಿರ್ಣಯ ಮಂಡಿಸಿದರು.



# ಸೊರಬ ತಾಲ್ಲೂಕು ಬ್ರಾಹ್ಮಣ ಸಮಾವೇಶ

## "ಸರ್ವರ ಒಳಿತು ಬಯಸುವ ಬ್ರಾಹ್ಮಣರಿಗೆ ಒಳಿತಾಗಬೇಕು" – ಅಶೋಕ್ ಹಾರನಹಳ್ಳಿ



ದಿಕ್ಸೂಚಿ ಭಾಷಣ

ಸೊರಬ: ತ್ರಿಮತಸ್ಥ ಬ್ರಾಹ್ಮಣರೆಲ್ಲರೂ ಒಂದಾಗಿ ನಮ್ಮ ಸಂಘಟನೆಯನ್ನು ಮತ್ತಷ್ಟು ಬಲಪಡಿಸಿ ನಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಮುಂದಾಗಬೇಕು ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿಯವರು ಕರೆ ನೀಡಿದರು.

ಪಟ್ಟಣದ ಹೊಸಪೇಟೆ ಬಡಾವಣೆಯ ಗಿರಿಜಾಶಂಕರ ಸಭಾಭವನದಲ್ಲಿ ತಾಲ್ಲೂಕು ಬ್ರಾಹ್ಮಣ ಸಮಾಜದಿಂದ ಹಮ್ಮಿಕೊಂಡಿದ್ದ ಬ್ರಾಹ್ಮಣ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಎಲ್ಲರಿಗೂ ಒಳ್ಳೆಯದನ್ನು ಬಯಸುವ ಬ್ರಾಹ್ಮಣ ಸಮಾಜಕ್ಕೂ ಒಳ್ಳೆಯದಾಗಬೇಕಿದೆ. ನಮ್ಮ ಕೆಲವು ಸಂಪ್ರದಾಯಗಳನ್ನು ಮನೆಯೊಳಗಿಟ್ಟು ನಾವು ಎಲ್ಲರೊಂದಿಗೆ ಬೆರೆಯುವ ಮನೋಭಾವ ಬೆಳೆಸಿಕೊಳ್ಳಬೇಕು. ವೈಯಕ್ತಿಕ ನೆಲೆಯಲ್ಲಿ ಬ್ರಾಹ್ಮಣ ಸಮಾಜಕ್ಕೆ ಉತ್ತಮ ಸ್ಥಾನವಿದ್ದು, ಇದನ್ನು ಮುಂದುವರೆಸಿಕೊಂಡು ಹೋಗಬೇಕಿದೆ. ಬ್ರಾಹ್ಮಣರು ಹೆಚ್ಚಾಗಿರುವ ಕ್ಷೇತ್ರಗಳಲ್ಲಿ ನಮ್ಮ ಸಮಾಜದವರನ್ನು ಶಾಸನಸಭೆಗೆ ಸ್ಪರ್ಧಿಸಲು ಅವಕಾಶ ಮಾಡಿಕೊಡಬೇಕು.

**ಕಾನೂನು ಹೋರಾಟ :**

ಸಂವಿಧಾನಾತ್ಮಕವಾಗಿ ಕೇಂದ್ರಸರ್ಕಾರ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಶೇ.10 ರಷ್ಟು ಮೀಸಲಾತಿ ನೀಡಿದೆ. ಇದನ್ನು ಸುಪ್ರೀಂ ಕೋರ್ಟ್ ಸಹ ಎತ್ತಿ ಹಿಡಿದಿದೆ. ಆದಾಗ್ಯೂ ರಾಜ್ಯ ಸರ್ಕಾರ ಮೀಸಲಾತಿ ನೀಡಿಲ್ಲ. ಬ್ರಾಹ್ಮಣರಿಗೆ ಅನುಕೂಲ ಮಾಡಿಕೊಟ್ಟರೆ ಬೇರೆ ಸಮುದಾಯದವರು ಬೇಸರ ಮಾಡಿಕೊಳ್ಳುತ್ತಾರೆಂಬ ಕಾರಣದಿಂದ ಮೀಸಲಾತಿ ಜಾರಿಗೊಳಿಸುತ್ತಿಲ್ಲ. ಬ್ರಾಹ್ಮಣ ಸಮುದಾಯದ ಸಂಘಟನೆಯ ವಿಚಾರದಲ್ಲಿ ಸರ್ಕಾರ, ಉದಾಸೀನ ತೋರುತ್ತಿದ್ದು, ಇನ್ನು 2–3 ವಾರಗಳಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಸೌಲಭ್ಯ ನೀಡದೇ ಇದ್ದಲ್ಲಿ ಹೈಕೋರ್ಟ್‌ನಲ್ಲಿ ದಾವೆ ಹೂಡಲಾಗುವುದು ಎಂದು ಎಚ್ಚರಿಸಿದರು.

ಕರ್ನಾಟಕದಲ್ಲಿ ಇತ್ತೀಚೆಗೆ ನಾವು ಎಸ್.ಎಸ್.ಎಲ್.ಸಿ.ಯಲ್ಲಿ 99%ಕ್ಕಿಂತಲೂ ಹೆಚ್ಚಿನ ಅಂಕವನ್ನು ಹೊಂದಿದವರಿಗೆ ಪ್ರತಿಭಾ ಪುರಸ್ಕಾರ ನೀಡಿದ್ದು, ಅವರು 800ರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ಸಮುದಾಯದಲ್ಲಿ ಬುದ್ಧಿವಂತರಿದ್ದು, ಸೂಕ್ತ ಅವಕಾಶವನ್ನು ನಾವು ಕಲ್ಪಿಸಬೇಕಾಗಿದೆ. ಒಟ್ಟಿನಲ್ಲಿ ನಮ್ಮನ್ನು ನಾವೇ ಉದ್ಧರಿಸಬೇಕಾದ ಅನಿವಾರ್ಯತೆ ಇದೆಯೆಂದರು.



ಸಮಾವೇಶದ ದಿಕ್ಸೂಚಿ ಭಾಷಣ ಮಾಡಿದ ಹೆಸರಾಂತ ಪತ್ರಕರ್ತೆ ಹಾಗೂ ಸಾಮಾಜಿಕ ಸೇವಾ ಕಾರ್ಯಕರ್ತೆ ಶ್ರೀಮತಿ ಲಕ್ಷ್ಮಿ ರಾಜಕುಮಾರ್‌ರವರು ಇಂದಿನ ಬ್ರಾಹ್ಮಣ ಸಮಾಜದ ಯುವಕರು ಹಾಗೂ ಮಹಿಳೆಯರು ಮತ್ತು ವೃದ್ಧರು ಎದುರಿಸುತ್ತಿರುವ ಸವಾಲುಗಳನ್ನು ಕುರಿತು ಮನಮುಟ್ಟುವಂತೆ ಮಾತನಾಡಿದರು.ಸನಾತನ ಧರ್ಮದಿಂದ ವಿಮುಖರಾಗುತ್ತಿರುವ ಯುವ ಸಮುದಾಯಕ್ಕೆ ಪುನಃ ನಮ್ಮ ಧರ್ಮದ ಮಹತ್ವವನ್ನು ತಿಳಿಸುವ ಕಾರ್ಯ ತುರ್ತಾಗಿ ಆಗಬೇಕೆಂದು ತಿಳಿಸಿದರು. ಹಳ್ಳಿಗಳಲ್ಲಿ ಕೇವಲ ವೃದ್ಧರು ಮಾತ್ರ ಕಂಡುಬರುತ್ತಿರುವ ಸನ್ನಿವೇಶವನ್ನು ಬದಲು ಮಾಡುವ ಅಗತ್ಯವನ್ನು ತಿಳಿಸಿದ ಅವರು ಗ್ರಾಮೀಣ ಭಾಗದಲ್ಲಿ ವಿಪ್ರರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವ ಕಾರ್ಯಕ್ರಮಗಳನ್ನು ಮಹಾಸಭೆ ಹಾಕಿಕೊಳ್ಳಬೇಕೆಂದು ಕರೆ ನೀಡಿದರು.

ಸಮಾರಂಭದಲ್ಲಿ ಸ್ಥಳೀಯ ವಿಪ್ರ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು. ಹಿಂದಿನ ಅಧ್ಯಕ್ಷರುಗಳಾದ ಹೆಚ್.ಎಸ್. ಮಂಜಪ್ಪ ಹಾಗೂ ಕಟ್ಟಿನಕೆರೆ ಸೀತಾರಾಮ್, ಜಿಲ್ಲಾ ಬ್ರಾಹ್ಮಣ ಸಭಾ ಅಧ್ಯಕ್ಷ ಶ್ರೀ ನಟರಾಜ್ ಭಾಗವತ್ ಹಾಗೂ ಮಹಾಸಭಾ ಉಪಾಧ್ಯಕ್ಷರಾದ ಶ್ರೀ ಶಶಿಭೂಷಣ್ ಹೆಗಡೆರವರು ಬ್ರಾಹ್ಮಣ ಸಮಾಜದ ಸಮಸ್ಯೆಗಳು ಮತ್ತು ಸಂಘಟನೆಯ ಕುರಿತು ಮಾತನಾಡಿದರು. ಹಾಗೂ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ತಾಲ್ಲೂಕು ಬ್ರಾಹ್ಮಣ ಅಧ್ಯಕ್ಷರಾದ ಶ್ರೀ ದಿವಾಕರ ಭಾವೆಯವರು ಸೊರಬ ಬ್ರಾಹ್ಮಣ ಸಂಘದ ಕಾರ್ಯಚಟುವಟಿಕೆಗಳ ಮಾಹಿತಿ ನೀಡಿ, ಬ್ರಾಹ್ಮಣ ಸಂಘಟನೆಗಾಗಿ ತಾಲ್ಲೂಕು ಸಂಘ ಹಮ್ಮಿಕೊಂಡಿರುವ ಯೋಜನೆಗಳನ್ನು ವಿವರಿಸಿದರು. ಸುಮಾರು ಸಾವಿರಕ್ಕೂ ಹೆಚ್ಚು ವಿಪ್ರರು ಭಾಗವಹಿಸಿದ್ದ ಈ ಅಪೂರ್ವ ಸಮಾರಂಭದಲ್ಲಿ ಮಹಿಳೆಯರ ಸಂಖ್ಯೆಯೇ ಹೆಚ್ಚಾಗಿ ಇದ್ದದ್ದು ವಿಶೇಷವಾಗಿತ್ತು. ಸಮಾರಂಭವನ್ನು ರಾಜ್ಯಮಟ್ಟದ ಸಮಾರಂಭಕ್ಕೆ ಸರಿಸಮಾನವಾಗಿ ಆಯೋಜಿಸಿದ ತಾಲ್ಲೂಕು ಬ್ರಾಹ್ಮಣ ಸಂಘದ ಪದಾಧಿಕಾರಿಗಳು ಅಭಿನಂದನಾರ್ಹರು.

# ವಿಪ್ರ ಜಾಗೃತಿ ಮಹಾಸಮಾವೇಶ
## ಬ್ರಾಹ್ಮಣ ಸಮಾಜ ಜಾಗೃತಗೊಳ್ಳುವುದು ಅಗತ್ಯ – ಶ್ರೀ ಅಶೋಕ ಹಾರನಹಳ್ಳಿ



**ಕೆಂಭಾವಿ :** ಪ್ರತಿಯೊಂದು ಸಮಾಜದ ಏಳಿಗೆ ಬಯಸುತ್ತ ಬಂದಿರುವ ವಿಪ್ರ ಸಮಾಜ ಇಂದು ಶೋಚನೀಯ ಸ್ತಿತಿಯಲ್ಲಿದೆ. ಜಾಗೃತಗೊಳ್ಳುಇವ ಅಗತ್ಯ ಇದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯಾಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿ ಹೇಳಿದರು.

ಯಾದಗಿರಿ ಜಿಲ್ಲಾ ಕೆಂಭಾವಿಯ ಕೊಡಲಗಿ ಗ್ರಾಮದ ಶಾಂತಾನಂದ ಸರಸ್ವತಿ ಸ್ವಾಮಿ ಬಾಬಾ ಮಹಾರಾಜ ಮಠದಲ್ಲಿ ಇತ್ತೀಚೆಗೆ ನಡೆದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವತಿಯಿಂದ ನಡೆದ ವಿಪ್ರ ಜಾಗೃತಿ ಮಹಾಸಮಾವೇಶ ಉದ್ಘಾಟಿಸಿ ಮಾತನಾಡಿದರು.

ಸನಾತನ ಧರ್ಮದ ರಕ್ಷಣೆಯಲ್ಲಿ ಬ್ರಾಹ್ಮಣ ಸಮಾಜದ ಪಾತ್ರ ದೊಡ್ಡದು. ಅಂಥ ಸಮಾಜ ರಕ್ಷಣೆ ಮಾಡುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದು ಹೇಳಿದರು.

ಗಾಯತ್ರಿ ದೇವಿಯ ಉಪಾಸಕರಾದ ನಾವು ಒಂದಾಗಿ ಬಲಪ್ರದರ್ಶನ ಮಾಡಬೇಕು. ರಾಜಕೀಯ ವ್ಯಕ್ತಿಗಳ ಗಾಳವಾಗಿ ಇಂದು ಬ್ರಾಹ್ಮಣ ಸಮಾಜದ ಕೆಲಸ ಮಾಡುತ್ತಿದೆ. ಅದನ್ನು ತೊಲಗಿಸುವ ಕೆಲಸವನ್ನು ಪ್ರತಿಯೊಬ್ಬ ವಿಪ್ರರು ಮಾಡಬೇಕು ಎಂದರು.

ಮುಂದಿನ ದಿನಗಳಲ್ಲಿ ರಾಜ್ಯಮಟ್ಟದ ಮಹಿಳಾ ಸಮಾವೇಶ ಆಯೋಜಿಸುವ ಗುರಿ ಇದೆ. ಇದೇ ವೇಳೆ ಸಮಾಜದ ಮಹಿಳೆಯರ ಸ್ಥಿತಿಗತಿ ಕುರಿತು ಚರ್ಚೆ ನಡೆಸಲಾಗುವುದು ಎಂದು ಹೇಳಿದರು.

ಮಹಾಸಭಾದ ಕಲಬುರಗಿ ವಲಯ ಘಟಕದ ಅಧ್ಯಕ್ಷ ರಾಘವೇಂದ್ರ ಕುಲಕರ್ಣಿ ಮಾತನಾಡಿ, ದೇಶದ ಹಿಂದೂ ಸಮಾಜವನ್ನು ಒಗ್ಗೂಡಿಸುವ ನೆಪದಲ್ಲಿ ಕೆಲ ರಾಜಕೀಯ ಪಕ್ಷಗಳು ನಮ್ಮನ್ನು ಅಸ್ತ್ರಗಳನ್ನಾಗಿ ಉಪಯೋಗಿಸುತ್ತಿವೆ. ಅಂಥ ರಾಜಕೀಯ ಪಕ್ಷಗಳು ಹಾಗೂ ಮುಖಂಡರಿಗೆ ಪಾಠ ಕಲಿಸಬೇಕಾಗಿದೆ ಎಂದು ಹೇಳಿದರು. ವೇದ ಜೋಷಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮಕ್ಕೂ ಮೊದಲು ಗ್ರಾಮದ ಪ್ರಮುಖ ಬೀದಿಗಳಲ್ಲಿ ಗಾಯತ್ರಿ ದೇವಿಯು ಶೋಭಾಯಾತ್ರೆ ನೆರವೇರಿತು.



ಪೀಠಾಧಿಪತಿ ಉಮಾಕಾಂತ ಸಿದ್ಧರಾಜ ಬಾಬಾ ಮಹಾರಾಜರು ಸಾನಿಧ್ಯ ವಹಿಸಿದ್ದರುಇ. ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ರಾಘವೇಂದ್ರರಾವ್ ಮುಂಡರಗಿ ಅಧ್ಯಕ್ಷತೆ ವಹಿಸಿದ್ದರು. ಗೌರವಾಧ್ಯಕ್ಷ ವಾಮನರಾವ್ ದೇಶಪಾಂಡೆ, ಮಹಾಸಭಾದ ರಾಜ್ಯ ಪದಾಧಿಕಾರಿಗಳಾದ ಡಾ॥ ಆನಂದತೀರ್ಥ ಫಡ್ನವೀಸ್, ರಂಗನಾಥ ದೇಸಾಯಿ, ಬಿ.ಎಸ್. ರಾಘವೇಂದ್ರ ಭಟ್, ಲಕ್ಷ್ಮೀಕಾಂತ ಕುಲಕರ್ಣಿ, ಭಾಗ್ಯಶ್ರೀ ಕುಇಲಕಣಿ, ಪ್ರಸನ್ನ ದೇಶಮುಖ್, ಮುರಳೀಧರ ರಾಯಚೂರು, ಡಾ. ರಾವರಾವ್ ಕುಇಲಕರ್ಣಿ, ಶ್ರೀನಿವಾಸರಾವ್ ಕುಲಕರ್ಣಿ ಹಾಗೂ ಚಂದ್ರಕಾಂತ ದೇಶಪಾಂಡೆ ಹುಣಸಗಿ ಇದ್ದರು.

ಡಾ. ಭೀಮಾಶಂಕರ ಜೋಷಿ ನಿರೂಪಣೆ ಮಾಡಿದರು. ಮಹಾರಾಜ ಸ್ವಾಗತ ಮಾಡಿದರೆ, ಗಿರೀಶ ಜೋಷಿ ವಂದನಾರ್ಪಣೆ ಮಾಡಿದರು.



## ಮಹಾಸಭೆಯ 4ನೇ ಕಾರ್ಯಕಾರಿಣಿ ಸಭೆ

# ಜಯನಗರ ಸೇರಿ 25 ಕ್ಷೇತ್ರಗಳಲ್ಲಿ ಬ್ರಾಹ್ಮಣರಿಗೆ ಟಿಕೆಟ್ ನೀಡಲು ಆಗ್ರಹ



ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಬೆಂಗಳೂರಿನ ಜಯನಗರ ಸೇರಿದಂತೆ ಬ್ರಾಹ್ಮಣ ಸಮುದಾಯ ಹೆಚ್ಚಿರುವ ಸುಮಾರು 25 ವಿಧಾನಸಭಾ ಕ್ಷೇತ್ರಗಳಲ್ಲಿ ಬ್ರಾಹ್ಮಣರಿಗೆ ಮಾತ್ರ ಸ್ಪರ್ಧಿಸಲು ಅವಕಾಶ ಮಾಡಿಕೊಡಬೇಕೆಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಆಗ್ರಹಿಸಿದೆ.

ಇತ್ತಿಚೆಗೆ ನಗರದಲ್ಲಿ ನಡೆದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಕಾರ್ಯಕಾರಿ ಸಭೆಯಲ್ಲಿ ಶ್ರೀ ಅಶೋಕ ಹಾರನಹಳ್ಳಿ ಅಧ್ಯಕ್ಷತೆಯಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಿಂದ ಸಮುದಾಯದ ಮುಖಂಡರು ಪಾಲ್ಗೊಂಡು, ರಾಜಕೀಯ ಸ್ಥಾನಮಾನ ಕುರಿತು ಚರ್ಚಿಸಿದರು.

ಸಭೆಯಲ್ಲಿ ಹಲವರು ಪ್ರಸ್ತಾಪಿಸಿ, ಕಲಬುರಗಿ ಜಿಲ್ಲೆಯಲ್ಲಿ ವಿಪ್ರರು 8 ಲಕ್ಷ ಜನರಿದ್ದು, ಅದರಲ್ಲೂ ಈ ಕಲಬುರಗಿ ದಕ್ಷಿಣ ಕ್ಷೇತ್ರದಲ್ಲಿ 35 ರಿಂದ 48 ಸಾವಿರ ಮತದಾರರು ನಿರ್ಣಾಯಕರಾಗಿದ್ದರೆ. ಅದೇ ರೀತಿ, ಬೆಂಗಳೂರಿನ ಜಯನಗರ, ರಾಜಾಜಿನಗರ, ಉಡುಪಿ, ಶಿವಮೊಗ್ಗ, ಮಂಗಳೂರು ಸೇರಿದಂತೆ ಒಟ್ಟು 25 ಕ್ಷೇತ್ರಗಳಲ್ಲಿ ವಿಪ್ರರು ಅಧಿಕ ಸಂಖ್ಯೆಲ್ಲಿಯದ್ದು, ಅವರನ್ನು ಪರಿಗಣಿಸಿ ಈ ಬಾರಿ ಟಿಕೆಟ್ ನೀಡಲೇಬೇಕು ಎಂದು ಮನವಿ ಮಾಡಿದರು.

ಈಗಾಗಲೇ ರಾಜಕೀಯ ಪಕ್ಷಗಳ ವರಿಷ್ಠರಿಗೆ ಔಪಚಾರಿಕವಾಗಿ ಮಾತುಕತೆ ನಡೆಸಿ ಮನವಿ ಮಾಡಲಾಗಿದ್ದು, ಶೀಘ್ರದಲ್ಲಿ ಪತ್ರ ಮುಖೇನ ಟಿಕೆಟ್ ನೀಡುವಂತೆ ಒತ್ತಾಯಿಸಲಾಗುವುದು ಎಂದು ಸಭೆಯಲ್ಲಿ ಅಶೋಕ ಹಾರನಹಳ್ಳಿ ಪ್ರಕಟಿಸಿದರು.

ಮಹಾಸಭಾ ಉಪಾಧ್ಯಕ್ಷ ಶ್ರೀ ಸಿ.ಕೆ. ರಾಮಮೂರ್ತಿ ಮಾತನಾಡಿ ಕೆಲ ಭಾಗಗಳಲ್ಲಿ ವರ್ಷಗಳ ಹಿಂದಿನಿಂದಲೂ ವಿಪ್ರ ಸಮುದಾಯದ ನಾಯಕರು ಶಾಸಕರಾಗಿ, ವಿಧಾನ ಪರಿಷತ್ತಿನ ಸದಸ್ಯರಾಗಿ, ಸಂಸದರು, ಸಚಿವರಾಗಿ ಸಾರ್ವಜನಿಕ ಸೇವೆ ಸಲ್ಲಿಸಿದ್ದಾರೆ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ರಾಜಕೀಯ ಪಕ್ಷಗಳು ಬ್ರಾಹ್ಮಣರನ್ನು ಮತ ಬ್ಯಾಂಕನ್ನಾಗಿ ಬಳಸಿಕೊಳ್ಳತ್ತಿವೆಯೇ ಹೊರತು ರಾಜಕೀಯ ಸ್ಥಾನಮಾನ ಕಲ್ಪಿಸುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಜಧಾನಿ ಬೆಂಗಳೂರಿನಲ್ಲಿಯೇ ಹಲವು ವಿಧಾನಸಭಾ ಕ್ಷೇತ್ರಗಳಲ್ಲಿ ಬ್ರಾಹ್ಮಣ ಸಮುದಾಯದ ಮತದಾರರು ಹೆಚ್ಚಾಗಿದ್ದಾರೆ. ಹೀಗಾಗಿ, ಬರೀ ಬಿಜೆಪಿ ಮಾತ್ರವಲ್ಲದೆ, ಎಲ್ಲ ಪಕ್ಷಗಳೂ ಈ ಜಾತಿಭೇದ ಇಲ್ಲದೆ ಬ್ರಾಹ್ಮಣರಿಗೆ ರಾಜಕೀಯ ಶಕ್ತಿ ತುಂಬಲು ಮುಂದೆ ಬರಬೇಕು ಎಂದು ಒತ್ತಾಯಿಸಿದರು. ಸಭೆಯಲ್ಲಿ ಮಹಾಸಭಾದ ಸಂಘಟನಾ ಕಾರ್ಯದರ್ಶಿ ಡಾ. ರಾಘವೇಂದ್ರ ಭಟ್ ಸೇರಿದಂತೆ ಪ್ರಮುಖರಿದ್ದರು.

# ಬೆಳಗಾವಿಯಲ್ಲಿ ಮಹಾಸಭೆಯ ದಿನದರ್ಶಿ ಬಿಡುಗಡೆ



ಬೆಳಗಾವಿಯ ಶ್ರೀ ಲಕ್ಷ್ಮಿ ವೆಂಕಟೇಶ್ವರ ದೇವಸ್ಥಾನದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಸಹ ಸಂಚಾಲಕಿ ಶ್ರೀಮತಿ ಅನುಶ್ರೀ ದಿನೇಶ್ ದೇಶಪಾಂಡೆ ಹಾಗೂ ನಗರ ಸೇವಕಿಯಾದ ಶ್ರೀಮತಿ ವಾಣಿ ವಿಲಾಸ ಜೋಶಿ ಬೆಳಗಾವಿ ಜಿಲ್ಲೆಯ ಸಂಚಾಲಕಿ ಶ್ರೀಮತಿ ಪ್ರಜ್ಞಾ ಕೊರ್ತಿ ಇವರ ನೇತೃತ್ವದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ 2023ರ ದಿನದರ್ಶಿ ವಿತರಣಾ ಕಾರ್ಯಕ್ರಮವು ನಡೆಯಿತು.

# ಚಿತ್ಪಾವನ ಸಮಾಜ, ಬೆಂಗಳೂರು – ಸುವರ್ಣ ಮಹೋತ್ಸವ ಸಂಭ್ರಮ




ಯಶಸ್ವಿ ಐವತ್ತು ವರ್ಷಗಳನ್ನು ಪೂರೈಸಿರುವ ಬೆಂಗಳೂರು ಚಿತ್ಪಾವನ ಬ್ರಾಹ್ಮಣರ ಸಮಾಜದ (ಚಿತ್ಪಾವನ ಸಮಾಜ ಬೆಂಗಳೂರು (ರಿ)) ಸುವರ್ಣ ಸಂಭ್ರಮದ ಕಾರ್ಯಕ್ರಮ ಇತ್ತೀಚೆಗೆ ಅಂದರೆ ಫೆಬ್ರವರಿ ತಿಂಗಳ 4 ಮತ್ತು 5 ರಂದು ಬಸವನಗುಡಿಯ ಶ್ರೀ ಗುರು ನರಸಿಂಹ ಸಭಾಭವನದ 'ರಂಗನಾಥ ಮರಾಠೆ' ವೇದಿಕೆಯಲ್ಲಿ ವಿಜೃಂಭಣೆಯಿಂದ ಜರುಗಿತು. ಕಿಕ್ಕಿರಿದು ನೆರೆದಿದ್ದ ಸಮಾಜದ ಸದಸ್ಯರ ಮತ್ತು ಅತಿಥಿ ಅಭ್ಯಾಗತರ ಸಮಕ್ಷಮದಲ್ಲಿ ಎಡನೀರು ಮಠದ ಪರಮಪೂಜ್ಯ

ಶ್ರೀ ಶ್ರೀ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು ಸುವರ್ಣ ಸಂಭ್ರಮದ ಉದ್ಘಾಟನೆಯನ್ನು ಮಾಡಿ ಆಶೀರ್ವಚನ ನೀಡಿದರು. ಕರ್ನಾಟಕ ಸರಕಾರದ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ರಾದ ಶ್ರೀ ಹೆಚ್ ಎಸ್ ಸಚ್ಚಿದಾನಂದ ಮೂರ್ತಿಗಳು, ವಿಧಾನ ಪರಿಷತ್ ಸದಸ್ಯರಾದ ಬೆಳ್ತಂಗಡಿಯ ಶ್ರೀ ಪ್ರತಾಪ್ ಸಿಂಹ ನಾಯಕ್ ರವರು, ಯಕ್ಷಗಾನ ವಿದ್ವಾಂಸ ಶ್ರೀ ಪ್ರಭಾಕರ ಜೋಶಿ , ಪುಣೆ ಯ ಪತ್ರಕರ್ತರೂ ಸಂಶೋಧಕರೂ ಆದ ಶ್ರೀ ವಾಸುದೇವ ಡೋಂಗ್ರೆ, ಸಮಾಜದ ಗೌರವ ಅಧ್ಯಕ್ಷ ಶ್ರೀ ವಿಷ್ಣು ಭಟ್ ಡೋಂಗ್ರೆ, ಅಖಿಲ ಕರ್ನಾಟಕ ಚಿತ್ಪಾವನ ಸಂಘದ ಅಧ್ಯಕ್ಷರಾದ ಶ್ರೀ ಗೋವಿಂದ ಎನ್ ಫಡ್ಕೆ ಮೊದಲಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.




ಸಮಾಜದ ಅಧ್ಯಕ್ಷ ಶ್ರೀ ಎಂ ಗಣಪತಿ ಜೋಶಿ ಸ್ವಾಗತ ಬಯಸಿದರು. ಬಳಿಕ ಸ್ವಾತಂತ್ರ್ಯ ಯೋಧರ ಚಿತ್ರ ಪ್ರದರ್ಶನ ಉದ್ಘಾಟನೆ, ಸಮಾಜದ ಸ್ಥಾಪಕ ಸದಸ್ಯರಿಗೆ ಗೌರವಾರ್ಪಣೆ, ಸಂಘದ ಸಂಸ್ಥಾಪಕರಾದ ರಂಗನಾಥ ಮರಾಠೆಯವರ ಜೀವನಗಾಥೆ 'ರಂಗೊಮಾಮ್ಮಾ' ಕೃತಿ ಲೋಕಾರ್ಪಣೆ, ಬೆಂಗಳೂರು ಚಿತ್ಪಾವನ ಭಾವಚಿತ್ರ ಸಂಪುಟ ಬಿಡುಗಡೆ, ಚಿತ್ಪಾವನ ಸಮಾಜ ಸುವರ್ಣ ಸ್ಮೃತಿ ಬಿಡುಗಡೆ ಇತ್ಯಾದಿ ಕಾರ್ಯಕ್ರಮಗಳು ವೇದಿಕೆಯಲ್ಲಿ ನಡೆದವು.

ಶ್ರೀ ಹೆಚ್ ಎಸ್ ಸಚ್ಚಿದಾನಂದ ಮೂರ್ತಿಗಳು ಮಾತನಾಡಿ ವಿಪ್ರ ಸಮಾಜದ ಒಗ್ಗಟ್ಟಿನ ಆವಶ್ಯಕತೆ ಹಾಗೂ ಸರಕಾರದಿಂದ ನೆರವು ದೊರಕಿಸುವ ಬಗ್ಗೆ ತಿಳಿಸಿದರು.

ಮಧ್ಯಾಹ್ನದ ಬಳಿಕ ಸಮಾಜದ ಸದಸ್ಯರ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರೆದ ಸಭಿಕರ ಕಣ್ಮನ ಸೂರೆಗೈದವು. ಸಂಜೆ ವೇದಿಕೆಯಲ್ಲಿ ವಿವಿಧ ಕ್ಷೇತ್ರಗಳ ಚಿತ್ಪಾವನ ಸಾಧಕರಿಗೆ ಸನ್ಮಾನ ನಡೆಸಲಾಯಿತು. ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಅದಮ್ಯ ಚೇತನ ಬೆಂಗಳೂರು ಇವರು ವಿಶೇಷ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು.

ಮರುದಿನ ರಾಜ್ಯದ ವಿವಿಧ ಚಿತ್ಪಾವನ ಸಂಘಗಳ ಪದಾಧಿಕಾರಿಗಳ ಸಭೆ ನಡೆಯಿತು. ಬಳಿಕ ಸಾಂಸ್ಕೃತಿಕ ಕಾರ್ಯಕ್ರಮಗಳು ಮುಂದುವರಿದವು. ಶ್ರೀರಾಮ ಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ರವರು ಸಾಗರದ ನೂಪರ ನಿನಾದ ಕಲಾತಂಡ ನಡೆಸಿಕೊಟ್ಟ 'ಇದಂ ಬ್ರಾಹ್ಮಂ ಇದಂ ಕ್ಷಾತ್ರಂ' ಎಂಬ ಗುರು ಪರಶುರಾಮರ ಕುರಿತಾದ ನೃತ್ಯ ರೂಪಕ ವೀಕ್ಷಿಸಿ ಹರುಷಗೊಂಡರು.



ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಅ.ಕ.ಬ್ರಾಹ್ಮಣ ಸಭಾದ ಅಧ್ಯಕ್ಷ ಶ್ರೀ ಅಶೋಕ್ ಹಾರನಹಳ್ಳಿ, ಚಿಕ್ಕಪೇಟೆ ಶಾಸಕ ಶ್ರೀ ಉದಯ ಗರುಡಾಚಾರ್ ಅವರ ವಿಶೇಷ ಉಪಸ್ಥಿತಿ ಗಮನ ಸೆಳೆದಿತ್ತು. ಸಮಾಜದ ಕಾರ್ಯದರ್ಶಿ ಶ್ರೀ ಗಜಾನನ ಗೋಖಲೆ ಧನ್ಯವಾದ ಅರ್ಪಿಸಿದರು. ರಾತ್ರಿ ವಿಶೇಷ ಆಕರ್ಷಣೆಯಾಗಿ ಖ್ಯಾತ ಹಿನ್ನೆಲೆ ಗಾಯಕಿ ಶ್ರುತಿ ಭಿಡೆ ಮತ್ತು ಪ್ರದೀಪ್ ಪಾಟ್ಕರ್ ತಂಡದಿಂದ ಸಂಗೀತ ಗಾನ ವಿಹಾರ ನಡೆದು ಜನಮನ ಸೂರೆಗೊಂಡಿತು. ಎರಡು ದಿನದ ಸಂಭ್ರಮದಲ್ಲಿ ಅತ್ಯುತ್ತಮ ಊಟೋಪಚಾರವನ್ನೂ ವ್ಯವಸ್ಥೆಗೊಳಿಸಲಾಗಿತ್ತು.



# ತುಮಕೂರಿನಲ್ಲಿ ಡಿ.ವಿ.ಜಿ. ನೆನಪು ಕಾರ್ಯಕ್ರಮ






ಮಾನವ ಇತಿಹಾಸನದ ವಿವಿಧ ಕಾಲಘಟ್ಟಗಳಲ್ಲಿ ಜನರಿಗೆ ಸದಾಚಾರದಿಂದ ಬದುಕಲು ಪ್ರೇರೇಪಿಸಿದವರು ನಮ್ಮ ಪ್ರಾಚೀನ ಋಷಿಗಳು. ಅದೇ ರೀತಿ ನಮ್ಮ ಕಾಲದಲ್ಲಿ ನಾವು ಕಂಡ ಋಷಿ ಸದೃಶ ವ್ಯಕ್ತಿತ್ವ ದಾರ್ಶನಿಕ ಡಿ.ವಿ. ಗುಂಡಪ್ಪನವರದು ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಯವರು ಬಣ್ಣಿಸಿದರು.


ಅವರು ತುಮಕೂರು ನಗರದ ಗಾಯತ್ರಿ ಸಮುದಾಯ ಭವನದಲ್ಲಿ ಸರಸ್ ಫೌಂಡೇಷನ್ ವತಿಯಿಂದ ಏರ್ಪಟ್ಟಿದ್ದ "ಡಿವಿಜಿ ನೆನಪು" ಉಪನ್ಯಾಸ ಮಾಲಿಕೆಯ 83ನೇ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಿದ್ದರು.

ಅನೇಕ ಜನರು ದೊಡ್ಡದೊಡ್ಡ ಪ್ರವಚನ ಮಾಡುತ್ತಾರೆ. ಆಕಷ್ಕವಾಗಿ ಮಾತನಾಡುತ್ತಾರೆ. ವೇದೋಪನಿಷತ್ತುಗಳನ್ನು ಹೇಳುತ್ತಾರೆ. ಆದರೆ ಬಹುತೇಕ ಅಂತಹವರ ಜೀವನವನ್ನು ಹತ್ತಿರದಿಂದ ನೋಡಿದಾಗ ಭ್ರಮನಿರಸನವಾಗುತ್ತದೆ. ಮಾತಿಗೂ, ಆಚರಣೆಗೂ ಸಾಮ್ಯತೆಯೇ ಕಾಣುವುದಿಲ್ಲ. ಅದರಲ್ಲೂಈ ಬದುಕಿನ ವಿಭಿನ್ನ ಸನ್ನಿವೇಶಗಳಲ್ಲಿ ಇಂಥಹವರ ವರ್ತನೆಯೇ ವಿಭಿನ್ನವಾಗಿ ಬಿಡುತ್ತದೆ ಆದರೆ ಸಾರ್ವಕಾಲಿಕ ಮಾದರಿಯೆಂಬಂತೆ ಬದುಕಿದರು. ಇದೇ ಕಾರಣದಿಂದ ಡಿವಿಜಿಯವರು ನಮಗೆ ಸದಾ ಆದರ್ಶಮಯ ವ್ಯಕ್ತಿಯಾಗುತ್ಥಾರೆ ಎಂದು ವಿವರಿಸಿದರು.

'ಮಂಖುತಿಮ್ಮನ ಕಗ್ಗ' ದಂತಹ ಮಹಾನ್ ಕೃತಿಯನ್ನು ನೀಡುವ ಮೂಲಕ ಬದುಕಿನ ಉನ್ನತಿಗೆ ಡಿವಿಜಿಯವರು ಮಾರ್ಗ ತೋರಿಸಿದ್ದಾರೆ. ಕಗ್ಗದ ಒಂದೊಂದು ಪದ್ಯವೂ ಒಂದಕ್ಕಿಂತ ಒಂದು ಅದ್ಭುತ ಎನ್ನುವಂತಹದ್ದಾಗಿದೆ. ಕಗ್ಗ ನೀಡುವ ಆ ಬೆಳಕನ್ನು ಪ್ರತಿಯೊಬ್ಬರೂ ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದು ಅಶೋಕ ಹಾರನಹಳ್ಳಿ ಅಭಿಪ್ರಾಯಪಟ್ಟರು.

'ಕಗ್ಗದ ಭಟ್ಟರು' ಎಂದೇ ಪ್ರಸಿದ್ಧರಾದ ಬೆಂಗಳೂರಿನ ವಾಗ್ಮಿ, ಪ್ರವಚನಕಾರ ಪ್ರೊ. ಎಚ್.ಎಸ್. ಲಕ್ಷ್ಮೀನಾರಾಯಣ ಭಟ್ಟ ಅವರು ಕಗ್ಗದ ಅನೇಕ ಪದ್ಯಗಳನ್ನು ಸುಶ್ರಾವ್ಯವಾಗಿ ಹಾಡುತ್ತ, ವ್ಯಾಖ್ಯಾನಿಸಿದರು. ಡಿವಿಜಿಯವರ ಮಹಾನ್ ಕೃತಿ ಇದು. ಒಂದೊಂದು ಪದ್ಯವೂ ದಾರಿದೀಪದಂತಿದೆ. ಬದುಕು, ಸಾವು, ಜೀವನ, ಸಂಸಾರ, ಕಷ್ಟನಷ್ಟಗಳು, ಸಂತೋಷ ಮೊದಲಾದ ವಿಭಿನ್ನ ಸನ್ನಿವೇಶಗಳನ್ನು ಕಗ್ಗದ ಪದ್ಯಗಳಲ್ಲಿ ಡಿವಿಜಿ ಮಾರ್ಮಿಕವಾಗಿ ವಿಶ್ಲೇಷಿದ್ದಾರೆ. ಪ್ರತಿಯೊಂದಕ್ಕೂ ಓದಿ ಆಸ್ವಾದಿಸಬೇಕು. ಓದುತ್ತಾ-ಓದುತ್ತಾ ಅರ್ಥಮಾಡಿಕೊಳ್ಳುತ್ತಾ ಹೋದಂತೆ ಹೊಸಹೊಸ ಒಳನೋಟಗಳೂ ಕಾಣುವುದೇ ಕಗ್ಗದ ವೈಶಿಷ್ಟ್ಯ. ಜಾತಿ-ಮತ-ಪಂಥಗಳೆಲ್ಲವನ್ನೂಈ ಮೀರಿದ ಕಗ್ಗವನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಸುಇವ ಅಗತ್ಯವಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಸರಸ್ ಫೌಂಡೇಷನ್ ಪರವಾಗಿ ಅಶೋಕ ಹಾರನಹಳ್ಳಿ ಮತ್ತು ಪ್ರೊ. ಲಕ್ಷ್ಮೀನಾರಾಯಣ ಭಟ್ಟರನ್ನು ಗೌರವಿಸಿದರು.



# ಬ್ರಾಹ್ಮಣ ಸಮಾಜಕ್ಕೆ ಬಿ.ಎನ್.ವಿ. ಸುಬ್ರಹ್ಮಣ್ಯ ರವರ ಸೇವೆ ಅಮೂಲ್ಯ

ಖ್ಯಾತ ಉದ್ಯಮಿ ಹಾಗೂ ಜ್ಯೋತಿ ಸಮೂಹ ಸಂಸ್ಥೆಗಳ ಸಂಸ್ಥಾಪಕ ಡಾ. ಬಿ.ಎನ್.ವಿ. ಸುಬ್ರಹ್ಮಣ್ಯ ಅವರು ಮಹಾಸಭೆಗೆ ಹಾಗೂ ಸಮಾಜಕ್ಕೆ ಸಲ್ಲಿಸಿರುವ ಸೇವೆ ಅನನ್ಯವಾದುದು ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ಹೇಳಿದರು.

ಪದ್ಮನಾಭನಗರದಲ್ಲಿರುವ ಬ್ರಾಹ್ಮಣ ಮಹಾಸಭಾದ ವಿದ್ಯಾವಾಸಿನಿ ವಿಪ್ರ ಮಹಿಳಾ ವಸತಿ ನಿಲಯದ ಆವರಣದಲ್ಲಿ ನಡೆದ ಸಮಾರಂಭದಲ್ಲಿ ಡಾ.ಬಿ.ಎನ್.ವಿ. ಸುಬ್ರಹ್ಮಣ್ಯರವರ ಪುತ್ಥಳಿಯನ್ನು ಅನಾವರಣ ಮಾಡಿ, ಭಾಷಣ ಮಾಡಿದ ಅವರು, ಬ್ರಾಹ್ಮಣ ಮಹಾಸಭಾ ಅಭಿವೃದ್ಧಿಗಾಗಿ ಸಮುದಾಯದ ಸಂಘಟನೆಗೆ ಹಾಗೂ ಡಾ.ಬಿ.ಎನ್.ವಿ.ಯವರ ಪರಿಶ್ರಮ ಹಾಗೂ ಸೇವೆ ದೊಡ್ಡದು. ಅವರ ತ್ಯಾಗ ಹಾಗೂ ಪರಿಶ್ರಮದ ಸಲುವಾಗಿ ಮಹಾಸಭಾ ಗಟ್ಟಿಯಾಗಿ ನೆಲೆಯೂರಲು ಸಾಧ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಡಾ.ಬಿ.ಎನ್.ವಿ. ಸುಬ್ರಹ್ಮಣ್ಯರವರ ಸ್ಮರಣಾರ್ಥ ಪ್ರತಿ ವರ್ಷ ಮಹಾಸಭಾದ ವತಿಯಿಂದ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲು ನಿರ್ಧರಿಸಲಾಗಿದೆ ಎಂದೂ ಹೇಳಿದರು.

ವಿದ್ಯಾವಾಸಿನಿ ಮಹಿಳಾ ವಸತಿ ನಿಲಯದಲ್ಲಿ ಸದಸ್ಯ 176 ವಿದ್ಯಾರ್ಥಿನಿಯರಿದ್ದು, ಪ್ರವೇಶ ಬಯಸಿರುವ ಇನ್ನೂ ಹೆಚ್ಚು ಮಂದಿ ನಿರೀಕ್ಷಣಾ ಪಟ್ಟಿಯಲ್ಲಿದ್ದಾರೆ. ಹೊರ ಊರುಗಳಿಂದ ಶಿಕ್ಷಣ, ಉದ್ಯೋಗಕ್ಕಾಗಿ ಬರುವ ಸಮಾಜದ ಹೆಣ್ಣುಮಕ್ಕಳಿಗೆ ಈ ವಸತಿ ನಿಲಯ ಆಸರೆಯಾಗಿದ್ದು, ಸುಸಜ್ಜಿತವಾಗಿದೆ ಎಂದೂ ವಿವರಿಸಿದರು.



ಇತ್ತೀಚಿನ ದಿನಗಳಲ್ಲಿ ಬ್ರಾಹ್ಮಣ ಸಮುದಾಯದ ಕುರಿತಂತೆ ಕೆಲವು ರಾಜಕೀಯ ನಾಯಕರು ನೀಡುತ್ತಿರುವ ಹೇಳಿಕೆಗಳನ್ನು ವಿರೋಧಿಸಿ ತೀವ್ರ ಸ್ವರೂಪದ ಪ್ರತಿಭಟನೆ ಮಾಡಬೇಕೆಂಬ ಒತ್ತಡ ಸಮುದಾಯದ ಜನರಿಂದ, ಬ್ರಾಹ್ಮಣ ಸಂಘಟನೆಗಳಿಂದ ಬರುತ್ತಿದೆ ಎಂದರು.

ಮುಖಂಡರಾದ ಹೆಚ್.ಎನ್. ಹಿರಿಯಣ್ಣಸ್ವಾಮಿ, ಭಾನು ಪ್ರಕಾಶ್‌ಶರ್ಮ, ಪ್ರೊ:ಎಚ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಿ.ಎಸ್. ಹೊನ್ನಪ್ಪ, ಸೀತಮ್ಮ, ನರಸಿಂಹನ್, ಸಿ.ಕೆ. ರಾಮಮೂರ್ತಿ, ಶ್ರೀಮತಿ ಶುಭಮಂಗಳ ಸುನೀಲ್, ಕಟ್ಟೆ ಸತ್ಯನಾರಾಯಣ, ಡಿ.ಎಸ್. ಸಮುದ್ಯತಾ, ಸಾವಿತ್ರಿ ರಮೇಶ್, ಅಂಬಿಕಾ ರಾಮಚಂದ್ರ ಹಾಗೂ ಪದಾಧಿಕಾರಿಗಳು ಹಾಗೂ ಬಿಎನ್‌ವಿ ಅಭಿಮಾನಿ ಬಳಗದ ಹಲವರು ಉಪಸ್ಥಿತರಿದ್ದರು.

# ಮಹಾಸಭಾಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿಯವರಿಗೆ ಸನ್ಮಾನ



ಶಿಕಾರಿಪುರಕ್ಕೆ ಇತ್ತಿಚೆಗೆ ಭೇಟಿ ನೀಡಿದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯಾಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿ ಅವರನ್ನು ಬಿಜೆಪಿ ರಾಜ್ಯ ಉಪಾಧ್ಯಕ್ಷ ಶ್ರೀ ಬಿ.ವೈ. ವಿಜಯೇಂದ್ರ ಗೌರವಿಸಿದರು. ಅವರು ಪ್ರಸ್ತುತ ವಿದ್ಯಮಾನಗಳ ಕುರಿತು ಚರ್ಚಿಸಿ, ಆಗಮಿಸಿದ್ದಕ್ಕೆ ಹರ್ಷ ವ್ಯಕ್ತಪಡಿಸಿದರು. ಅಶೋಕ ಹಾರನಹಳ್ಳಿ ಅವರು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪರವರ ಕುಟುಂಬ ಬ್ರಾಹ್ಮಣ ಸಮಾಜದ ಅಭಿವೃದ್ಧಿಗೆ ಸಹಕಾರಿಯಾಗಿರುವ ಬಗ್ಗೆ ಸ್ಮರಿಸಿ ಕೃತಜ್ಞತೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಲೆನಾಡು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಗುರುಮೂರ್ತಿ, ತಾಲ್ಲೂಕು ಬ್ರಾಹ್ಮಣ ಸಮಾಜದ ಮುಖಂಡ ಪುರೋಹಿತ ಗಣಪತಿ ಭಟ್, ಹರೀಶ ಜೋಯ್ಸ್, ಮಳೂರು ರಾಜು, ರಾಘವೇಂದ್ರ ಕುಲಕರ್ಣಿ, ಅರ್ಚನಾ ರಾವ್, ಸೋಮಶೇಖರ, ಶುಭ ರಘು, ಸುಕನ್ಯ, ಕಾಶೀಬಾಯಿ, ಸುಷ್ಮಾ ದೀಕ್ಷೀತ್, ದಿವಾಕರ ದೀಕ್ಷಿತ್, ಹರನಾಥ್ ರಾವ್ ಸಹಿತ ತಾಲ್ಲೂಕು ವಿಪ್ರ ಸಮಾಜದ ಮುಖಂಡರು ಉಪಸ್ಥಿತರಿದ್ದರು.

# ಅಶೋಕ ಹಾರನಹಳ್ಳಿಯವರಿಗೆ "ರಾಷ್ಟ್ರೀಯ ನ್ಯಾಯ" ಪ್ರಶಸ್ತಿ




ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿಯವರಿಗೆ ಶ್ರೀ ಕೇಶವಾನಂದ ಭಾರತೀ **"ರಾಷ್ಟ್ರೀಯ ನ್ಯಾಯ"** ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಸಂಪಾಜೆಯ ಡಾ. ಕೀಲಾರು ಗೋಪಾಲಕೃಷ್ಣಯ್ಯ ಪ್ರತಿಷ್ಠಾನದ ಆಶ್ರಯದಲ್ಲಿ "ಸಂಪಾಜೆ ಯಕ್ಷೋತ್ಸವ–2023 ಹಾಗೂ ಬ್ರಹ್ಮೈಕ್ಯ ಶ್ರೀ ಕೇಶವಾನಂದ ಭಾರತೀ ಪುಣ್ಯಸ್ಮೃತಿ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ ಕಲ್ಲುಗುಂಡಿ ಶಾಲಾ ವಠಾರದಲ್ಲಿ ಕಾಸರಗೋಡು ಎಡನೀರು ಮಠದ ಜಗದ್ಗುರು ಶಂಕರಾಚಾರ್ಯ ಶ್ರೀ ಸಚ್ಚಿದಾನಂದ ಭಾರತೀ ಮಹಾಸ್ವಾಮಿಗಳ ಅಧ್ಯಕ್ಷತೆಯಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭವು ಯಶಸ್ವಿಯಾಗಿ ನೆರವೇರಿತು.

# ಚಿಕ್ಕಬಳ್ಳಾಪುರ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷರಾಗಿ ಕೆ. ನಾಗಭೂಷಣರಾವ್



ಚಿಕ್ಕಬಳ್ಳಾಪುರ : ಜಿಲ್ಲಾ ಬ್ರಾಹ್ಮಣರ ಸಂಘಕ್ಕೆ ನೂತನವಾಗಿ ಗೌರಿಬಿದನೂರು ತಾಲ್ಲೂಕಿನ ಮಾಜಿ ಸಂಸದ ದಿ. ವಿ. ಕೃಷ್ಣರಾವ್ ಅವರ ಪುತ್ರ ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರೂ ಆದ ಶ್ರೀ ಕೆ. ನಾಗಭೂಷಣರಾವ್ ಅವರನ್ನು ನಿಕಟಪೂರ್ವ ಅಧ್ಯಕ್ಷ ಅಟ್ಟೂರು ವೆಂಕಟೇಶ್ ಹಾಗೂ ಜಿಲ್ಲಾ ನೌಕರರ ಸಂಘದ ಅಧ್ಯಕ್ಷ ಆದಿಶೇಷರಾವ್ ಅವರ ಅನುಮೋದನೆ ಮೇರೆಗೆ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಪ್ರತಿ ತಾಲ್ಲೂಕಿನಿಂದ ವಿಪ್ರ ಮುಖಂಡರು ಆಗಮಿಸಿ, ನೂತನ ಕಾರ್ಯಕಾರಿ ಮಂಡಳಿ ರಚಿಸಲಾಯಿತು. ನೂತನ ಅಧ್ಯಕ್ಷರು ಹಾಗೂ ಉಪಾಧಿಕಾರಿಗಳಿಗೆ ಮಹಾಸಭೆಯ ಹಾರ್ದಿಕ ಅಭಿನಂದನೆ.

# ಕೂಡ್ಲಿ ಮಠದ ಸಮಸ್ಯೆ ಪರಿಹಾರಕ್ಕೆ ಮಹಾಸಭೆಯ ಪ್ರಯತ್ನ



ಶ್ರೀಮದ್ ಜಗದ್ಗುರು ಶಂಕರಾಚಾರ್ಯ ಪರಂಪರೆಯ ಕೂಡ್ಲಿ ಮಠಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಚಿಸಿರುವ ಸಮಿತಿ ಈಗ ಹೆಬ್ಬಳ್ಳಿ ದತ್ತಾವಧೂತರ ಮಾರ್ಗದರ್ಶನದಲ್ಲಿ ಮುಂದುವರೆಯಲು ತೀರ್ಮಾನಿಸಿದೆ.

ದತ್ತಾವಧೂತರ ನೇತೃತ್ವದಲ್ಲಿ ಮುಂದುವರೆಯಲು ಪ್ರಮೋದ್ ಮುತಾಲಿಕ್ ಕೂಡ ಒಪ್ಪಿರುತ್ತಾರೆ.

ಅಂದಿನ ಸಮಾಲೋಚನಾ ಸಭೆಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಅಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿ, ಮತ್ತೂರಿನ ಕೇಶವ ಅವಧಾನಿಗಳು, ಡಾ. ಭಾನುಪ್ರಕಾಶ್ ಶರ್ಮ, ಶಿವಮೊಗ್ಗ ಜಿಲ್ಲಾ ಬ್ರಾಹ್ಮಣ ಸಭಾ ಅಧ್ಯಕ್ಷ ನಟರಾಜ್ ಭಾಗವತ್, ವಕೀಲರುಗಳಾದ ಸುಧಾಕರ್ ಬಾಬು, ರಾಜೇಶ್ ಹಾಗೂ ಅನಂತದತ್ತ, ತರೀಕೆರೆಯ ಲೆಕ್ಕಪರಿಶೋಧಕ ಶ್ರೀನಿವಾಸ ಉಪಸ್ಥಿತರಿದ್ದರು. ಸಭೆಯಲ್ಲಿ ಸಮಸ್ಯೆ ಪರಿಹಾರ ಕುರಿತು ಸಮಾಲೋಚನೆ ನಡೆಸಿದರು.



## ಡಾ|| ಕೆ.ಪಿ. ಪುತ್ತೂರಾಯರಿಗೆ ಸನ್ಮಾನ

ದಿನಾಂಕ 22.02.2023ರಂದು ಶ್ರೀಕ್ಷೇತ್ರ ಮಂತ್ರಾಲಯದಲ್ಲಿ ನಡೆದ ಶ್ರೀ ರಾಘವೇಂದ್ರಸ್ವಾಮಿಗಳ 402ನೇ ಪಟ್ಟಾಭಿಷೇಕದ ಸುಸಂದರ್ಭದಲ್ಲಿ ನಾನಾ ಕ್ಷೇತ್ರಗಳಲ್ಲಿ ಸಾಧಿಸಿದ ಸಾಧನೆಗಳನ್ನು ಪರಿಗಣಿಸಿ, ಡಾ|| ಕೆ.ಪಿ. ಪುತ್ತೂರಾಯರು, ಮಾಜಿ ಅಧ್ಯಕ್ಷರು, ಅಖಿಲ ಭಾರತ ಬ್ರಾಹ್ಮಣ ಸಂಘಗಳ ಒಕ್ಕೂಟ ಇವರನ್ನು ಬೆಳ್ಳಿ ತಟ್ಟೆ, ಹೂ ಹಾರ, ಹಣ್ಣು, ಶಾಲು. ಮತ್ತು 10 ಸಾವಿರ ನಗದು ಸಹಿತ ಪ್ರಶಸ್ತಿ ಪತ್ರ ನೀಡಿ ಸನ್ಮಾನಿಸಲಾಯಿತು.

## ಚಿತ್ರದುರ್ಗದಲ್ಲಿ ಹರಿದಾಸ ಹಬ್ಬ






ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ಚಿತ್ರದುರ್ಗದ ಗಾಯತ್ರಿ ಕಲ್ಯಾಣ ಮಂದಿರದಲ್ಲಿ ಹರಿದಾಸ ಹಬ್ಬ–2023 ಕಾರ್ಯಕ್ರಮದಲ್ಲಿ ಭಾಗವಹಿಸಿ, ಉಡುಪಿ ಶ್ರೀ ಪಲಿಮಾರು ಮಠಾಧೀಶರ ಆಶೀರ್ವಾದವನ್ನು ಪಡೆದರು.

ಈ ಸಂದರ್ಭದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಸಂಘಟನಾ ಕಾರ್ಯದರ್ಶಿ ಶ್ರೀ ಬಿಎಸ್ ರಾಘವೇಂದ್ರ ಭಟ್, ಕಾರ್ಯಕಾರಿ ಸಮಿತಿ ಸದಸ್ಯ ಉಮೇಶ ಶಾಸ್ತ್ರಿ ಮತ್ತು ಚಿತ್ರದುರ್ಗ ಜಿಲ್ಲಾ ಬ್ರಾಹ್ಮಣ ಮುಖಂಡರ ಅವರ ವಿಪ್ರಭಕ್ತರು ಭಾಗವಹಿಸಿದ್ದರು.

## ವರದರಾಜ್‌ಗೆ ಪೋಲೀಸ್ ಪದಕ

ಶ್ರೀ ವರದರಾಜ್ ಅವರು ಪ್ರಾಮಾಣಿಕರಾಗಿದ್ದು, ನಿಷ್ಠಾವಂತ. ಎಲ್ಲಾ ಸಂದರ್ಭಗಳಲ್ಲಿ ಕ್ರಿಯಾಶೀಲರಾಗಿ ಸೇವೆಯಲ್ಲಿ ಪಾಲ್ಗೊಳ್ಳುತ್ತಾರೆ. 30 ವರ್ಷಗಳ ಸೇವಾವಧಿಯಲ್ಲಿ ತಮ್ಮ ನಿಸ್ಪೃಹ ಸೇವೆಯ ಮೂಲಕ ಹೋಂಗಾರ್ಡ್ (ಗೃಹರಕ್ಷಕ ದಳ) ಮತ್ತು ಜನತೆಗೆ ಚಿರಪಚಿತರಾಗಿದ್ದು ಅಪಾರ ಜನಪ್ರಿಯತೆ ಗಳಿಸಿದ ವ್ಯಕ್ತಿ.

ಶ್ರೀ ವರದರಾಜ್ ಕುಲಕರ್ಣಿ ಅವರ ಶ್ರೇಷ್ಠ ಸೇವಾ ದಾಖಲೆಯನ್ನು ಗುರುತಿಸಿ ಭಾರತ ಸರ್ಕಾರ ಪ್ರಸಕ್ತ ಸಾಲಿನ ಪ್ರತಿಷ್ಠಿತ ರಾಷ್ಟ್ರಪತಿ ಪದಕ ನೀಡಿ ಗೌರವಿಸಿದೆ.

ಭಗವಂತನು ಶ್ರೀಯುತರಿಗೆ ಅಯುರಾರೋಗ್ಯ ಸಿರಿ ಸಂಪತ್ತುಗಳನ್ನು ಅನುಗ್ರಹಿಸಲಿ, ತನ್ಮೂಲಕ ಶ್ರೀಯುತರ ಕಾರ್ಯದಕ್ಷತೆ ಹೆಚ್ಚಾಗಿ ನಾಡಿಗೆ ಇವರ ಸೇವೆಯ ಅಮೂಲ್ಯ ಪ್ರಯೋಜನ ಲಭ್ಯವಂತಾಗಲಿ ಎಂದು ಮಹಾಸಭೆಯು ಹಾರೈಸುತ್ತದೆ.



## ರಜತ ಪಲ್ಲಕ್ಕಿ ಸಮರ್ಪಣೆ



ಹೊನ್ನಾವರದ ಬಳಿ ಇರುವ ಪ್ರಖ್ಯಾತ ಮುಗುವ ಸುಬ್ರಮಣ್ಯ ಕ್ಷೇತ್ರದಲ್ಲಿ ರಜತ ಪಲ್ಲಕ್ಕಿ ಸಮರ್ಪಣೆ ಸಮಾರಂಭ ಇತ್ತೀಚೆಗೆ ನಡೆಯಿತು.

ಶ್ರೀ ಶ್ರೀ ರಾಘವೇಶ್ವರ ಭಾರತೀ ಸ್ವಾಮಿಗಳು ಸಾನ್ನಿಧ್ಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಭಾಗವಹಿಸಿದ್ದರು.

## ಡಾ|| ಹೆಚ್.ಆರ್. ನಾಗೇಂದ್ರರವಗೆ ಮಹಾಸಭಾದಿಂದ ಗೌರವ ಸಮರ್ಪಣೆ



ಇತ್ತಿಚೆಗೆ SVyasa ವಿಶ್ವವಿದ್ಯಾಲಯದಲ್ಲಿ ಹೆಚ್.ಆರ್. ನಾಗೇಂದ್ರ ಅವರಿಗೆ 80 ನೇ ವರ್ಷದ ಹುಟ್ಟುಹಬ್ಬದ ಸಂದರ್ಭದಲ್ಲಿ ಮಹಬೋಧಿ ಸಂಘದ ಭಿಕ್ಕು ಸಂಗಸೇನ ಅವರ ಸಮ್ಮುಖದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾ ಪರವಾಗಿ ಈರ್ವರನ್ನು ಗೌರವಿಸಲಾಯಿತು. ಈ ಸಂದರ್ಭದಲ್ಲಿ svyasaದ ಉಪಕುಲಪತಿ ಡಾ|| ಮಂಜುನಾಥ ಶರ್ಮಾ, ಕುಲಸಚಿವ ಶಿವಶಂಕರ್ ಸಾಯಿ ಮತ್ತು ವಿಶ್ವವಿದ್ಯಾಲಯದ ವಿಶಿಷ್ಟ ಪ್ರಾಧ್ಯಾಪಕ ಶ್ರೀ ಎಂ.ಕೆ. ಶ್ರೀಧರ್ ಅವರು ಉಪಸ್ಥಿತರಿದ್ದರು.

## ಶ್ರೀ ತ್ಯಾಗರಾಜರ ಆರಾಧನೆ ಆಚರಣೆ



**ಮಲ್ಲೇಶ್ವರಂ ಬ್ರಾಹ್ಮಣ ಸಭಾ – ತ್ಯಾಗರಾಜರ ಆರಾಧನೆ ಕಾರ್ಯಕ್ರಮ**

ದಿವ್ಯ ಸಾನ್ನಿಧ್ಯ ಶ್ರೀ ಶ್ರೀ ಗೋವಿಂದಾನಂದ ಸರಸ್ವತಿ ತಲಕಾಡು ಮಠ, ಶ್ರೀ ಶ್ರೀ ವಿದ್ಯಾವಲ್ಲಭ ಮಾಧವತೀರ್ಥ ಸ್ವಾಮಿಗಳು. ಶ್ರೀ ಶ್ರೀ ಯತಿರಾಜ್ ನಾರಾಯಣ ರಾಮಾನುಜ ಜೀಯರ್ ಸ್ವಾಮಿಗಳು ಕಾರ್ಯಕ್ರಮ ಉದ್ಘಾಟಿಸಿದರು. ಪಾವಗಡ ಪ್ರಕಾಶ ರಾಯರ ನೇತೃತ್ವದಲ್ಲಿ ನಡೆಯಿತು. ಸಂಗೀತ ವಿದ್ವಾಂಸರಾದ ನಾಗೇಂದ್ರ ಶಾಸ್ತ್ರಿ ಅವರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಆಮಂತ್ರಿತರಾಗಿ ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ್ ಹಾರನಹಳ್ಳಿ ಭಾಗವಹಿಸಿದ್ದರು. ಎಸ್.ಕೆ. ಕೌಶಿಕ್ ಮತ್ತು ಶ್ರೀಮತಿ ರಶ್ಮಿ ಕಿರಣ್ ಅವರ ಸಹಕಾರದಿಂದ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

# ಗರಡಾ ಫೌಂಡೇಶನ್‌ನಿಂದ ಪ್ರತಿಭಾ ಪುರಸ್ಕಾರ



ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ನಲ್ಲಿ ಚಿಕ್ಕಪೇಟೆ ಬ್ರಾಹ್ಮಣ ಸಭಾ ಮತ್ತು ಗರುಡ ಫೌಂಡೇಶನ್ ವತಿಯಿಂದ ಆಯೋಜಿಸಲಾಗಿದ್ದ ಪತಿಭಾ ಪುರಸ್ಕಾರ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಮಾನ್ಯ ಶ್ರೀ ಉದಯ್ ಬಿ ಗರುಡಾಚಾರ್ ಮುಖ್ಯ ಅತಿಥಿಯಾಗಿ ಭಾಗವಹಿಸಿದರು.

ಈ ಸಮಾರಂಭದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಮುಖರಾದ ಶ್ರೀ ವಿ ಮಂಜುನಾಥ್, ಗರುಡ ಫೌಂಡೇಶನ್ ಮುಖ್ಯಸ್ಥೆ ಶ್ರೀಮತಿ ಮೇದಿನಿ ಉದಯ್ ಗರುಡಾಚಾರ್, ಚಿಕ್ಕಪೇಟೆ ಬ್ರಾಹ್ಮಣ ಸಭಾದ ಅಧ್ಯಕ್ಷರಾದ ಶ್ರೀ ಎಸ್ ವೆಂಕಟೇಶ್, ಚಿಕ್ಕಪೇಟೆ ಬ್ರಾಹ್ಮಣ ಸಭಾದ ಪದಾಧಿಕಾರಿಗಳು ಹಾಗೂ ವಿಪ್ರ ಸಮುದಾಯದ ಬಾಂಧವರು ಉಪಸ್ಥಿತರಿದ್ದರು.



## ಸತ್ಯೇಶ್ ಬೆಳ್ಳೂರ್‌ರವರ ನೂತನ ಕೃತಿಗಳು

ಸತ್ಯೇಶ್ ಎನ್. ಬೆಳ್ಳೂರ್ ಅವರು ನಮ್ಮ ವಿಪ್ರನುಡಿ ಆಂಗ್ಲಪತ್ರಿಕೆಯ ಪ್ರಧಾನ ಸಂಪಾದಕರು. ಕವಿಗಳು, ಚಿಂತಕರು ಹಾಗೂ ಮ್ಯಾನೇಜ್ಮೆಂಟ್ ಗುರು ಎಂದೇ ಕನ್ನಡ ಸಾಹಿತ್ಯವಲಯದಲ್ಲಿ ಪರಿಚಿತರಾಗಿದ್ದಾರೆ. ಇದುವರೆಗೂ ಅವರ 22 ಕೃತಿಗಳು ಲೋಕಾರ್ಪಣೆಗೊಂಡಿವೆ.

ಇತ್ತೀಚೆಗೆ ಅವರ ಎರಡು ಕೃತಿಗಳು ಪ್ರಕಟಗೊಂಡ ಸಂದರ್ಭದಲ್ಲಿ ಅವರಿಗೆ ಮಹಾಸಭೆಯ ಹಾರ್ದಿಕ ಅಭಿನಂದನೆಗಳು.

1. ದಿಕ್ಸೂಚಿ – ಬದುಕನ್ನು ಕಟ್ಟಿಕೊಡುವ ನವ್ಯಜೀವಿಯ ಚಿಂತನೆಗಳು
   (ಪ್ರಕಾಶಕರು : ತೇಜು ಪಬ್ಲಿಕೇಶನ್ಸ್)

**ಈ ಕೃತಿಯಲ್ಲಿ ಒಟ್ಟು 1323 ಛಂದೋಬದ್ಧ ಮುಕ್ತಕಗಳಿವೆ. ಈ ಪದ್ಯಗಳ ಕುರಿತು ಕವಿಯೇ ಹೇಳುವ ಮಾತು:**

ಹಳೆಯ ತತ್ತ್ವಗಳನ್ನು ಹೊಸತೊಂದು ದೃಷ್ಟಿಯಲಿ ।
ಮೇಳಯಿಸುವುದು ತಾನೆ ನವಜೀವದೊಲುಮೆ ॥
ಹಳೆಬೇರಿನಿಂದಿಳೆಯು ನವಕುಸುಮ ಹೊಸೆವಂತೆ ।
ತಳೆದ ಪದ್ಯಗಳಿಲ್ಲಿ ! – ನವ್ಯಜೀವಿ ॥

ಇಲ್ಲಿನ ಮುಕ್ತಕಗಳು ಅಧ್ಯಾತ್ಮದಿಂದ ಹಿಡಿದು ಆಧುನಿಕ ಬದುಕಿನ ಎಲ್ಲ ಸ್ತರಗಳಲ್ಲಿಯೂ ಹೊಸ ದೃಷ್ಟಿಕೋನವನ್ನು ಬಿಂಬಿಸುತ್ತವೆ.

ಈ ಕೃತಿಯನ್ನು ಕೆಳಗಿನ ಲಿಂಕ್ ಬಳಸಿ ಖರೀದಿಸಬಹುದು :
https://www.vividlipi.com/bookstore.articles/diksoochi-printbook

2. ಬೊಗಸೆಯಲ್ಲಿ ವಿಶ್ವ – ನಾ ಕಂಡುಕೊಂಡ ಸತ್ಯಗಳು
   (ಪ್ರಕಾಶಕರು : ವಿವಿಡ್ ಲಿಪಿ ಪ್ರಕಾಶನ)

ಈ ಕೃತಿಯಲ್ಲಿ, ಲೇಖಕರು (ಐವತ್ತಕ್ಕೂ ಹೆಚ್ಚು ರಾಷ್ಟ್ರಗಳಲ್ಲಿ ಯಶಸ್ವಿಯಾಗಿ ವಾಣಿಜ್ಯ ವ್ಯವಹಾರ ಮಾಡಿದ್ದಾರೆ) ತಮ್ಮ ಪ್ರವಾಸದಲ್ಲಿ ಕಂಡುಕೊಂಡ ಸತ್ಯಗಳನ್ನು ಅನಾವರಣಗೊಳಿಸಿದ್ದಾರೆ.

ಈ ಕೃತಿಯನ್ನು ಕೆಳಗಿನ ಲಿಂಕ್ ಬಳಸಿ ಖರೀದಿಸಬಹುದು:
https://www.vividlipi.com/bookstore/travelogue/bogaseyalli-vishwa-printbook/

**ಕೃತಿಗಳು ಪುಸ್ತಕ ಮಳಿಗೆಗಳಲ್ಲಿ ಲಭ್ಯವಿದೆ.**

**ಲೇಖಕರ ವಿವರಗಳು : ಸತ್ಯೇಶ್ ಎನ್. ಬೆಳ್ಳೂರ್,** 9845187797 । satyesh.bellur@gmail.com

# ಚಿಕ್ಕಮಗಳೂರಿನಲ್ಲಿ ಯಶಸ್ವಿ ಭಜನೋತ್ಸವ






ಶ್ರೀ ಶಾಂಕರ ತತ್ವ ಪ್ರಸಾರ ಅಭಿಯಾನ, ಶೃಂಗೇರಿ ಶ್ರೀ ಶಂಕರ ಮಠ ಹಾಗೂ ಬ್ರಾಹ್ಮಣ ಮಹಾಸಭಾ, ಚಿಕ್ಕಮಗಳೂರು ಇವರ ಸಹಯೋಗದಲ್ಲಿ ಇತ್ತೀಚೆಗೆ ನಡೆದ ಶ್ರೀ ಶಾರದಾ ಶಂಕರ ಭಕ್ತ ಮಂಡಳಿಯ ರಾಜ್ಯದಲ್ಲೇ ಮೊತ್ತ ಮೊದಲ "ಭಜನೋತ್ಸವ" ಅತ್ಯಂತ ಯಶಸ್ವಿಯಾಗಿ ಸುಸಂಪನ್ನವಾಯಿತು. ನೂರಾರು ಮಹಿಳೆಯರು ಸಂಭ್ರಮದಿಂದ ಭಜನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಜಾಹಿರಾತು

## ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ

## Sri Srinivasa Nilaya Dharmika Sabha Mandira

ಸೀತಾ ಸರ್ಕಲ್‌ನಿಂದ ಗಿರಿನಗರಕ್ಕೆ ಹೋಗುವ ಮಾರ್ಗ
ಶ್ರೀ ವಿವೇಕಾನಂದ ಪಾರ್ಕ್ ಎದುರು, ಬೆಂಗಳೂರು-560085

ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ ಎಂಬ ನೂತನ ಕಟ್ಟಡದಲ್ಲಿ ಉಪನಯನ, ಮದುವೆ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮ-ಹವನ ಸತ್ಯನಾರಾಯಣ ಪೂಜೆ ಇನ್ನಿತರ ದೇವತಾ ಕಾರ್ಯಗಳು, ವೈಕುಂಠ ಸಮಾರಾಧನೆ, ಅನ್ನ ದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು ಇತರ ಶುಭ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.

**ಸ್ಥಳದ ಬಾಡಿಗೆ ಇರುವುದಿಲ್ಲ.**

ದಕ್ಷಿಣ ಮತ್ತು ಉತ್ತರ ಭಾರತದ
ಅಡುಗೆಯನ್ನು ಮಡಿಯಲ್ಲಿ ಮಾಡಲಾಗುವುದು
ವಿವರಗಳಿಗಾಗಿ ಕಾರ್ಯಾಲಯವನ್ನು ಸಂಪರ್ಕಿಸಿ
**ದೂರವಾಣಿ : 2672 2267, 98866 55755**

# ಬಲಗೊಳ್ಳುತ್ತಿರುವ ಮಹಾಸಭಾ

**– ರಾಘವೇಂದ್ರ ಭಟ್,**
ಸಂಘಟನಾ ಕಾರ್ಯದರ್ಶಿ, ಅಖಿಲ ಕರ್ನಾಟಕ ಮಹಾಸಭಾ (ರಿ.)



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವಿಪ್ರರ ಏಕೈಕ ರಾಜ್ಯದ ಮಾತೃ ಸಂಸ್ಥೆ. ಸಂಸ್ಥೆ ಕಳೆದ ವರ್ಷ ಡಿಸೆಂಬರ್ 2021ರ 19ರಂದು ಅಧ್ಯಕ್ಷ ಸ್ಥಾನಕ್ಕೆ ಚುನಾಯಿತರಾದ ಶ್ರೀ ಅಶೋಕ್ ಹಾರನಳ್ಳಿ ಅವರ ಮಾರ್ಗದರ್ಶನದಲ್ಲಿ 2022ರ ಜನವರಿ 26ರಂದು ಆಡಳಿತ ಮಂಡಳಿ ಸ್ಥಾಪನೆಗೊಂಡಿತು. ಮಾರ್ಗದರ್ಶನದಲ್ಲಿ ಆಡಳಿತ ಮಂಡಳಿಗೆ ಆನೆ ಬಲ ತುಂಬಿದ್ದು ನಿಜಕ್ಕೂ ಮರೆಯುವಂತಿಲ್ಲ ಮಹಾಸಭೆಯ ಮೂರು ಸೂತ್ರಗಳನ್ನು ಹಿಡಿದುಕೊಂಡು ರಾಜ್ಯಾದ್ಯಂತ ಪ್ರವಾಸ ಮಾಡುವ ಅವಕಾಶ ನನಗೆ ಸಿಕ್ಕಿದ್ದು ಬಹಳ ಸಂತೋಷದ ವಿಷಯ. ಪ್ರತಿಯೊಂದು ಜಿಲ್ಲೆಗೂ ಭೇಟಿಯಾಗುವ ಮೂಲಕ ಅಲ್ಲಿಯ ಸಮಸ್ಯೆಗಳಿಗೆ ಸ್ಪಂದನೆ ಮಹಾ ಸಭೆಯ ಯೋಜನೆಗಳನ್ನು ತಿಳಿಸುವ ಸೇವೆ ಮಾಡುವ ಅವಕಾಶ ನಿಜಕ್ಕೂ ಒಂದು ನನಗೆ ಹೆಮ್ಮೆ ಅನಿಸಿದೆ. ದಕ್ಷಿಣ ಕನ್ನಡ ಮಂಗಳೂರು ಭೇಟಿ ನೀಡಿದಾಗ ಮಹಾಸಭೆಯ ಸದಸ್ಯತ್ವ ಅಭಿಯಾನವನ್ನು ಶ್ರೀಯುತ ಮಹೇಶ್ ಕಜಿಯವರ ಮಾರ್ಗದರ್ಶನದಲ್ಲಿ ತಂಡದೊಂದಿಗೆ ಮಾಡಿದಾಗ ಸಂತೋಷವಾಯಿತು. ಉಡುಪಿ ಜಿಲ್ಲೆಯಲ್ಲಿ ಶ್ರೀಯುತ ಕೃಷ್ಣಾನಂದ್ ಚಾತ್ರ ಅವರೊಂದಿಗೆ ಬ್ರಾಹ್ಮಣ ಸಂಘಗಳಿಗೆ ಭೇಟಿಕೊಟ್ಟು ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿದ್ದು ಬಹಳ ಆನಂದ ಕರವಾದ ಸಂಗತಿ. ಗುರುಭಕ್ತರಾದ ಅಶೋಕ ಹಾರನಹಳ್ಳಿ ಅವರ ಮಾರ್ಗದರ್ಶನದಂತೆ ರಾಜ್ಯದಲ್ಲಿ ಚತುರ್ಮಾಸಕ್ಕೆ ಕೂತಂತ ಯತಿಗಳ ಪಾದಪೂಜೆ ಹಾಗೂ ಗುರುಕಾಣಿಕೆ ಮಹಾಸಭೆಗೆ ಸಂಪೂರ್ಣ ಆಶೀರ್ವಾದವೆ ಸರಿ. ಹೈದರಾಬಾದ್‌ನಲ್ಲಿ ಚಾತುರ್ಮಾಸದಲ್ಲಿದ್ದ ಶ್ರೀ ಪೇಜಾವರ ಶ್ರೀಗಳ ದರ್ಶನ ಭಾಗ್ಯ ಗುರುಗಳಿಗೆ ಕಾಣಿಕೆ, ಸಮರ್ಪಣೆ ಹಂಪೆಯ ವಿದ್ಯಾರಣ್ಯ ಶ್ರೀಗಳಿಗೆ ಶ್ರೀಯುತ ಪ್ರಮೋದ್ ಮನೋಳಿ ತಂಡದಿಂದ ಗುರು ಕಾಣಿಕೆ ಸಮರ್ಪಣೆ ಎಲ್ಲಾ ಗೌರವ ಮಹಾಸಭೆಯ ಅಧ್ಯಕ್ಷರಿಗೆ ಸಲ್ಲುತ್ತದೆ. ಅದೇ ರೀತಿ ಶೃಂಗೇರಿಯ ಸ್ವಾಮಿಗಳವರ ಆಶೀರ್ವಾದದಿಂದ ಕೊಪ್ಪ ಒಂದೇ ತಾಲೂಕಿನಲ್ಲಿಯೇ ಸುಮಾರು 700 ಸದಸ್ಯತ್ವ ಅಭಿಯಾನ ಮಾಡಿದ್ದು ನನಗೆ ಬಹಳ ಹೆಮ್ಮೆಯ ವಿಷಯವಾಗಿದೆ.

**ಸಂಘಟಾನ ಕಾರ್ಯದರ್ಶಿ ಶ್ರೀ ರಾಘವೇಂದ್ರ ಭಟ್‌ರವರು ಉಪಾಧ್ಯಕ್ಷ ಪ್ರಮೋದ ಮನೋಳಿ ಹಾಗೂ ಕಾರ್ಯಕಾರಿಣಿ ಸದಸ್ಯ ಶ್ರೀ ಉಮೇಶ್ ಶಾಸ್ತ್ರಿಯವರೊಡನೆ ರಾಜ್ಯಾದ್ಯಾಂತ ನಡೆಸಿದ ಸದಸ್ಯತ್ವ ಅಭಿಯಾನ ಪ್ರವಾಸದ ಸಂಕ್ಷಿಪ್ತ ಮಾಹಿತಿ**

ಅದೇ ರೀತಿ ಉತ್ತರ ಕರ್ನಾಟಕದ ಆರು ಜಿಲ್ಲೆ ಪ್ರವಾಸ ಮಾಡುವ ಯೋಚನೆ ಬಂದಾಗ ಉಪಾಧ್ಯಕ್ಷರಾದ ಶ್ರೀಯುತ ಪ್ರಮೋದ್ ಮನೋಳಿ ಅವರೊಂದಿಗೆ ಸೇರಿ ಕೊಂಡು ಚರ್ಚಿಸಿ ಪ್ರವಾಸ ಕೈ ಕೊಂಡಿದ್ದು ಪ್ರಯೋಜನ ಕಾರಿಯಾದ ವಿಷಯ. ನಮ್ಮೊಂದಿಗೆ ಶ್ರೀಯುತ ಉಮೇಶ್ ಶಾಸ್ತ್ರಿ ಕಾರ್ಯಕಾರಿಣಿ ಸಮಿತಿ ಸದಸ್ಯರು ಸತತವಾಗಿ ನಮ್ಮೊಂದಿಗೆ ಇದ್ದದ್ದು ಬಹಳ ಸಂತೋಷ.

ಅದೇ ರೀತಿ ಹಾವೇರಿ ಜಿಲ್ಲೆಯ ಅಧ್ಯಕ್ಷರಾದ ಶ್ರೀಯುತ ವಸಂತ್ ಮುಕ್ತಲಿ ಶ್ರೀಧರ್, ಪ್ರಭಾಕರ್ ಮಂಗಳೂರು ಅವರ ತಂಡದ ಜೊತೆಗೆ ಸಭೆ ಸೇರಿ ಸದಸ್ಯತ್ವ ಅಭಿಯಾನವನ್ನು ಮಾಡಲಾಯಿತು. ಹಾವೇರಿಯ ಪುರೋಹಿತ ವರ್ಗ ಅರ್ಚಕರ ಪರಿಷತ್ತಿನಿಂದ ಶ್ರೀನಿವಾಸ್ ಶಿವಪೂಜಿ ಅವರ ಅಧ್ಯಕ್ಷತೆಯಲ್ಲಿ ಲಕ್ಷ ಕುಂಕುಮಾರ್ಚನೆ ಭಾಗಿಯಾಗುವ ಸೌಭಾಗ್ಯ ನಮ್ಮದಾಗಿತ್ತು. ಉಪಾಧ್ಯಕ್ಷರಾದ ಪ್ರಮೋದ್ ಮನೋಳಿ ಅವರು ಕಾರ್ಯಕಾರಿಣಿ ಸದಸ್ಯ ಸದಸ್ಯರಾದ ಶ್ರೀಯುತ ಹನುಮಂತ್ ಡಂಬಲ್, ಜಂಟಿ ಕಾರ್ಯದರ್ಶಿ ವಿಜಯ ನಾಡ ಜೋಶಿ ಶ್ರೀ ಎ ಸಿಗೋಪಾಲ್ ಡಾಕ್ಟರ್ ಭಾಸ್ಕರ್ ಪಾಟೀಲ್ ಸುನಿಲ್ ಗುಮಸ್ತಿ ಅನೇಕ ಗಣ್ಯ ವ್ಯಕ್ತಿಗಳು ಮಹಾಸಭೆಗೆ ಸಂಪೂರ್ಣ ಸಹಕಾರ ನೀಡುವ ಭರವಸೆಯನ್ನು ಕೊಟ್ಟರು. ಧಾರವಾಡದ ಶ್ರೀ ಆರ್ ಡಿ ಕುಲಕರ್ಣಿಯವರ ಮಾರ್ಗದರ್ಶನದಲ್ಲಿ ಹಿರಿಯರ ಒಂದು ಸಭೆ ಕರೆದು ಅಲ್ಲಿಯ ಸಮಸ್ಯೆಗಳನ್ನು ತಿಳಿದರು. ನವಲಗುಂದಕ್ಕೆ ಪ್ರಯಾಣ ಅಲ್ಲಿಯ ಹಿರಿಯರ ತಂಡದೊಂದಿಗೆ ಮಹಾ ಸಭೆ ಯೋಜನೆಗಳನ್ನು ನೀಡಿ ಹತ್ತಿರದ ಬಾಗಲಕೋಟೆಗೆ ಪ್ರಯಾಣ ಬಾಗಲಕೋಟೆ ಉಪಾಧ್ಯಕ್ಷರಾದ ವೈದ್ಯರಾದ ಶ್ರೀ ಗಿರೀಶ್ ಮಾಸೂರ್ಕರ್ ಮಾರ್ಗದರ್ಶನದಲ್ಲಿ ಅವರ ಅಧ್ಯಕ್ಷತೆಯಲ್ಲಿ ನೂರಾರು ಜನರ ಸಭೆ ಸೇರಿಸಿ ಮಹಾಸಭೆಗೆ ಸಂಪೂರ್ಣ ಸಹಕಾರ ನೀಡುವುದಾಗಿ ಭರವಸೆ ಕೊಟ್ಟರು.



ನಂತರದ ಜಿಲ್ಲೆ ಬಿಜಾಪುರ ಪತ್ರಿಕೆಯ ಸಂಪಾದಕರಾದ ಶ್ರೀ ವಾಸು ಹೆರಕಲ್ ಅವರ ಮಾರ್ಗದರ್ಶನದಂತೆ ಸುಮಾರು 500 ಸದಸ್ಯತ್ವ ನೀಡುವುದಾಗಿ ಭರವಸೆ ಕೊಟ್ಟರು. ಗಾಯತ್ರಿ ಭವನ ಕಟ್ಟಲು ಶ್ರೀ ಹರಿ ಗೊಳಸಂಗ್ ಅವರು ಸರ್ಕಾರದ ಜಾಗಿಕೊಡಲು ಒಪ್ಪಿಕೊಂಡರು. ಅಂದು ಶಾಸಕರಾದ ಬಸವರಾಜ್ ಯತ್ನಾಳ್ ಪಾಟೀಲ್ ವಿಪ್ರ ಸಮಾಜಕ್ಕೆ ಒಂದು ಸರ್ಕಾರದ ಮಟ್ಟದಲ್ಲಿ ಹೇಳಿಕೆ ಕೊಟ್ಟಿದ್ದರಿಂದ ನಾವು ಅವರಿಗೆ ಸನ್ಮಾನ ಕೂಡ ಮಾಡಿ ಬಂದಿದ್ದು ವೈಯಕ್ತಿಕವಾಗಿ ನಮ್ಮ ತಂಡಕ್ಕೂ ಬಹಳ ಸಂತೋಷವೆನಿಸಿದೆ.

ಗುಲ್ಬರ್ಗ ಜಿಲ್ಲೆಯೇ ಬಂದಾಗ ಅಲ್ಲಿಯ ನಮ್ಮ ಜಂಟಿ ಕಾರ್ಯದರ್ಶಿಗಳು ಶ್ರೀ ರಾಘವೇಂದ್ರ ಕುಲಕರ್ಣಿ ನಮ್ಮನ್ನು



ಬರಮಾಡಿಕೊಂಡಿದ್ದು ತಮಗೆಲ್ಲ ರೀತಿಯ ಸಹಕಾರ ನೀಡಿ ಒಂದು ದೊಡ್ಡ ಸಭೆಯನ್ನೇ ಏರ್ಪಾಡು ಮಾಡಿದ್ದರು. ಶ್ರೀ ರಾಘವೇಂದ್ರ ಸ್ವಾಮಿ ಮಠದಲ್ಲಿ ಮಹಿಳಾ ಮಂಡಳಿಗಳಿಂದ ಮಹಾಸಭೆಗೆ ಸಂಪೂರ್ಣ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಗುಲ್ಬರ್ಗದ ಅರ್ಚಕ ಮತ್ತು ರೋಹಿತ್ ಪರಿಷತ್ ಸಂಘದ ಅಧ್ಯಕ್ಷರಾದ ಗುಂಡಚಾರ್ಯ ಜೋಶಿ ಅವರ ನೇತೃತ್ವದಲ್ಲಿ ಸಭೆ ನಡೆಸಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ಕೊಟ್ಟು ಶ್ರೀ ಗುರುದತ್ತ ಪೀಠಕ್ಕೆ ಹೋಗಿ ದರ್ಶನ ಪಡೆದು ಅಲ್ಲಿಯ ಅರ್ಚಕರ ಪುರೋಹಿತರ ಸಂಘದಿಂದ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿ ಬೀದರ್‌ನ ನಮ್ಮ ಪದಾಧಿಕಾರಿಗಳಾದ ವೆಂಕಟೇಶ್ ಮೂರ್ಖಂಡಿಕರ್ ಅವರ ಮುದ್ದಾಳತ್ವದಲ್ಲಿ ನೂರಾರು ಸದಸ್ಯರ ಸಮ್ಮುಖದಲ್ಲಿ ದೊಡ್ಡ ಸಭೆಯನ್ನು ಏರ್ಪಾಡು ಮಾಡಿದ್ದು ಅವರ ಮುಂದಾಲೋಚನೆ ನಿಜಕ್ಕೂ ಅದ್ಭುತವಾದ ಕಾರ್ಯವೇ. ಒಂದು ದೊಡ್ಡ ಯುವಕ ಪಡೆ ಹಾಗೂ ಮಹಿಳಾಮಂಡಲಗಳಿಂದ ಸಂಪೂರ್ಣ ಬೀದರ್‌ನಲ್ಲಿ ಸದಸ್ಯತ್ವ ಧ್ಯಾನಕ್ಕೆ ಚಾಲನೆ ನೀಡಿದರು. ಅವರೆಲ್ಲರಿಗೂ ನಾವು ಅಂದರೆ ಉಪಾಧ್ಯಕ್ಷರಾದ ಪ್ರಮೋದ್ ಮನೋಳಿ, ಶ್ರೀಯುತ ಉಮೇಶ್ ಶಾಸ್ತ್ರಿ ಎಲ್ಲರೂ ಬೀದರ್ ಬ್ರಾಹ್ಮಣ  ಸಮಾಜಕ್ಕ ಒಂದು ಬಲವನ್ನು ನೀಡಿ ಉತ್ತೇಜನ ಕೊಟ್ಟು ನಮಗೆಲ್ಲರಿಗೂ ಒಂದು ಹರ್ಷದ ವಿಷಯ.


ನಂತರ ಸಿರುಗುಪ್ಪ ತಾಲೂಕಿನಲ್ಲಿ ಬೃಹತ್ ಸಮಾವೇಶ. ಅದರಲ್ಲಿ ಕೂಡ ನೂರಾರು ಯುವಕರ ತಂಡ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಗೆ ಸಂಪೂರ್ಣ ಸಹಕಾರ ನೀಡಿ ಮಂತ್ರಾಲಯದ ಸ್ವಾಮಿಗಳಾದ ಶ್ರೀ ಶ್ರೀ ಸುಬುಧೇಂದ್ರ ತೀರ್ಥ ಗುರುಗಳ ಆಶೀರ್ವಾದ ಪಡೆದು ಸದಸ್ಯತ್ವ  ಅಭಿಯಾನಕ್ಕೆ ಚಾಲನೆ ನೀಡಿದರು.

ಹೊಸಪೇಟೆಗೆ ಬಂದಾಗ ನಮ್ಮ ಸಮಾಜಕ್ಕೆ ಅವಹೇಳನಕಾರಿ ಹೇಳಿಕೆ ನೀಡಿದ್ದನ್ನು ಖಂಡಿಸಿ ಪ್ರತಿಭಟನೆಯನ್ನು ಕೂಡ ಹೊಸಪೇಟೆಯಲ್ಲಿ ನಾವು ಹಮ್ಮಿಕೊಂಡಿದ್ದೆವು. ಹೊಸಪೇಟೆಯಲ್ಲಿ ಕೂಡ ಸದಸ್ಯತ್ವ ಅಭಿಮಾನಿಕ್ಕೆ ಚಾಲನೆ ನೀಡಿಲಾಯಿತು. ಬಳ್ಳಾರಿಗೆ ಬಂದಾಗ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹಾಗೂ ಅರ್ಚಕ ಹಾಗೂ ಪುರೋಹಿತ ಸಂಘದ ಪದಾಧಿಕಾರಿಗಳಿಂದ ನೂರಾರು ವಿಪ್ರದಿಂದ ಚರ್ಚಿಸಿದರು.

ಡಿಸೆಂಬರ್ ತಿಂಗಳಲ್ಲಿ ಹರಿಹರಪುರದ ಮಠದಲ್ಲಿ ಮಹಾಕುಂಭಾಭಿಷೇಕ ಕಾರ್ಯಕ್ರಮ ಸಭೆಯ ಕಾರ್ಯಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಮಾರ್ಗದರ್ಶನದಲ್ಲಿ ಜರಗಿದ್ದು ಅತ್ಯದ್ಭುತವಾದ ಕಾರ್ಯಕ್ರಮ ನ ಭೂತೋ ನ ಭವಿಷ್ಯತಿ ನಿಜಕ್ಕೂ ಜೀವನದಲ್ಲಿ ನಾನು ಮರೆಯಲಾರದ ದೊಡ್ಡ ಕಾರ್ಯಕ್ರಮ ಎಂದರೆ ತಪ್ಪಾಗಲಾರದು.

ಡಿಸೆಂಬರ್ 26 ಧಾರವಾಡದ ಸಂಸ್ಕೃತ ಪಾಠಶಾಲೆಯಲ್ಲಿ 40 ವರ್ಷಗಳ ನಂತರ ವೇದ ಸವಿತಾ ಯಾಗದ ಅತಿ ದೊಡ್ಡ ಕಾರ್ಯಕ್ರಮ ಏರ್ಪಡಿಸಿ ಆರು ದಿನಗಳ ಹೋಮ ಹವಾನಗಳ ಕಾರ್ಯಕ್ರಮ ಕೊನೆಯ ದಿನ ಪೂರ್ಣಹುತಿ ಸಂದರ್ಭದಲ್ಲಿ ಮಹಾಸಭೆಯ ಅಧ್ಯಕ್ಷರಾದ ಶ್ರೀಯುತ ಅಶೋಕ ಹಾರನ ಹಳ್ಳಿ ಅವರ ಉಪಸ್ಥಿತಿಯಲ್ಲಿ ಸಂಪನ್ನಗೊಂಡಿತು. ಇದರಲ್ಲಿ ಪಂಡಿತರಾದ ಶ್ರೀ ರಾಜೇಶ್ವರಿ ಶಾಸ್ತ್ರಿಗಳು ಭಾನುಪ್ರಕಾಶ್ ಶರ್ಮಾಜಿಯವರು ಅರ್ಚಕ ಪರಿಷತ್ ಅಧ್ಯಕ್ಷರಾದ ವಿಶ್ವೇಶ್ವರ ಭಟ್ ಭಾಗಿಯಾಗಿದ್ದರು ಅಂದೆ ನೂರಾರು ಭಕ್ತರ ಸಮ್ಮುಖದಲ್ಲಿ ಬ್ರಾಹ್ಮಣ ಮಹಾಸಭಾ ದಿನದರ್ಶಿಕೆಯ ಕೂಡ ಬಿಡುಗಡೆ ಆಯಿತು.

ಜನವರಿ 9ರಂದು ಶ್ರೀ ಕ್ಷೇತ್ರ ಗಣಗಪುರದಲ್ಲಿ ದತ್ತಮಾಲಾ ಮಂತ್ರ ಹೋಮದಲ್ಲಿ ಆ ಸಭೆಯ ಅಧ್ಯಕ್ಷರು ಭಾಗಿಯಾಗಿದ್ದು ಮಹಾಸಭೆ ಹಾಗೂ ರಾಜ್ಯದ ಅರ್ಚಕ ಮತ್ತು ಮತ್ತು ಪುರೋಹಿತ ಪರಿಷತ್ ವತಿಯಿಂದ ಸಮ್ಮೇಳನ ಕೂಡ ನಡೆದದ್ದು ಸಾವಿರಾರು ವಿಪ್ರರು ಭಾಗವಹಿಸಿದ್ದು ರಾಜ್ಯದ ಜನತೆಗೆ ಒಂದು ಹೆಮ್ಮೆಯ ವಿಷಯ ಈ ಒಂದು ವರ್ಷದ ಅವಧಿಯಲ್ಲಿ ನಾವೆಲ್ಲರೂ ಸೇರಿ ರಾಜ್ಯಾದ್ಯಂತ ಪ್ರವಾಸ ಮಾಡಿ ಶಕ್ತಿಮೀರಿ ತನುಮನ ಧನದಿಂದ ಮಹಾಸಭೆ ಬಲಿಷ್ಠ ವಾಗಲಿ ಎಂದು ಭಗವಂತನಲ್ಲಿ ಪ್ರಾರ್ಥನೆ ಮಾಡುತ್ತಾ ಅಧ್ಯಕ್ಷರಾದ ಅಶೋಕ್ ಹಾರನಹಳ್ಳಿ ಅವರಿಗೆ ನಾನು ಶ್ರೀ ಬಿಎಸ್ ರಾಘವೇಂದ್ರ ಭಟ್ ಪ್ರಮೋದ್ ಮನೋಳಿ ಯವರು ಹಾಗೂ ಉಮೇಶ್ ಶಾಸ್ತ್ರಿ ಅವರು ಅನಂತಾನಂತ ಧನ್ಯವಾದಗಳು ತಿಳಿಸುತ್ತೇವೆ.



# ಮಹಾಸಭಾ ರಾಜ್ಯ ಮಹಿಳಾ ವಿಭಾಗ

## ಆರಂಭದ ನಾಲ್ಕು ತಿಂಗಳ ಕಾರ್ಯಚಟುವಟಿಕೆಗಳ ಸಂಕ್ಷಿಪ್ತ ಮಾಹಿತಿ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಮಹಿಳಾ ವಿಭಾಗದಲ್ಲಿ ಶ್ರೀಮತಿ ರೂಪಾ ಶಾಸ್ತ್ರಿ ಫೆಬ್ರವರಿ 08, 2022ರಿಂದ ಜೂನ್ 10, 2022ರ ವರೆಗೆ (4 ತಿಂಗಳು) ರಾಜ್ಯ ಸಂಚಾಲಕಿಯಾಗಿ ಜವಾಬ್ದಾರಿ ನಿರ್ವಹಿಸಿದ ಸಂದರ್ಭದಲ್ಲಿ ಕೈಗೊಂಡ ಮಹಿಳಾ ವಿಭಾಗದ ಕಾರ್ಯಕ್ರಮಗಳ ಸಂಕ್ಷಿಪ್ತ ವರದಿ

ದಿನಾಂಕ 08.02.2022ರಂದು ಸಂಜೆ ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ಮಹಾಸಭಾದ ಕೇಂದ್ರ ಕಚೇರಿ ಬೆಂಗಳೂರಿನ ಗಾಯತ್ರಿ ಭವನದಲ್ಲಿ ಹಲವು ವಿಪ್ರ ಮಹಿಳಾ ಸಂಘಟನೆಗಳ ಮುಖಂಡರು ಮತ್ತು ವಿಪ್ರ ಗಣ್ಯರ ಸಮ್ಮುಖದಲ್ಲಿ ಶ್ರೀಮತಿ ರೂಪಾ ಶಾಸ್ತ್ರಿ ಆದ ನನ್ನನ್ನು ರಾಜ್ಯ ಮಹಿಳಾ ವಿಭಾಗದ ಸಂಚಾಲಕಿಯನ್ನಾಗಿ ನೇಮಕ ಮಾಡಿದರು.

ರಾಜ್ಯದ ಎಲ್ಲಾ ವಿಪ್ರ ಮಹಿಳೆಯನ್ನು ಸಂಪರ್ಕಿಸಿ, ರಾಜ್ಯ ಮಹಿಳಾ ವಿಭಾಗದ ಈಮೇಲ್ ಮತ್ತು ಫೇಸ್‌ಬುಕ್ ಪೇಜ್‌ಗಳನ್ನು ಸೃಷ್ಟಿಸಲಾಯಿತು. ಮಹಿಳಾ ವಿಭಾಗದ ಕಾರ್ಯಚಟುವಟಿಕೆಗಳನ್ನು ನಿರಂತರವಾಗಿ ಈ ಫೇಸ್‌ಬುಕ್ ಪೇಜಿನಲ್ಲಿ ಪ್ರಕಟಿಸಲಾಗುತ್ತಿತ್ತು. ಮಹಿಳಾ ವಿಭಾಗವು ಈ 4 ತಿಂಗಳುಗಳಲ್ಲಿ ಅನೇಕ ಬಾರಿ ಜೂಮ್ ಮೀಟಿಂಗ್ ಆಯೋಜಿಸುವ ಮೂಲಕ ಮಹಿಳಾ ಸದಸ್ಯರುಗಳೊಂದಿಗೆ ವಿಚಾರ ವಿನಿಮಯಗಳನ್ನು ನಡೆಸಿಕೊಂಡು ಬಂದಿರುತ್ತದೆ.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಮಹಿಳಾ ವಿಭಾಗದ ಉದ್ಘಾಟನಾ ಸಮಾರಂಭ ಮತ್ತು ಪ್ರಥಮ ಸಭೆಯು ದಿನಾಂಕ 19.02.2022ರ ಶನಿವಾರ ಸಂಜೆ ಬೆಂಗಳೂರಿನ ಗಾಯತ್ರಿ ಭವನದಲ್ಲಿ ನೆರವೇರಿತು. ಸಭಾಧ್ಯಕ್ಷತೆಯನ್ನು ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿರವರು ವಹಿಸಿದ್ದರು. ರಾಜ್ಯ ಮಹಿಳಾ ವಿಭಾಗದ ಉದ್ಘಾಟನಾ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀಮತಿ ಮೇದಿನಿ ಉದಯ್ ಗರುಡಾಚಾರ್, ಮಹಾಸಭಾದ ಮಾಜಿ ಅಧ್ಯಕ್ಷರಾದ ಡಾ ಎಂ.ಆರ್.ವಿ. ಪ್ರಸಾದ್ ಆಗಮಿಸಿದ್ದರು. ಸಭೆಯಲ್ಲಿ ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಸುಮಾರು 150ಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ್ದರು.

ದಿನಾಂಕ 06.03.2022 ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮಹಿಳಾ ವಿಭಾಗ ಮತ್ತು ಎಸ್‌ಬಿಎಂ ಕಾಲೋನಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಶನ್ ಆಶ್ರಯದಲ್ಲಿ ಕಾರ್ಯಕ್ರಮದ ರೂವಾರಿ ಶ್ರೀ ರವಿಕುಮಾರ್‌ರವರ ನೇತೃತ್ವದಲ್ಲಿ ಬೆಂಗಳೂರಿನ ಪ್ರಖ್ಯಾತ ಆಸ್ಪತ್ರೆ ಯುನೈಟೆಡ್ ಹಾಸ್ಪಿಟಲ್ ವತಿಯಿಂದ ಹನುಮಂತನಗರದ ಪಿಇಎಸ್ ಕಾಲೇಜಿನಲ್ಲಿ ತಜ್ಞ ವೈದ್ಯರುಗಳ ತಂಡದಿಂದ ಸುಸಜ್ಜಿತ ಯಂತ್ರೋಪಕರಣಗಳೊಂದಿಗೆ ಬೃಹತ್ ವೈದ್ಯಕೀಯ ಶಿಬಿರ ನೆರವೇರಿತು. ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ, ಪಿಇಎಸ್ ಸಮೂಹ ಸಂಸ್ಥೆಗಳ ಶ್ರೀ ದೊರೆಸ್ವಾಮಿ, ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸದಸ್ಯರಾದ ಶ್ರೀ ತೇಜಸ್ವಿ ಸೂರ್ಯ, ಬಸವನಗುಡಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ರವಿಸುಬ್ರಹ್ಮಣ್ಯ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಈ ಬೃಹತ್ ವೈದ್ಯಕೀಯ ಶಿಬಿರದಲ್ಲಿ ಮಹಿಳಾ ವಿಭಾಗದ ಹೆಚ್ಚಿನ ಸದಸ್ಯರು ಸ್ವಯಂ ಸೇವಕರಾಗಿ ಕಾರ್ಯನಿರ್ವಹಿಸಿದರು. 300ಕ್ಕೂ ಹೆಚ್ಚಿನ ನಾಗರಿಕರು ಈ ಶಿಬಿರದ ಲಾಭ ಪಡೆದರು

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಅದ್ದೂರಿಯಾಗಿ ಆಚರಿಸಲು ಸನ್ನದ್ಧವಾಗಿದ್ದ ರಾಜ್ಯ ಮಹಿಳಾ ವೇದಿಕೆಗೆ ಬೆನ್ನೆಲುಬಾಗಿ ನಿಂತು, ಕಾರ್ಯಕ್ರಮಕ್ಕೆ ದೊಡ್ಡ ಮೊತ್ತದ ದೇಣಿಗೆಯನ್ನು ಶ್ರೀ ಬಿಎನ್‌ವಿ ಸುಬ್ರಹ್ಮಣ್ಯರವರ ಧರ್ಮಪತ್ನಿ ಶ್ರೀಮತಿ ಸೀತಾ ಸುಬ್ರಹ್ಮಣ್ಯಂರವರು ನೀಡಿದರು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ದಿನಾಂಕ 08.03.2022ರಂದು ಬೆಳಿಗ್ಗೆ 10.30ರಿಂದ ಗಾಯತ್ರಿ ಭವನದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮಹಿಳಾ ವಿಭಾಗದ ವತಿಯಿಂದ ಬೆಂಗಳೂರಿನ ಜೆಪಿ ನಗರದ ಶೇಖರ್ ಐ ಹಾಸ್ಪಿಟಲ್ ಸಹಯೋಗದೊಂದಿಗೆ ಗ್ಲುಕೋಮಾಯುಕ್ತ ಕಣ್ಣಿನ ಪರೀಕ್ಷೆಯ ಶಿಬಿರವನ್ನು ಏರ್ಪಡಿಸಲಾಗಿತ್ತು. ಅನೇಕ ಮಹಿಳೆಯರು ಮತ್ತು ಪುರುಷರು ಈ ಶಿಬಿರದ ಸದುಪಯೋಗವನ್ನು ಪಡೆದುಕೊಂಡರು.



ಮಹಾಸಭಾಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿಯವರ ಮಾರ್ಗದರ್ಶನದಲ್ಲಿ, ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ದಿನಾಂಕ

08.03.2022 ರಂದು ಸಂಜೆ 4.30ರಿಂದ ಗಾಯತ್ರಿ ಭವನದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮಹಿಳಾ ವಿಭಾಗದ ವತಿಯಿಂದ ರಾಜ್ಯ ಸಂಚಾಲಕಿ ಶ್ರೀಮತಿ ರೂಪಾ ಶಾಸ್ತ್ರಿ ನೇತೃತ್ವದಲ್ಲಿ ಶ್ರೀ ನರಸಿಂಹ ಸಹಸ್ರನಾಮ ಪಠನ ಪೂಜಾ ಮತ್ತು ಶ್ರೀ ದುರ್ಗಾ ನಮಸ್ಕಾರ ಪೂಜಾ ಕೈಂಕರ್ಯವು ವಿಜೃಂಭಣೆಯಿಂದ ನೆರವೇರಿತು. 150ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದ ವಿಪ್ರಬಾಂಧವರು ದೈವೀ ಅನುಗ್ರಹವನ್ನು ಪಡೆದರು. ಬಂದಂತಹ ಎಲ್ಲ ವಿಪ್ರ ಬಾಂಧವರಿಗೆ ಶ್ರೀಮತಿ ರೂಪಾಶಾಸ್ತ್ರಿ ಮಾಲಿಕತ್ವದ ರಸಪಾಕ ರೆಸ್ಟೋರೆಂಟಿನಿಂದ ಸೇವಾ ರೂಪದಲ್ಲಿ ರಾತ್ರಿ ಭೋಜನದ ವ್ಯವಸ್ಥೆ ಮಾಡಲಾಗಿತ್ತು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಮಹಿಳಾ ವಿಭಾಗದ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಲುವಾಗಿ



ದಿನಾಂಕ 13.03.2022ರ ಭಾನುವಾರ ಬೆಳಿಗ್ಗೆ ಬೆಂಗಳೂರಿನಲ್ಲಿ ಯುವ ಮಹಿಳೆಯರನ್ನು ಸೆಳೆಯುವ ದೃಷ್ಟಿಯಿಂದ ಪರಿವರ್ತನಾ ಎಂಬ ಹೆಸರಿನಲ್ಲಿ ಬೈಕ್ ರಾಲಿಯನ್ನು ಆಯೋಜಿಸಲಾಗಿತ್ತು. ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಉದಯ ಗರುಡಾಚಾರ್, ಖ್ಯಾತ ವೈದ್ಯೆ ಶ್ರೀಮತಿ ವಿಜಯಲಕ್ಷ್ಮೀ ಬಾಳೆಕುಂದ್ರಿ ಉದ್ಘಾಟಿಸಿದರು. ನೂರಾರು ಮಹಿಳೆಯರು ಹುರುಪಿನಿಂದ ಈ ರ್‍ಯಾಲಿಯಲ್ಲಿ ಭಾಗವಹಿಸಿದ್ದರು.




ದಿನಾಂಕ 13.03.2022ರ ಭಾನುವಾರ ಸಂಜೆ ಬೆಂಗಳೂರಿನ ಗಾಯನ ಸಮಾಜದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಲುವಾಗಿ ಸಾಂಸ್ಕೃತಿಕ ಸಮಾರಂಭವನ್ನು ಆಯೋಜಿಸಲಾಗಿತ್ತು. ಶ್ರೀ ಅಶೋಕ ಹಾರನಹಳ್ಳಿಯವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶಾಸಕರಾದ ಶ್ರೀ ರವಿಸುಬ್ರಹ್ಮಣ್ಯ, ಮಾಜಿ ಉಪ ಮಹಾಪೌರರಾದ ಶ್ರೀಮತಿ ಹೇಮಲತಾ ಗೋಪಾಲಯ್ಯ, ಬಿಬಿಎಂಪಿ ವಿಪ್ರ ಮಹಿಳಾ ಸದಸ್ಯರುಗಳು ಭಾಗವಹಿಸಿದ್ದರು. ಈ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ 13 ಮಹಿಳೆಯರಿಗೆ ವಿಪ್ರ ಸ್ತ್ರೀರತ್ನ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಲಾಯಿತು. ಅನೇಕ ಪ್ರಖ್ಯಾತ ತಂಡಗಳಿಂದ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಈ ವೇದಿಕೆಯಲ್ಲಿ ಆಯೋಜಿಸಲಾಗಿತ್ತು.

ರಾಜ್ಯದ ಎಲ್ಲಾ ಜಿಲ್ಲೆಗಳ ಮಹಿಳಾ ಉದ್ಯಮಿಗಳಿಗೆ ಅನುಕೂಲವಾಗಲು, ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಶ್ರೀ ಧರ್ಮಸ್ಥಳ ಸುರೇಂದ್ರ ಕುಮಾರ್‌ರನ್ನು ಸಂಪರ್ಕಿಸಿ ಅವರ ಸಹಕಾರವನ್ನು ಕೋರಲಾಯಿತು. ಹಾಗೆಯೇ ಲಯನ್ಸ್ ಕ್ಲಬ್, ರೋಟರಿ ಕ್ಲಬ್‌ನ ಪ್ರಮುಖರನ್ನು ಸಂಪರ್ಕಿಸಿ ನಮ್ಮ ವಿಪ್ರ ಮಹಿಳೆಯರ ಅನುಕೂಲಕ್ಕೆ ಕಾರ್ಯಯೋಜನೆಗಳನ್ನು ರೂಪಿಸಲಾಯಿತು. ಲಯನ್ಸ್ ಕ್ಲಬ್‌ನವರು ಈಗಾಗಲೇ ಅರ್ಹ ವಿಪ್ರ ಮಹಿಳೆಯರಿಗೆ ಹೊಲಿಗೆ ಯಂತ್ರಗಳನ್ನು ನೀಡಲು ಒಪ್ಪಿಗೆ ಸೂಚಿಸಿದ್ದರು.

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಸಕ್ರಿಯ ಮಹಿಳಾ ವಿಭಾಗವನ್ನು ರಚಿಸುವ ಸಲುವಾಗಿ ದಿನಾಂಕ 07.05.2022ರ ಶನಿವಾರ ಬೆಳಿಗ್ಗೆ ಮಂಗಳೂರಿನ ಪತ್ತುಮುಡಿ ಸೌಧದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಹಿಳಾ ವಿಭಾಗದ ಪೂರ್ವಭಾವಿ ಸಭೆಯಲ್ಲಿ ಜಿಲ್ಲೆಯ ಉಸ್ತುವಾರಿಗಳಾದ ಶ್ರೀ ಮಹೇಶ ಕಜೆ, ದಕ್ಷಿಣ ಕನ್ನಡ ಜಿಲ್ಲೆಯ ಮಹಿಳಾ ವಿಭಾಗಗಳ ಪ್ರಮುಖರು ಮತ್ತು ವಿಪ್ರ ಮುಖಂಡರುಗಳು ಈ ಸಭೆಯಲ್ಲಿ ಭಾಗವಹಿಸಿದ್ದರು. ದಿನಾಂಕ 07.05.2022ರ ಶನಿವಾರ ಸಂಜೆ ಕುಂದಾಪುರ ಸಾಲಿಗ್ರಾಮದ ಶ್ರೀ ಗುರುನರಸಿಂಹ ದೇವಸ್ಥಾನದ ಸಭಾಂಗಣದಲ್ಲಿ ಉಡುಪಿ ಜಿಲ್ಲೆಯ ಮಹಿಳಾ ವಿಭಾಗದ ಪೂರ್ವಭಾವಿ ಸಭೆಯಲ್ಲಿ ಜಿಲ್ಲೆಯ ಉಸ್ತುವಾರಿಗಳಾದ ಶ್ರೀ ನಟರಾಜ ಭಾಗ್ವತ್, ಉಡುಪಿ ಜಿಲ್ಲೆಯ ಮಹಿಳಾ ವಿಭಾಗಗಳ ಪ್ರಮುಖರು ಮತ್ತು ವಿಪ್ರ ಮುಖಂಡರುಗಳು ಭಾಗವಹಿಸಿದ್ದರು

**ಮಹಿಳಾ ವಿಭಾಗದ ಮಾಜಿ ರಾಜ್ಯ ಸಂಚಾಲಕಿ ರೂಪ ಶಾಸ್ತ್ರಿಯವರು ರಾಜ್ಯ ಮಹಿಳಾ ವಿಭಾಗದ ರಾಜ್ಯ ಸಂಚಾಲಕಿಯಾಗಿದ್ದ ಅವಧಿಯಲ್ಲಿ ಅವರಿಗೆ ಅತ್ಯಮೂಲ್ಯ ಸಹಕಾರ ಮತ್ತು ಮಾರ್ಗದರ್ಶನ ನೀಡಿ, ಬ್ರಾಹ್ಮಣ ಮಹಾಸಭೆಗೆ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಿದ ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರಿಗೆ ಹಾಗೂ ಎಲ್ಲಾ ಪದಾಧಿಕಾರಿಗಳಿಗೆ ಕೃತಜ್ಞತೆಯನ್ನು ಸಲ್ಲಿಸಿದ್ದಾರೆ.**


## ವಿಪ್ರನುಡಿಯಲ್ಲಿ ಜಾಹೀರಾತಿಗಾಗಿ ಮನವಿ

**ಪ್ರತಿ ತಿಂಗಳ ಜಾಹೀರಾತಿನ ದರ ಹೀಗಿದೆ.**

| | | | | |
|---|---|---|---|---|
| 1. | ಹೊರ ರಕ್ಷಾ ಪುಟ (ವರ್ಣ) | .. | ರೂ. | 30,000/= |
| 2. | ಒಳ ರಕ್ಷಾ ಪುಟ (ವರ್ಣ) | .. | ರೂ. | 20,000/= |
| 3. | ಒಳ ಪುಟ (ವರ್ಣ) | .. | ರೂ. | 15,000/= |
| 4. | ಒಳ ಪುಟ (ಕಪ್ಪು ಬಿಳುಪು) | .. | ರೂ. | 10,000/= |
| 5. | ಒಳ ಅರ್ಧ ಪುಟ (ಕಪ್ಪು ಬಿಳುಪು) | .. | ರೂ. | 5,000/= |
| 6. | ಒಳ ಕಾಲು ಪುಟ (ಕಪ್ಪು ಬಿಳುಪು) | .. | ರೂ. | 2,500/= |
| 7. | ಎರಡು ಸಾಲಿನ ಪ್ರಕಟಣೆ | .. | ರೂ. | 1,000/= |
| 8. | ಒಂದು ಪುಟ ಪ್ರಾಯೋಜಕತ್ವ | .. | ರೂ. | 2,000/= |

## ಎಸ್.ಎಸ್. ನಂಜುಂಡಸ್ವಾಮಿ



ಬಬ್ಬೂರುಕಮ್ಮೆ ಸಂಘದ ಗೌರವಾಧ್ಯಕ್ಷರಾದ ಹಾಗೂ ಬ್ರಾಹ್ಮಣ ಸಂಘದ ಮುಖಂಡರಾದ ಎಸ್.ಎಸ್. ನಂಜುಂಡಸ್ವಾಮಿಯವರು ದೈವಾಧೀನರಾಗಿದ್ದಾರೆ. ಅವರಿಗೆ 63 ವರ್ಷವಾಗಿದ್ದು ಹಾಗೂ ಹೆಂಡತಿ, ಒಬ್ಬ ಮಗ ಮತ್ತು ಅಪಾರ ಬಂಧು ಮಿತ್ರರನ್ನು ಅಗಲಿರುತ್ತಾರೆ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯು ಇವರಿಗೆ ಸದ್ಗತಿಯನ್ನು ಕೋರುತ್ತಾ, ಅವರ ಕುಟುಂಬವರ್ಗದವರಿಗೆ ದುಃಖವನ್ನು ಸಹಿಸುವ ಶಕ್ತಿ ನೀಡಲೆಂದು ಗಾಯತ್ರಿ ದೇವಿಯಲ್ಲಿ ಪ್ರಾರ್ಥಿಸುತ್ತದೆ.

## ಎಮ್.ಎಲ್. ನರಸಿಂಹಮೂರ್ತಿ

ಅದ್ವೈತ್ವ ಸಿದ್ದಾಂತದ ಹಿರಿಯ ವೈದಿಕರೂ ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳಾಗಿದ್ದ ಶೃಂಗೇರಿ ನಿವಾಸಿ ಎಮ್.ಎಲ್. ನರಸಿಂಹಮೂರ್ತಿಯವರು ಹೃದಯಾಘಾತದಿಂದ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅಪಾರ ಅಭಿಮಾನಿ ಬಳಗಕ್ಕೆ ದುಃಖವನ್ನು ಸಹಿಸುವ ಶಕ್ತಿ ನೀಡಲೆಂದು ಗಾಯತ್ರಿ ದೇವಿಯಲ್ಲಿ ಅವರಿಗೆ ಸದ್ಗತಿ ನೀಡಲೆಂದು ಮಹಾಸಭೆಯು ಪ್ರಾರ್ಥಿಸುತ್ತದೆ.



**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾ (ರಿ)**

ಗಾಯಿತ್ರಿ ಭವನ 3070, 9ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070.

ಮೊ : 944 26771695

**ವಿಪ್ರನುಡಿ ಪತ್ರಿಕೆಗೆ ಚಂದಾ ಅರ್ಜಿ**

ಹೆಸರು : ____________________

ವಿಳಾಸ ____________________

____________________

ಸದಸ್ಯತ್ವದ ಸಂಖ್ಯೆ : ____________

ದಯಮಾಡಿ ವಿಪ್ರನುಡಿ ಮಾಸ ಪತ್ರಿಕೆ ಕನ್ನಡ/ಇಂಗ್ಲೀಷ್ – ಅವೃತ್ತಿಗೆ ಮೂರುವರ್ಷದ ಚಂದಾ ಹಣ **ರೂ. 500/– (ಕನ್ನಡ) ರೂ 1500 (ಇಂಗ್ಲೀಷ್)** ಗಳನ್ನು ನಗದು/ಚೆಕ್/ಯು.ಪಿ.ಐ. ವರ್ಗಾವಣೆ ಮೂಲಕ ಪಾವತಿಸುತ್ತಿದ್ದೇನೆ.

ಚಂದಾದಾರರ ಸಹಿ/–




**AKBMS Membership Account Acc Name :** Akhila Karnataka Brahmana Mahasabha
Bank : Karnataka Bank Ltd A/c No : 1072500102058301I
FSC : KARB0000107BRANCH : BANASHANKARI 2ND STAGE

ವಿ.ಸೂ. : ಹೆಸರು ವಿಳಾಸ, ಹಣ ಪಾವತಿಸಿದ ದಾಖಲೆ/ಸ್ಕ್ರೀನ್‌ಶಾಟ್/ಯು.ಪಿ.ಐ ಸಂಖ್ಯೆಯನ್ನು ಮೊ.ನಂ. 9945850620 ಸಂಖ್ಯೆಗೆ ವಾಟ್ಸ್ಯಾಪ್ ಕಳುಹಿಸಿ ದೂರವಾಣಿ ಮುಖಾಂತರ ತಿಳಿಸಿ ಚಂದಾದಾರರಾಗಲು ಕೋರಿದೆ.

# ಸರಸ್ವತಿ ಸಂಮಾನಿತ ಪದ್ಮಭೂಷಣ ಡಾ. ಎಸ್.ಎಲ್. ಭೈರಪ್ಪ

**– ಸಂತೇಬಾಚಹಳ್ಳಿ ಡಾ. ಎಸ್. ನಂಜುಂಡಸ್ವಾಮಿ**



ಸಮಕಾಲೀನ ಬಹುಶ್ರುತ ವಿದ್ವಾಂಸ ಶತಾವಧಾನಿ ಗಣೇಶ್ ಅವರು ಡಾ. ಎಸ್. ಎಲ್. ಭೈರಪ್ಪನವರನ್ನು ಆಧುನಿಕ ವ್ಯಾಸ ಮಹರ್ಷಿಗಳೆಂದು ಬಣ್ಣಿಸುತ್ತಾರೆ. ವ್ಯಾಸ ಮಹಾಭಾರತದ ಬಗ್ಗೆ ವಾಸ್ತವದೃಷ್ಟಿಯಿಂದ ಆಳವಾದ ಚಿಂತನೆ ನಡೆಸಿ, ಮಹಾಭಾರತದ ಪ್ರಮುಖ ಘಟನೆಗಳು ನಡೆದ ಸ್ಥಳಗಳಿಗೆ ಖುದ್ದಾಗಿ ಭೇಟಿ ನೀಡಿ, ಅಲ್ಲಿಯ ಜನಜೀವನ, ಸಂಸ್ಕೃತಿ, ಜನಪದ, ಸ್ಥಳಪುರಾಣಗಳ ಬಗ್ಗೆ ಆಳವಾದ ಅಧ್ಯಯನ ನಡೆಸಿ ಸೃಜಿಸಿದ ಮಹಾನ್ ಕಾದಂಬರಿ ಪರ್ವ. ಆದುದರಿಂದ ಭೈರಪ್ಪನವರನ್ನು ಆಧುನಿಕ ವ್ಯಾಸರು ಕರೆದಿರುವುದು ಸೂಕ್ತವಾಗಿಯೇ ಇದೆ. ಭೈರಪ್ಪನವರು ಸೃಜಿಸಿದ ಎಲ್ಲ ಕಾದಂಬರಿಗಳೂ ಕೂಡಾ ಅವರ ಆಳವಾದ ಜೀವನಾನುಭವದ ಮೂಸೆಯಿಂದ ಹೊರಬಂದು, ಅಧ್ಯಯನ, ಚಿಂತನೆ, ಪ್ರವಾಸ ಈ ರೀತಿಯ ನಿಕಷಕ್ಕೆ ಒಡ್ಡಿ ಪುಟವಿಟ್ಟಂತೆ ಹೊರಬಂದು, ಸತ್ಯದರ್ಶನದ ಕಡೆಗೆ ನಮ್ಮನ್ನು ಕರೆದೊಯ್ಯುವ ಕೃತಿಗಳಾಗಿವೆ. ಆದುದರಿಂದಲೇ ಅವರ ಎಲ್ಲ ಕಾದಂಬರಿಗಳು ಸತ್ವಪೂರ್ಣವಾದ, ಮಹತ್ವಪೂರ್ಣವಾದ ಗಟ್ಟಿಯಾದ ಕಾದಂಬರಿಗಳಾಗಿ ನಿಂತಿವೆ. ಓದುಗರ ಮನಸ್ಸನ್ನು ಪ್ರವೇಶಿಸಿ ಅವರನ್ನೂ ಕೂಡಾ ಚಿಂತನೆಗೆ ಈಡುಮಾಡುತ್ತವೆ. ಡಾ. ಎಸ್.ಎಲ್. ಭೈರಪ್ಪನವರಿಗೆ ಭಾರತ ಸರ್ಕಾರವು ಶ್ರೇಷ್ಠ ಪ್ರಶಸ್ತಿಯೆನಿಸಿದ ಪದ್ಮಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಪದ್ಮಭೂಷಣ ಪ್ರಶಸ್ತಿಯನ್ನು ಪಡೆದ ಸಾಹಿತಿಗಳ ಸಂಖ್ಯೆ ವಿರಳವೆಂದೇ ಹೇಳಬಹುದು.

ಹಾಗೆ ನೋಡಿದರೆ ಭೈರಪ್ಪನವರು ರಾಜ್ಯದ, ರಾಷ್ಟ್ರದ ಸುಮಾರು 40 ಪ್ರಮುಖ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ದಾಟು ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ವಂಶವೃಕ್ಷ ಮತ್ತು ದಾಟು ಕಾದಂಬರಿಗಳಿಗೆ ಎರಡು ಬಾರಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮಂದ್ರ ಕಾದಂಬರಿಗೆ ಜ್ಞಾನಪೀಠ ಪ್ರಶಸ್ತಿಯನ್ನು ಮೀರಿಸುವ ಸರಸ್ವತಿಸಂಮಾನ್, ಸಮಗ್ರ ಕನ್ನಡ ಸಾಹಿತ್ಯ ಸೇವೆಗೆ ಕರ್ನಾಟಕದ ಜ್ಞಾನಪೀಠ ಪ್ರಶಸ್ತಿ ಎನಿಸಿದ ನೃಪತುಂಗ ಪ್ರಶಸ್ತಿ, ನಾಡೋಜ, ಪದ್ಮಶ್ರೀ ಮೊದಲಾದ ಪ್ರಶಸ್ತಿಗಳು ಅವರಿಗೆ ಸಂದಿವೆ. ಆರು ವಿಶ್ವವಿದ್ಯಾನಿಲಯಗಳು ಗೌರವ ಡಾಕ್ಟರೇಟ್, ಡಿಲಿಟ್ ನೀಡಿ ಆ ಪ್ರಶಸ್ತಿಯ ಮೌಲ್ಯವನ್ನು ಕಾಪಾಡಿವೆ. ಕರ್ನಾಟಕ ರಾಜ್ಯ ಪ್ರಶಸ್ತಿಗೂ ಅವರು ಭಾಜನರಾಗಿದ್ದಾರೆ. ಕನಕಪುರದಲ್ಲಿ ನಡೆದ 57ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಅವರ ಭಾಷಣವನ್ನು ಬುದ್ಧಿಜೀವಿಗಳು ಹರಿದು ಸುಟ್ಟು ಸುದ್ದಿಯಾದರೇ ಹೊರತು, ತಾತ್ವಿಕವಾಗಿ, ಸಾಹಿತ್ಯಕವಾಗಿ ಭೈರಪ್ಪನವರನ್ನು ಎದುರಿಸುವ ಶಕ್ತಿ ತಮ್ಮಲ್ಲಿ ಇಲ್ಲ ಎಂಬುದನ್ನು ಸಾಬೀತು ಪಡಿಸಿದರು. ಋಷಿಸದೃಶ್ಯರಾದ ಭೈರಪ್ಪನವರು, ತಮಗೆ ಯಾವುದೇ ಪ್ರಶಸ್ತಿ, ಪದವಿಗಳು ಬರಲಿ, ತಮ್ಮ ಬಗ್ಗೆ ಮೆಚ್ಚುಗೆ, ವಿರೋಧಗಳು ಏನೇ ಬರಲಿ, ಅದನ್ನೆಲ್ಲಾ ನಿರ್ವಿಕಾರ ದೃಷ್ಟಿಯಿಂದ ಸ್ವೀಕರಿಸುತ್ತಾರೆ. ಪ್ರಶಸ್ತಿ ಬಂತು, ಸಂತೋಷ ಆಯಿತು. ಅಲ್ಲಿಗೆ ಮುಗಿಯಿತು. ಆದರೆ ನನ್ನ ಕಾದಂಬರಿಗಳು ಇನ್ನು ನೂರು ವರ್ಷವಾದರೂ ಜನಮಾನಸದಲ್ಲಿ ಉಳಿಯಬಲ್ಲವೇ ಎಂಬುದು ಅವರ ದೃಷ್ಟಿ. ಅದಕ್ಕೆ ತಕ್ಕಂತೆ ಅವರ ಭೂಮವಾದ ಸಾಹಿತ್ಯ ರಚನೆ.

ಭೈರಪ್ಪನವರ ತತ್ತ್ವ ಸಿದ್ಧಾಂತಗಳನ್ನು ನಖಶಿಖಾಂತವಾಗಿ ವಿರೋಧಿಸುವ ತಥಾಕಥಿತ ಬುದ್ಧಿಜೀವಿಗಳು, ಎಡಪಂಥೀಯರು ಕೂಡಾ ಭೈರಪ್ಪನವರ ಕಾದಂಬರಿಯ ವಸ್ತು, ಶೈಲಿ, ತಂತ್ರಗಳ ಬಗ್ಗೆ, ಅವುಗಳ ಬಹುಸಂಖ್ಯೆಯಲ್ಲಿ ಮತ್ತೆ ಮತ್ತೆ ಪುನರ್‌ಮುದ್ರಣವಾಗುತ್ತಿರುವ ಬಗ್ಗೆ ಬೆಕ್ಕಸಬೆರಗಾಗಿದ್ದಾರೆ. ಭೈರಪ್ಪನವರು ಕನ್ನಡದಲ್ಲಿ ಮರೆಯಾಗುತ್ತಿದ್ದ ಓದುವ ಹವ್ಯಾಸವನ್ನು ಮತ್ತು ಓದುಗರನ್ನು ಬೆಳೆಸಿದವರು ಎಂದು ಕೊಂಡಾಡುತ್ತಾರೆ. ತಮ್ಮ ಅಭಿಪ್ರಾಯಗಳು, ವಿಚಾರಗಳು, ಏನೇ ಇರಲಿ ಭೈರಪ್ಪನವರು ಅದನ್ನು ನೇರವಾಗಿ, ನಿಷ್ಠುರವಾಗಿ ವ್ಯಕ್ತಪಡಿಸುವ ರೀತಿಯನ್ನು ಕೂಡಾ ಮೆಚ್ಚುತ್ತಾರೆ. ವಿರೋಧಿಗಳಿಂದಲೂ ಕೂಡಾ ಈ ರೀತಿಯ ಪ್ರಶಂಸೆಗೆ ಪಾತ್ರವಾಗುವುದಕ್ಕಿಂತ ಒಬ್ಬ ವ್ಯಕ್ತಿಗೆ ಇನ್ನೇನು ಹೊಗಳಿಕೆ ಮೆಚ್ಚುಗೆ ಬೇಕು. ಉಳಿದೆಲ್ಲ ಬುದ್ಧಿಜೀವಿಗಳು, ಸಾಹಿತಿಗಳು ಪಂಥ, ಸಿದ್ಧಾಂತ, ವಾದವಿವಾದಗಳಿಗೆ ಜೋತು ಬಿದ್ದು ಅದಕ್ಕೆ ತಕ್ಕಂತೆ ಸಾಹಿತ್ಯ ರಚನೆ ಮಾಡುತ್ತಾರೆ, ಆ ಕೃತಿಗೆ ಪ್ರಶಸ್ತಿಯನ್ನು ನಿರೀಕ್ಷಿಸುತ್ತಾರೆ, ಅಥವಾ ಪ್ರಶಸ್ತಿಯನ್ನು ಪಡೆಯಲು ಹರಸಾಹಸ ಮಾಡುತ್ತಾರೆ. ಆ ಮೂಲಕ ಪದವಿಯ ಬೆನ್ನುಹತ್ತಿ ಹೋಗುತ್ತಾರೆ, ಅದೇ ಅವರುಗಳ ದೌರ್ಬಲ್ಯವೆನಿಸಿ, ಅವರ ಕೃತಿಗಳು ಶ್ರೇಷ್ಠತೆಯ ಮಟ್ಟವನ್ನು ಮುಟ್ಟದೇ ಹೋಗಿವೆ. ಜನಮಾನಸದಲ್ಲಿ ಉಳಿಯದೇ ಹೋಗಿವೆ.

ಭೈರಪ್ಪನವರ ಸಾಹಿತ್ಯಕೃತಿಗಳ ಮುದ್ರಣ, ಮರುಮುದ್ರಣಗಳ ಸಂಖ್ಯೆ, ಕನ್ನಡದ, ಭಾರತದ ಹಾಗೂ ಅಂತರರಾಷ್ಟ್ರೀಯ ಮಟ್ಟದ ಸಾಹಿತಿಗಳಲ್ಲಿ ಬೆರಗನ್ನು ಮೂಡಿಸುತ್ತವೆ. ಭಾರತೀಯ ಸಂಸ್ಕೃತಿಯ ಮೇಲೆ ಇಸ್ಲಾಂನ ಬರ್ಬರ ದಾಳಿ, ಅದರಿಂದಾದ ಅಪಾರ ಹಾನಿ ಅಸದಳ. ಈ ಸತ್ಯವನ್ನು ಇಂದಿನ ರಾಜಕಾರಣಿಗಳು ವೋಟಿಗಾಗಿ, ಬುದ್ಧಿಜೀವಿಗಳು ಪ್ರಶಸ್ತಿ ಸನ್ಮಾನ ಕೀರ್ತಿ ಪ್ರತಿಷ್ಠೆಯ ಸ್ವಂತಲಾಭಕ್ಕಾಗಿ ಮುಚ್ಚಿಡುವ ರೀತಿಯನ್ನು ಪದರಪದರವಾಗಿ ಕಟ್ಟಿಕೊಡುವ **"ಆವರಣ" ಕಾದಂಬರಿಯು ಇದುವರೆಗೆ 62 ಸಲ ಮುದ್ರಣವಾಗಿ ಭಾರತೀಯ ಸಾಹಿತ್ಯ ಲೋಕದಲ್ಲೇ ಒಂದು ದಾಖಲೆಯನ್ನು ಸ್ಥಾಪಿಸಿದೆ.** ಭಾರತೀಯ ಕೌಟುಂಬಿಕ ಜೀವನದ ಮೇಲೆ ಇಂದಿನ ಸಾಫ್ಟ್‌ವೇರ್ ಉದ್ಯಮದ ಪ್ರಭಾವವನ್ನು ಬಿಡಿಸಿ ತೋರಿಸಿರುವ **"ಕವಲು" 41** ಬಾರಿ ಮುದ್ರಣವಾಗಿದೆ. ಭಾರತದ ಎಲ್ಲ ಭಾಷೆಗಳಿಗೆ ಅನುವಾದವಾಗಿರುವ ಪ್ರಮುಖ ಕಾದಂಬರಿಯಾದ, ಬಯಲುಸೀಮೆಯ ಗ್ರಾಮೀಣ ಸಮಾಜ ಜೀವನದ ಸೌಮ್ಯತೆ ಹಾಗೂ

ಕರಾಳತೆಯನ್ನು, ನಂಜಮ್ಮ ಮಾದೇವಯ್ಯ ವಿಶ್ವ ಈ ಮೊದಲಾದ ಪಾತ್ರಗಳ ಮೂಲಕ ತಣ್ಣಗೆ ತೆರೆದಿಡುವ **"ಗೃಹಭಂಗ" 24** ಬಾರಿ ಮುದ್ರಣವಾಗಿದೆ. ಹುಟ್ಟೇ ಜಾತಿಯನ್ನು ನಿರ್ಧರಿಸುತ್ತದೆಯೇ ಅಥವಾ ವ್ಯಕ್ತಿಯ ನಡೆನುಡಿಯೇ ಅವನ ಶ್ರೇಷ್ಠತೆಯನ್ನು ಎತ್ತಿಹಿಡಿಯುತ್ತವೆಯೇ ಎಂಬ ಚಿಂತನೆಯನ್ನು ಶ್ರೋತ್ರಿಗಳ ಪಾತ್ರದ ಮೂಲಕ ತೆರೆದಿಡುವ **"ವಂಶವೃಕ್ಷ" 29** ಮುದ್ರಣಗಳನ್ನು ಕಂಡಿದೆ. **"ಪರ್ವ" 27** ಬಾರಿ ಮುದ್ರಣವಾಗಿದೆ. ಭಾರತೀಯ ಜಾತಿ ವ್ಯವಸ್ಥೆಯನ್ನು ಕರ್ನಾಟಕದ ಒಂದು ಹಳ್ಳಿಯ ಸಾಮಾಜಿಕ ವ್ಯವಸ್ಥೆಯ ಮೂಲಕ ನೋಡುವ ದಾಟು 23 ಮುದ್ರಣಗಳನ್ನು ಕಂಡಿದೆ. ಮತಾಂತರ ಸಮಸ್ಯೆಯನ್ನು ವಾಸ್ತವ ಚಿತ್ರಣ ನೀಡುವ **"ಧರ್ಮಶ್ರೀ" 21** ಮುದ್ರಣಗಳನ್ನು ಕಂಡಿದೆ. ಇಂದು ಮುನ್ನೆಲೆಗೆ ಬಂದಿರುವ ಪಶುಪಾಲನೆ ಮತ್ತು ಗೋಹತ್ಯೆಯ ಸಮಸ್ಯೆಯನ್ನು ತೆರೆದಿಡುವ **"ತಬ್ಬಲಿಯು ನೀನಾನೆ ಮಗನೇ" ಕಾದಂಬರಿಯು 18** ಮುದ್ರಣಗಳನ್ನು ಕಂಡಿದೆ. ಇಂದಿಗೂ ಪ್ರಸ್ತುತವೆನಿಸುವ ರಾಜ್ಯದ ದೇಶದ ರಾಜಕೀಯ ಪರಿಸ್ಥಿತಿಯನ್ನು ತೆರೆದಿಡುವ **"ಮತದಾನ" 1** ಬಾರಿ ಮುದಣವಾಗಿದೆ. ಭೈರಪ್ಪನವರ ಎಲ್ಲ ಕಾದಂಬರಿಗಳು 20–25 ಮುದ್ರಣವಾಗುವುದು ಸಾಮಾನ್ಯ ಸಂಗತಿಯಾಗಿದೆ. ಬೇರೆ ಸಾಹಿತಿಗಳ ಅದರಲ್ಲೂ ಬುದ್ಧಿಜೀವಿಗಳ ಕೃತಿಗಳು ಒಂದೆರಡು ಮುದ್ರಣದಲ್ಲೇ ಮುಗಿಯುವ ಪರಿಸ್ಥಿತಿಯನ್ನು ನೋಡಿದರೆ, ಭೈರಪ್ಪನವರು ತಮ್ಮ ಸತ್ವಪೂರ್ಣವಾದ, ಸತ್ಯದರ್ಶನದ, ವಾಸ್ತವ ದೃಷ್ಟಿಯ ಸರಳ ಸುಲಭ ಶೈಲಿಯ ಬರವಣಿಗೆಯುಳ್ಳ ಕಾದಂಬರಿಗಳ ಮೂಲಕ ಓದುಗರ ಮೇಲೆ ಎಂತಹ ಪ್ರಭಾವ ಬೀರಿದ್ದಾರೆ ಎಂಬುದನ್ನು ಊಹಿಸಬಹುದು. **ವಂಶವೃಕ್ಷ, ಮತದಾನ, ತಬ್ಬಲಿಯು ನೀನಾದೆ ಮಗನೇ** ಚಲನಚಿತ್ರಗಳಾಗಿ ಪ್ರಶಸ್ತಿ ಪಡೆದು ಯಶಸ್ವಿಯಾಗಿವೆ.

ಅದರ ಜೊತೆಗೆ ಇನ್ನೊಂದು ಮುಖ್ಯ ವಿಷಯವೆಂದರೆ, ಭೈರಪ್ಪನವರು ನಮ್ಮ ಭರತಖಂಡದ ಎಲ್ಲ ದೇಶಭಾಷಾ ರಾಜ್ಯಗಳಲ್ಲೂ ಕೂಡಾ ಪ್ರಮುಖ ಕಾದಂಬರಿಕಾರರೆನಿಸಿದ್ದು, ಭಾಷೆಗಳ ಗಡಿಯನ್ನು ದಾಟಿದ ಭಾರತೀಯರೆನಿಸಿದ್ದಾರೆ. ಮರಾಠಿಯವರು ಭೈರಪ್ಪನವರನ್ನು ತಮ್ಮ ಭಾಷೆಯ ಕಾದಂಬರಿಕಾರರೆಂದೇ ಭಾವಿಸಿದ್ದಾರೆ... ಧರ್ಮಶ್ರೀ, ಆವರಣ, ಪರ್ವ, ಸೇರಿದಂತೆ 8 ಕಾದಂಬರಿಗಳು ಸಂಸ್ಕೃತ ಭಾಷೆಗೆ ಅನುವಾದವಾಗಿವೆ... ದಾಟು, ಪರ್ವ ಸೇರಿದಂತೆ 6 ಕಾದಂಬರಿಗಳು ಮಲೆಯಾಳಂಗೆ ಅನುವಾದವಾಗಿವೆ... ಪರ್ವ, ಆವರಣ, ಕವಲು ಸೇರಿದಂತೆ 7 ಕಾದಂಬರಿಗಳು ತಮಿಳಿಗೆ ಅನುವಾದವಾಗಿವೆ. ಧರ್ಮಶ್ರೀ, ಸಾರ್ಥ, ಆವರಣ ಸಂಕೇತಿ ಭಾಷೆಗೆ ಅನುವಾದವಾಗಿವೆ. ಧರ್ಮಶ್ರೀ, ವಂಶವೃಕ್ಷ ಪರ್ವ, ಆವರಣ ಮೊದಲಾದ 6 ಕಾದಂಬರಿಗಳು ತೆಲುಗು ಭಾಷೆಗೆ ಅನುವಾದವಾಗಿವೆ. ಸಾರ್ಥ ಹವ್ಯಕ ಭಾಷಗೆ ಅನುವಾದವಾಗಿದೆ. ದಾಟು, ವಂಶವೃಕ್ಷದಿಂದ ಹಿಡಿದು 18 ಕಾದಂಬರಿಗಳು ಹಿಂದಿ ಭಾಷೆಗೆ ಅನುವಾದವಾಗಿದ್ದರೆ, 16 ಕಾದಂಬರಿಗಳು ಮರಾಠಿ ಭಾಷೆಗೆ ಅನುವಾದವಾಗಿವೆ. ದಾಟು ಕೊಂಕಣಿ ಭಾಷೆಗೆ, ವಂಶವೃಕ್ಷ ಗೃಹಭಂಗ, ಮಂದ್ರ ಒಡಿಯಾ ಭಾಷೆಗೆ, ಗೃಹಭಂಗ, ಪರ್ವ ಬೆಂಗಾಲಿ ಭಾಷೆಗೆ, ಗೃಹಭಂಗ, ಪರ್ವ ಪಂಜಾಬಿ ಭಾಷೆಗೆ, ದಾಟು, ಆವರಣ, ಪರ್ವ, ತಬ್ಬಲಿಯು ನೀನಾದೆ. ಮಗನೆ. ಮೊದಲಾದ 6 ಕಾದಂಬರಿಗಳು ಗುಜರಾತಿ ಭಾಷೆಗೆ, ಗೃಹಭಂಗ ಅಸ್ಸಾಮಿ ಭಾಷೆಗೆ, ವಂಶವೃಕ್ಷ ದಾಟು ಉರ್ದು ಭಾಷೆಗೆ ಅನುವಾದವಾಗಿವೆ. ಈ ಅನುವಾದಗಳನ್ನು ಆಯಾ ಭಾಷೆಯ ಶ್ರೇಷ್ಠ ಸಾಹಿತಿಗಳು, ವಿದ್ವಾಂಸರುಗಳು ಮಾಡಿರುವುದು ಇನ್ನೊಂದು ವಿಶೇಷ. ಅನೇಕ ಅನುವಾದಕ ವಿದ್ವಾಂಸರು ಇಂತಹ ಶ್ರೇಷ್ಠ ಮಟ್ಟದ ಕಾದಂಬರಿಗಳನ್ನು ನಾವು ನಮ್ಮ ಭಾಷೆಯಲ್ಲೇ ನೋಡಿಲ್ಲ ಎಂದು ಉದ್ಗಾರವೆತ್ತಿದ್ದಾರೆ.

ಭೈರಪ್ಪನವ ಕಾದಂಬರಿಗಳು ದೇಶಭಾಷೆಯನ್ನು ಹೊರತುಪಡಿಸಿ ವಿದೇಶಿ ಭಾಷೆಗಳಿಗೂ ಅನುವಾದವಾಗಿ ಓದುಗರ ಗಮನಸೆಳೆದಿವೆ. **ಆಂಗ್ಲಭಾಷೆಗೆ 16 ಕಾದಂಬರಿಗಳು ಅನುವಾದಿತವಾಗಿವೆ.** ಪರ್ವ ಕಾದಂಬರಿಯು ಚೈನಿ ಭಾಷೆಗೆ ಅನುವಾದವಾಗಿವೆ. ಸಾಹಿತ್ಯ ಅಕಾಡೆಮಿಯು ಪರ್ವ ಕಾದಂಬರಿಯನ್ನು ಆಂಗ್ರಭಾಷೆಗೆ ಅನುವಾದ ಮಾಡುಬೇಕೆಂಬ ಕಾರ್ಯಕ್ಕೆ ಅನೇಕರು ಕಲ್ಲು ಹಾಕಲು ಪ್ರಯತ್ನಿಸಿದ್ದನ್ನು ಭೈರಪ್ಪನವರು ದಾಖಲಿಸಿದ್ದಾರೆ... ಪರ್ವ ಕಾದಂಬರಿಯು ಚೈನೀಸ್ ಮತ್ತು ರಷಿಯನ್ ಭಾಷೆಗೆ ಅನುವಾದವಾಗಿರುವುದು ವಿಶೇಷ. ಅವರ ಇತರ ಸೃಜನಾತ್ಮಕ ಕೃತಿಗಳು ಆಂಗ್ಲ, ಮರಾಠಿ ಭಾಷೆಗೆ ಅನುವಾದವಾಗಿವೆ.

ಭೈರಪ್ಪನವರ ಸಮಗ್ರ ಕಾದಂಬರಿಗಳ ವಿಚಾರ, ವಿಮರ್ಶೆಯ ಬಗ್ಗೆ, ವ್ಯಕ್ತಿತ್ವದ ಬಗ್ಗೆ, ಅವರ ಕೆಲವು ಕಾದಂಬರಿಗಳ ಬಗ್ಗೆ ಅವರನ್ನು ಅಭಿನಂದಿಸುವ ಬಗ್ಗೆ, ಅವರ ತೆಗಳುವಿಕೆಯೂ ಸೇರಿದಂತೆ ಇದುವರೆಗೆ ಸುಮಾರು 40 ಕೃತಿಗಳು ಪ್ರಕಟವಾಗಿವೆ. ಇದಕ್ಕೆ ಹೊರತಾಗಿ ಸಾಂದರ್ಭಿಕ ಲೇಖನಗಳು ಬಹುಸಂಖ್ಯೆಯಲ್ಲಿ ಪ್ರಕಟವಾಗಿವೆ. ಭೈರಪ್ಪನವರ ಸಮಗ್ರ ಸಾಹಿತ್ಯದ ಬಗ್ಗೆ ಹಾಗೂ ಕಾದಂಬರಿಯ ಬಗ್ಗೆ. ಸಂಶೋಧನೆಯನ್ನು ನಡೆಸಿ ನಾಲ್ಕೈದು ಜನ ಡಾಕ್ಟರೇಟ್ ಪದವಿ ಪಡೆದಿದ್ದಾರೆ. 1977ರಲ್ಲಿ ಪ್ರಕಟವಾದ ಲೀಲಾವತಿ ತೋರಣಗಟ್ಟಿಯವರ "ಭೈರಪ್ಪನವರ ಕಾದಂಬರಿಗಳು", 19784ಲ್ಲಿ ಎಂ.ಗೋವಿಂದರಾವ್ ಮತ್ತು ಮಾಧವ ಕುಲಕರ್ಣಿ ಇವರು ಸಂಪಾದಿಸಿದ "ಸಹಸ್ಪಂದನ" ಇಂತಹ ಆರಂಭದ ಕೃತಿಗಳಾದಲ್ಲಿ. ಪ್ರೊ. ಎಲ್.ವಿ. ಶಾಂತಕುಮಾರಿ, ಶತಾವಧಾನಿ ಡಾ. ಆರ್.ಗಣೇಶ್, ಡಾ. ಅಜಕ್ಕಳ ಗಿರೀಶ್‌ಭಟ್, ಬಿ.ಎನ್.ಶಶಿಕಿರಣ್ ಅವರ ಸಂಪಾದಕತ್ವದಲ್ಲಿ 2019ರಲ್ಲಿ ಪ್ರಕಟವಾಗಿರುವ ಭೈರಪ್ಪನವರ ಸಾಹಿತ್ಯ ಕೃತಿಗಳ ಸಮಗ್ರ ಅಧ್ಯಯನದ, ಸುಮಾರು 550 ಪುಟಗಳ **"ನಿರ್ಲಿಪ್ತ"** ಇತ್ತೀಚಿನ ವಿಚಾರ ವಿಮರ್ಶೆಯ ಗಣ್ಯ ಕೃತಿಯಾಗಿದೆ.

ಭೈರಪ್ಪನವರ ಸಾಹಿತ್ಯ ಕನ್ನಡ ಭಾಷೆಯ ಗಡಿಯನ್ನು ದಾಟಿ, ಭಾರತೀಯ ಭಾಷೆಗಳಿಗೆ, ಭಾರತೀಯ ಭಾಷೆಗಳ ಗಡಿಯನ್ನು ದಾಟಿ ವಿಶ್ವ ಭಾಷೆಯೆನಿಸಿರುವ ಆಂಗ್ಲ ಭಾಷೆಗೆ, ಚೈನೀಸ್, ರಷಿಯನ್ ಭಾಷೆಗಳಿಗೆ, ಅನುವಾದವಾಗಿರುವುದನ್ನು ನೋಡಿದರೆ ಸಾಹಿತ್ಯಕ್ಕಾಗಿ ಅವರಿಗೆ ನೋಬಲ್ ಪ್ರಶಸ್ತಿ ಬರಬಹುದಾದ ದಿನ ದೂರವಿಲ್ಲವೆಂದು ಕನ್ನಡಿಗರಾದ ನಾವು ಆಸೆಯಿಂದ ಪ್ರತೀಕ್ಷೆ ಮಾಡುವುದು ಸಹಜವೇ ಆಗಿದೆ. ನಮ್ಮ ವಿಪ್ರ ಸಮಾಜದ ಮಕುಟಮಣಿಯಂತಿರುವ ಡಾ. ಎಸ್.ಎಲ್. ಭೈರಪ್ಪನವರಿಗೆ ಪದ್ಮವಿಭೂಷಣ ಪ್ರಶಸ್ತಿ ಬಂದಿರುವ ಈ ಮಹತ್ವದ ಸಂದರ್ಭದಲ್ಲಿ, ಎಸ್.ಎಲ್. ಭೈರಪ್ಪನವರನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ವತಿಯಿಂದ, ರಾಜ್ಯದ ಹಾಗೂ ಭಾರತೀಯ ವಿಪ್ರ ಸಮಾಜದ ಪರವಾಗಿ, ಗೌರವ ಆದರಗಳೊಡನೆ, ಹೃತ್ಪೂರ್ವಕವಾಗಿ, ತುಂಬು ಹೃದಯದಿಂದ ಅಭಿನಂದಿಸುತ್ತೇವೆ. ನಮ್ಮ ಸಂತಸವನ್ನು ನಮ್ಮ ಸಮಾಜದೊಡನೆ ಹಂಚಿಕೊಳ್ಳುತ್ತೇವೆ.

# ಯುಗಾದಿ

– ಡಾ॥ ಹಿತ್ಲಳ್ಳಿ ಸೂರ್ಯನಾರಾಯಣ ನಾಗೇಂದ್ರ ಭಟ್ಟ



ಶುಭಕೃತ್ಸಂವತ್ಸರ ವರ್ತಮಾನದಿಂದ ಸರಿದು ಶೋಭನ ಸಂವತ್ಸರ ಸದ್ಯದಲ್ಲಿಯೇ ಶೋಭಿಸಲಿದೆ. ಈ ಶುಭ ಸಂದರ್ಭದಲ್ಲಿ ನಮ್ಮ ನಾಡಿನಲ್ಲಿ ಯುಗಾದಿ ಹಬ್ಬದ ಸಡಗರ ಎಂದಿನಂತೆ ಇದ್ದೇ ಇರುತ್ತದೆ. ಪ್ರಕೃತಿಯೇ ಚಿಗುರಿದ ಸಮಯದಲ್ಲಿ ತಳಿರು ತೋರಣಗಳು ಎಲ್ಲ ಕಡೆಯೂ ರಾರಾಜಿಸುತ್ತವೆ. ಈ ಸೂರ್ಯೋದಯ ಎಂದಿನಂತೆ ಅಲ್ಲ, ಹಾಸಿಗೆಯಿಂದ ಬಲ ಮಗ್ಗಲಿನಲ್ಲಿ ಎದ್ದು ಅಭ್ಯಂಜನ ಮಾಡಿ ಮಿಂದು ಹೊಸ ಬಟ್ಟೆ ಧರಿಸಿ, ಭಾಸ್ಕರ ದರ್ಶನ ಮಾಡಿ, ದೇವರನ್ನು ಸ್ಮರಿಸಿ ಬೇವು ತುಪ್ಪ ತಿಂದು ಉಪಾಹಾರ ಮುಗಿಸಿದರೆ ಬೆಳಿಗ್ಗೆ ಕಾರ್ಯಕ್ರಮ ಮುಗಿದರೂ ಮಧ್ಯಾಹ್ನ ಹೋಳಿಗೆ ಊಟದ ವ್ಯವಸ್ಥೆ ಮಾಡುವುದಕ್ಕೆ ಸಮಯ ಸಾಲದು ಎನ್ನುವ ಹಾಗೆ ಆಗುತ್ತದೆ. ಅದು ಮುಗಿದ ಮೇಲೆ ಪಂಚಾಂಗ ಶ್ರವಣ ಮಾಡಲು ದೇವಾಲಯಕ್ಕೆ ಹೋಗುವುದು ವಾಡಿಕೆ.

ಈಗ ಕಾಲ ಬದಲಾಗಿದೆ ಎಂಬ ಹೇಳಿಕೆ ನಿಜವೇ ಆದರೂ ಯುಗಾದಿ ಹಬ್ಬದ ಸಡಗರ ಇದ್ದೇ ಇರುತ್ತದೆ. ಪ್ರಕೃತಿಯೇ ಬದಲಾಗಿ ಹೋಗಿರುವಾಗ ನಾವು ಬದಲಾಗುವುದರಲ್ಲಿ ವಿಶೇಷವೇನೂ ಇಲ್ಲ. ಪ್ರತಿ ವರ್ಷ ಪೂಜೆಯಾದ ಮೇಲೆ ಹೇಳುವ ಪಂಚಾಂಗ ಸಂಕ್ಷಿಪ್ತವಾಗಿರಬಹುದು,. ಆದರೆ ಅದರ ಶ್ರವಣವಾದರೆ ಸಮಾಧಾನ, ಆಮೇಲೆ ಅದು ನೆನಪಿಗೆ ಬರಲಿ ಬಿಡಲಿ ಶ್ರವಣ ಮಾಡಲೇಬೇಕು. ನವ ನಾಯಕರು, ಕಂದಾಯ, ಸಂಕ್ರಾಂತಿ .. ಎಲ್ಲವನ್ನು ಒಮ್ಮೆ ಕೇಳಿ ಆನಂದಿಸಿದ ಮೇಲೆ ಆ ಕುರಿತು ಮತ್ತೆ ವಿಚಾರ ಮಾಡುವ ಜನರು ತೀರಾ ಕಡಿಮೆ. ಅದನ್ನು ಕೇಳಿದಾಗ ವಿರೋಧಾಭಾಸವನ್ನು ಗಮನಿಸಿ ಅಲ್ಲಿಯೇ ಟೀಕಿಸುವ ಜನರೂ ಇಲ್ಲದಿಲ್ಲ. ಆದರೆ ನವ ಗ್ರಹಗಳು ನಮ್ಮ ಊರಲ್ಲಿ ಮಾತ್ರ ಇರುವುದಿಲ್ಲ. ಅವರು ಇಡೀ ಜಗತ್ತು ನಡೆಸುವ ಆಕಾಶಗಾಮಿಗಳು ಎಂದು ಯೋಚಿಸಿ ಸುಮ್ಮನೆ ಇರುವ ಜನರು ಹೆಚ್ಚು,

ಹೆಸರೇ ಹೇಳುವಂತೆ ಈ ವರ್ಷ ಒಟ್ಟಿನಲ್ಲಿ ಶುಭದಾಯಕವಾಗಲಿದೆ. ಆದರೆ ರೋಗ ಪೀಡೆಯಿಂದ ಜನರು ಬಳಲುವಂತಾಗುತ್ತದೆ. ಸ್ವರಾಶಿಯಲ್ಲಿದ್ದರೂ ಗುರು ಮತ್ತು ಶನಿ ಒಳ್ಳೆಯ ಫಲವನ್ನು ಸೂಚಿಸುವುದಿಲ್ಲ. ಅನಿಷ್ಟ ಗಾಳಿ ಬೀಸಲಿದೆ ಹಾಗೂ ಆಹಾರ ಧಾನ್ಯದ ಬೆಲೆ ಏರಲಿದೆ.ಈ ವರ್ಷ ಬುಧನು ರಾಜನಾಗಿದ್ದು ಅದು ಅತ್ಯಂತ ಒಳ್ಳೆಯದು, ಶುಕ್ರನು ಮಂತ್ರಿಯಾಗಿಯೂ ಲೇಖಕರಿಗೆ ಒಡೆಯನಾಗಿಯೂ ಬುಧನಂತೆ ಮಂಗಳ ವಾತಾವರಣದಲ್ಲಿ ಜನರು ಇರುವಂತೆ ಮಾಡುತ್ತಾರೆ. ಸೇನಾಧಿಪತಿಯಾಗಿಯೂ ರಾತ್ರಿಚರನಾಗಿಯೂ ಮೋಡಗಳ ಚಲನೆ ವಲನೆ ನೋಡಿಕೊಂಡು ಅವುಗಳನ್ನು ಪ್ರೇರೇಷಪಿಸುವವನಾಗಿಯೂ ಬೆಲೆಯ ನಿಯಂತ್ರಣ ಮಾಡುವವನಾಗಿಯೂ ಸುವರ್ಣಾಧಿಪತಿಯಾಗಿಯೂ ಗ್ರಾಮಾಧಿಪತಿಯಾಗಿಯೂ ಗುರುವು ಒಳ್ಳೆಯದನ್ನು ಮಾಡುತ್ತಾನೆ. ಸಸ್ಯಾಧಿಪತಿಯಾಗಿಯೂ ನೀರಸೇಶನಾಗಿಯೂ ರವಿಯು ಒಳ್ಳೆಯದನ್ನು ಮಾಡುವುದಿಲ್ಲ. ಅದರಂತೆ ಧಾನ್ಯಾಧಿಪತಿಯಾದ ಶನಿ ಒಳ್ಳೆಯದಲ್ಲ, ಕುಜನು ರಸೇಶನಾಗಿಯೂ ಗ್ರಾಮಾಧಿಪತಿಯಾಗಿಯೂ ಅಭಿವೃದ್ಧಿಯನ್ನು ತಡೆಯುತ್ತಾನೆ. ಮಾರ್ಗದರ್ಶನ ಮಾಡುವ ಚಂದ್ರನು ಶುಭವನ್ನು ಸೂಚಿಸುತ್ತಾನೆ.

ಆಷಾಢ ಶುಕ್ಲ ಪಂಚಮಿ ಗುರುವಾರ ಆಶ್ಲೇಷಾ ನಕ್ಷತ್ರ ಹರ್ಷಣ ಯೋಗ ಬವ ಕರಣ ಕರ್ಕರಾಶಿ ವೃಶ್ಚಿಕ ಲಗ್ನ ಸಂಜೆ 5.48ಕ್ಕೆ ಸರಿಯಾಗಿ ರವಿಯು ಆರ್ದ್ರಾ ಪ್ರವೇಶ ಮಾಡುತ್ತಾನೆ. ಪಂಚಮಿಯೂ ಗುರು ವಾರವೂ ಹರ್ಷಣ ಯೋಗವೂ ಒಳ್ಳೆಯದು, ಆದರೆ ಆಶ್ಲೇಷಾ ನಕ್ಷತ್ರವೂ ಬವ ಕರಣವೂ ಒಳ್ಳೆಯದಲ್ಲ. ಒಟ್ಟೂ ನಾಲ್ಕು ಕೊಳಗ ಮಳೆ ಆಗಲಿದೆ. ಭೂಮಿಯ ಮೇಲೆ 0.8 ಕೊಳಗ ಮಾತ್ರ ಮಳೆ, ಉಳಿದಿದ್ದು ಬೆಟ್ಟ ಮತ್ತು ಸಮುದ್ರದಲ್ಲಿ ಬೀಳುತ್ತದೆ. ಇಲ್ಲಿ ಕೊಳಗವಂದರೆ ಅಸಾಮಾನ್ಯವಾದುದು. ಅದು 608100 ಯೋಜನ ಘನ ಪ್ರಮಾಣದಲ್ಲಿ ಇರುವುದು.

### ಸಂಕ್ರಾಂತಿ ಫಲ

ಚೈತ್ರ ಮಾಸ, ಶುಕ್ಲ ಪಕ್ಷ ನವಮಿ ಶುಕ್ರವಾರ ಹಗಲು 2.58ಕ್ಕೆ ಮೇಷ ಸಂಕ್ರಾಂತಿ, ಅದನ್ನು ವಿಷುವ ಎಂದು ಹೇಳುವುದೂ ಉಂಟು, ಅಂದು ಸೌರ ಮಾನದಂತೆ ವರ್ಷವು ಆರಂಭವಾಗುತ್ತದೆ. ಈ ವರ್ಷ ಕಾಲ ಪುರುಷನಿಗೆ ಮಿಶ್ರ ಎಂಬ ಹೆಸರು, ಅವನು ಸಾಸಿವೆ ಎಣ್ಣೆಯನ್ನು ಮೈಗೆ ಚೆನ್ನಾಗಿ ತಿಕ್ಕಿ ಲೇಪಿಸಿಕೊಳ್ಳುತ್ತಾನೆ. ಸಿಂಧೂ ನದಿಯ ನೀರಿನಲ್ಲಿ ಮೀಯುತ್ತಾನೆ. ಪೀತಾಂಬರ ಅವನ ಉಡುಗೆ. ವೈಡೂರ್ಯ ಅವನ ಒಡವೆ. ಅರಗು ಅವನ ಗಂಧ. ಹಣ್ಣು ಸಂಪಿಗೆ ಹೂಗಳನ್ನು ಮುಡಿಯಲ್ಲಿ ಧರಿಸಿ ಗೋದಿಯನ್ನು ಹಣೆಯ ಮೇಲೆ ಅಕ್ಷತೆಯಾಗಿ ಇಟ್ಟು ಕೊಳ್ಳುತ್ತಾನೆ , ಸೀಸದ ಪಾತ್ರೆಯಲ್ಲಿ ಹಾಲು ಕುಡಿಯುತ್ತಾನೆ. ಬೊಗರಿ ಹಣ್ಣು ಹಿಡಿದು ಕೊಂಡು ಆನೆಯ ಮೇಲೆ ಕುಳಿತು ಮೊರವನ್ನು ಕೊಡೆಯಂತೆ ಹಿಡಿದು ಕೊಂಡು ಬಿಲ್ಲು ತೋಳಿಗೆ ಸೇರಿಸಿ ಶಂಖ ವಾದ್ಯ ಮೊಳಗುವಾಗ ರಾಜ ಪರಿವಾರದೊಂದಿಗೆ ವಿಸ್ಮಯಗೊಂಡವನಂತೆ ಪೂರ್ವದಿಂದ ಬಂದು ನೈರ್ಯತ್ಯ ನೋಡಿ ದಕ್ಷಿಣಕ್ಕೆ ಪ್ರಯಾಣಿಸುತ್ತಾನೆ. ಈ ಸಂಕ್ರಾಂತಿ ಪುರುಷನು ಉಪಯೋಗಿಸಿದ ವಸ್ತು ದುಬಾರಿ ಆಗುತ್ತದೆ. ಹೋದ ದಿಕ್ಕಿಗೆ ಹಾಗೂ ನೋಡಿದ ದಿಕ್ಕಿಗೆ ಹಾನಿಯಾಗುತ್ತದೆ. ಅವನು ಬಂದ ದಿಕ್ಕಿಗೆ ಶುಭವಾಗುತ್ತದೆ.

ಈ ವರ್ಷ ಒಂದು ಚಂದ್ರ ಗ್ರಹಣ ನಮಗೆ ಗೋಚರವಾಗಲಿದೆ. ಆಶ್ವಯುಜ ಹುಣ್ಣಿಮೆ ಶನಿವಾರ ರಾತ್ರಿ 1.5ರಿಂದ 2.23ರ ವರೆಗೆ ಪಶ್ಚಿಮ

ಕರಾವಳಿಯಲ್ಲಿ ರಾಹು ಗ್ರಸ್ತ ಚಂದ್ರನು ಭಾಗಶಃ ಗೋಚರವಾಗಲಿದ್ದು ಮೇಷ ವೃಷಭ ಕನ್ಯಾ ಮಕರ ರಾಶಿಯವರಿಗೆ ಅಶುಭವಾಗುತ್ತದೆ, ಈ ದಿನ 3.11ರಿಂದ ರಾತ್ರಿ 2.23ರ ವರಗೆ ಊಟ ಮಾಡಬಾರದು, ಅದು ಅಸಾಧ್ಯವೆನಿಸಿದರೆ ಸೂರ್ಯಾಸ್ತವಾದ ಮೇಲೆ ಗ್ರಹಣ ಮುಗಿಯುವ ವರೆಗೂ ಉಪವಾಸ ಮಾಡಬಹುದು.

## ನಕ್ಷತ್ರ ಕಂದಾಯ

| | | | |
|---|---|---|---|
| ಅಶ್ವಿನೀ | 1–1–4 | ಸ್ವಾತಿ | 3–0–22 |
| ಭರಣೀ | 4–2–1 | ವಿಶಾಖಾ | 6–1–4 |
| ಕೃತ್ತಿಕಾ | 7–0–3 | ಅನುರಾಧಾ | 1–2–1 |
| ರೋಹಿಣೀ | 2–1–0 | ಜ್ಯೇಷ್ಠಾ | 4–0–3 |
| ಮೃಗಶಿರಸ್ | 5–2–2 | ಮೂಲ | 7–1–0 |
| ಆರ್ದ್ರಾ | 0–0–4 | ಪೂರ್ವಾಷಾಢಾ | 2–2–1 |
| ಪುನರ್ವಸು | 3–1–1 | ಉತ್ತರಾಷಾಢಾ | 5–0–4 |
| ಪುಷ್ಯ | 6–2–3 | ಶ್ರವಣ | 0–1–1 |
| ಆಶ್ಲೇಷಾ | 1–0–0 | ಧನಿಷ್ಠಾ | 3–2–3 |
| ಮಘಾ | 4–1–2 | ಶತಭಿಷಕ್ | 6–0–0 |
| (ಪೂರ್ವ) ಹುಬ್ಬ | 7–2–4 | ಪೂರ್ವಾಭದ್ರಾ | 1–1–2 |
| ಉತ್ತರಾ | 2–0–1 | ಉತ್ತರಾಭದ್ರಾ | 4–2–4 |
| ಹಸ್ತ | 5–1–3 | ರೇವತೀ | 7–0–1 |
| ಚಿತ್ರಾ | 0–2–0 | | |

### ಸಂವತ್ಸರದಲ್ಲಿ ಹನ್ನೆರಡು ಮಾಸಗಳಿರುತ್ತವೆ –

| | |
|---|---|
| 1. ಚೈತ್ರ | 7. ಆಶ್ವಿನ |
| 2. ವೈಶಾಖ | 8. ಕಾರ್ತಿಕ |
| 3 ಜ್ಯೇಷ್ಠ | 9. ಮಾರ್ಗಶೀರ್ಷ |
| 4 ಆಷಾಢ | 10. ಪುಷ್ಯ |
| 5. ಶ್ರಾವಣ | 11. ಮಾಘ |
| 6. ಭಾದ್ರಪದ | 12. ಫಾಲ್ಗುಣ. |

ಒಂದೊಂದು ನಕ್ಷತ್ರಕ್ಕೆ ಮೂರು ಕಂದಾಯಗಳು. ಅವುಗಳ ಫಲ ನಾಲ್ಕು ತಿಂಗಳ ವರೆಗೆ ಇರುತ್ತದೆ.

ಚೈತ್ರದಿಂದ ಆಷಾಢದ ವರೆಗೆ ಮೊದಲನೆಯ ಕಂದಾಯ.

ಶ್ರಾವಣದಿಂದ ಕಾರ್ತಿಕದ ವರೆಗೆ ಎರಡನೆಯ ಕಂದಾಯ.

ಮಾರ್ಗಶೀರ್ಷದಿಂದ ಫಾಲ್ಗುಣದ ವರೆಗೆ ಮೂರನೆಯ ಕಂದಾಯ.

ಈ ಅಂಕೆ ಸಮವಾಗಿದ್ದರೆ ಅಶುಭ. ಬೆಸ ಸಂಖ್ಯೆಯು ಶುಭ. ಮೂರು ಅಂಕೆಗಳಲ್ಲಿ ಸೊನ್ನೆ ಮೊದಲು ಇದ್ದರೆ ರೋಗ. ಎರಡನೆಯದಾಗಿ ಇದ್ದರೆ ಅಲ್ಪ ಫಲ. ಕೊನೆಯದಾಗಿ ಇದ್ದರೆ ನಿಷ್ಫಲ. ಮೂರು ಸೊನ್ನೆಗಳಿದ್ದರೆ ಜೀವಭಯ

### ಮೇಷಾದಿ ರಾಶಿಗಳ ಆಯ – ವ್ಯಯ

| | | | |
|---|---|---|---|
| ಮೇಷ | 2 – 5 | ತುಲಾ | 11 – 11 |
| ವೃಷಭ | 11 – 11 | ವೃಶ್ಚಿಕ | 2 – 5 |
| ಮಿಥುನ | 2 – 11 | ಧನು | 14 – 8 |
| ಕರ್ಕ | 11 – 5 | ಮಕರ | 8 – 11 |
| ಸಿಂಹ | 14 – 5 | ಕುಂಭ | 8 – 11 |
| ಕನ್ಯಾ | 2 – 14 | ಮೀನ | 14 – 8 |

ಇಂತಹ ಅನೇಕ ವಿಷಯಗಳನ್ನು ಪಂಚಾಂಗದಲ್ಲಿ ಹೇಳಿರುತ್ತಾರೆ. ಅವುಗಳನ್ನು ಕೇಳಿದ ಮೇಲೆ ಅವು ಸಾಮೂಹಿಕ ಫಲಗಳೆಂದೂ ಸಾಮಾನ್ಯ ಫಲಗಳೆಂದೂ ತಿಳಿಯಬೇಕು. ವೈಯಕ್ತಿಕವಾಗಿ ನಮ್ಮ ಫಲವನ್ನು ಜಾತಕ ಪರಿಶೀಲನೆಯಿಂದ ಮಾತ್ರ ತಿಳಿಯಬಹುದು. ಈ ಫಲಗಳನ್ನು ಕೇಳಿದ ಮೇಲೆ ಅವು ಶುಭವಾಗಿದ್ದರೆ ಅನುಕೂಲವೇ ಸರಿ. ಒಂದುವೇಳೆ ಅಶುಭವಾಗಿದ್ದರೆ ದೃಢವಾಗಿ ಒಳ್ಳೆಯ ಕಾರ್ಯಗಳನ್ನು ಮಾಡಿದರೆ ಅಶುಭ ಫಲಗಳು ದೂರವಾಗುತ್ತವೆ. ಪಂಚಾಂಗವನ್ನು ಯುಗಾದಿಯಂದು ಕೇಳುವುದಾದರೂ ಒಳ್ಳೆಯದಾಗಬೇಕೆಂಬ ಉದ್ದೇಶದಿಂದಲೇ ಆಗಿರುತ್ತದೆ. ತಿಥಿಯನ್ನು ಅರಿತುಕೊಂಡರೆ ಐಶ್ವರ್ಯ ಲಭಿಸುತ್ತದೆ. ವಾರವನ್ನು ತಿಳಿದುಕೊಂಡರೆ ಆಯುಷ್ಯವು ಅಭಿವೃದ್ಧಿಯಾಗುತ್ತದೆ. ನಕ್ಷತ್ರವನ್ನು ನಿಶ್ಚಯಿಸಿಕೊಂಡರೆ ಪಾಪವು ಪರಿಹಾರವಾಗುತ್ತದೆ. ಯೋಗದಿಂದ ರೋಗ ನಿವಾರಣೆಯಾಗುತ್ತದೆ. ಕರಣವನ್ನು ಕಾರ್ಯ ಸಿದ್ಧಿಗಾಗಿ ಪರಿಶೀಲಿಸಬೇಕು. ಹೀಗೆ ಯುಗಾದಿಯ ದಿನವಾದರೂ ಪಂಚಾಂಗ ಶ್ರವಣ ಮಾಡಿದರೆ

ಅದರಿಂದ ವರ್ಷವಿಡೀ ಶುಭವಾಗುವುದೆಂದು ಹೇಳಲಾಗಿದೆ. ಈ ಶೋಭನ ಸಂವತ್ಸರವು ಸಮಸ್ತ ವಿಶ್ವವನ್ನು ಆನಂದ ಸಾಗರದಲ್ಲಿ ತೇಲಿಸಲಿ.





# ಪಾರ್ವತಿ ಚಂದ್ರಶೇಖರ ಅಯ್ಯರ್

**ಸುರೇಶ್ ಮೂನ**

ಇಂದಿನ ಸಮಾಜದಲ್ಲಿ ಮಹಿಳೆಯರು ಪುರುಷರಿಗೆ ಸರಿಸಮಾನವಾಗಿ ಎಲ್ಲ ಕ್ಷೇತ್ರಗಳಲ್ಲೂ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರತಿ ವರ್ಷ ಮಾರ್ಚ್ 8ನೇ ತಾರೀಖನ್ನು ಅಂತರಾಷ್ಟ್ರೀಯಮಹಿಳಾ ದಿನಾಚರಣೆಯನ್ನಾಗಿ ಆಚರಿಸಲಾಗುತ್ತದೆ. ವಿಶ್ವದಾದ್ಯಂತ ಮಹಿಳೆಗೆ ಸಂಬಂಧಿಸಿದಂತೆ ವೈವಿಧ್ಯಮಯ ಕಾರ್ಯಕ್ರಮಗಳು ಆಯೋಜಿಸಲ್ಪಟ್ಟು ಪುರಸ್ಕಾರಗಳು ಮಹಿಳೆಗೆ ಸಲ್ಲಲ್ಪಡುತ್ತವೆ.

ಅಂತಹವರಲ್ಲಿ ಬ್ರಾಹ್ಮಣ ಸಮಾಜದ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿಯೇ ಇದ್ದಾರೆ. ಮಹಿಳಾ ದಿನಾಚರಣೆಯು ಆಚರಿಸಲ್ಪಡುವ ತಿಂಗಳಿನ ಈ ಸಂದರ್ಭದಲ್ಲಿ ಅಂತಹ ಒಬ್ಬಮಹಿಳೆಯ ಸಾಧನೆಯ ಕಿರುಪರಿಚಯವನ್ನು ಇಲ್ಲಿ ನೀಡಲಾಗುತ್ತಿದೆ. ಅವರೇ ಪಾರ್ವತಿ ಚಂದ್ರಶೇಖರ ಅಯ್ಯರ್.

1875ರಲ್ಲಿ ಪಾರ್ವತಿ ಅಮ್ಮಾಳ ತಮಿಳುನಾಡಿನ ಗ್ರಾಮ ಒಂದರಲ್ಲಿ ಜನಿಸಿದರು. ತಮ್ಮ ಐದನೆಯ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡ ಇವರಿಗೆ ಮದುವೆಯಾದಾಗ 9 ವರ್ಷ. ಮರುವರ್ಷವೇ ತಾಯಿಯನ್ನು ಕಳೆದುಕೊಂಡು ಪತಿಯ ಮನೆಗೆ ಆಗಮಿಸಿದರು. ಪತಿ ಕೆ ಎ ಸ್ಚಂದ್ರಶೇಖರ ಅಯ್ಯರ್‌ಗಿನ್ನು ಮದ್ರಾಸಿನ ಲಾಕಾಲೇಜಿನಲ್ಲಿ ಓದುತ್ತಿದ್ದರು. ಪಾರ್ವತಿಗೆ ವಯಸ್ಸು ಚಿಕ್ಕದಾದರೂ ವಿಶಾಲಹೃದಯ, ಗೃಹಕಾರ್ಯಗಳಲ್ಲಿ ಅಚ್ಚುಕಟ್ಟುತನ ಇವುಗಳಿಂದಾಗಿ ಪತಿಯ ಮನೆಯವರೆಲ್ಲರ ಗೌರವ ಮತ್ತು ಪ್ರೀತಿಗೆ ಪಾತ್ರರಾದರು. ಚಂದ್ರಶೇಖರ ಅಯ್ಯರ್. ಬಿಎಲ್ಡಿಗ್ರಿ ಪಡೆದು ಮೈಸೂರು ಸಿವಿಲ್ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ಕೆಲಸಕ್ಕೆ ಸೇರಿದ ಮೇಲೆ ಈ ದಂಪತಿ ಬೆಂಗಳೂರಿಗೆ ಬಂದು ನೆಲೆಸಿದರು.

ಪತಿಯಂತೆ ಪಾರ್ವತಿಯವರು ಥಿಯೋಸಫಿ ಪ್ರಭಾವಕ್ಕೆ ಒಳಗಾಗಿದ್ದರು. ಇದರಿಂದ ಸಮಾಜದಲ್ಲಿ ಮಹಿಳೆಯರ ಶಿಕ್ಷಣ ಮಟ್ಟ ಸುಧಾರಿಸ ಬೇಕು, ವಿವಾಹದ ವಯಸ್ಸು ಹೆಚ್ಚಾಗಬೇಕು, ವಿಧವೆಯರ ಜೀವನ ಮತ್ತು ಸ್ಥಾನಮಾನಗಳ ಪರಿಸ್ಥಿತಿ ಉತ್ತಮ ಗೊಳ್ಳಬೇಕು ಎಂಬೆಲ್ಲ ಚಿಂತನೆ ನಡೆಸಿ ಆ ನಿಟ್ಟಿನಲ್ಲಿ ಕಾರ್ಯೋನ್ಮುಖರಾದರು.

ಆಗ ನಾಲ್ಕು ಗೋಡೆಗಳೊಳಗಿನ ಜೀವನ ಕ್ರಮಕ್ಕೆ ಬದ್ಧರಾಗಿ ಸಾಮಾಜಿಕ ಕಟ್ಟುಪಾಡುಗಳಿಗೆ ಒಳಗಾಗಿದ್ದ ಸ್ತ್ರೀಯರಿಗೆ ಇಂತಹ ನವಚಿಂತನೆಯ ಮುಂದಾಳತ್ವ ಹೊಸ ಚೇತನವನ್ನು ನೀಡಿತು. ತಮ್ಮ ಚಿಂತನೆಗಳನ್ನು ಮಹಿಳೆಯರಿಗೆ ತಲುಪಿಸುವಲ್ಲಿ ಪಾರ್ವತಿಯವರಿಗೆ ನೆರವಾದದ್ದು ಅವರಿಗೆ ದೈವದತ್ತವಾಗಿಬಂದಿದ್ದ ಕನ್ನಡ ಮತ್ತು ಇಂಗ್ಲಿಷ್ಭಾಷೆಗಳಲ್ಲಿ ಸುಲಲಿತವಾಗಿ ಮಾತಾಡಬಲ್ಲ ಭಾಷಣಕಲೆ. ಯಾವ ಶಾಲಾ ಕಾಲೇಜುಗಳ ಮೆಟ್ಟಿಲನ್ನು ಹತ್ತದಿದ್ದರೂ ವೇದಿಕೆಯ ಮೇಲೆ ಹಿರಿಯ ವಿದ್ವಾಂಸರ ಮುಂದೆ ಮಂಡಿಸುತ್ತಿದ್ದ ವಿಚಾರಗಳು ಎಲ್ಲರಿಗೂ ಆಶ್ಚರ್ಯ ಹುಟ್ಟಿಸುತ್ತಿದ್ದವು. 1917ರಲ್ಲಿ ಮೈಸೂರಿನ ರಂಗಾಚಾರ್ಲು ಸಭಾ ಭವನದಲ್ಲಿ ನಡೆದ ಸಿವಿಕ್ ಅಂಡ್ಸೋಶಿಯಲ್ಕಾನ್ಫರೆನ್ಸ್‌ನಲ್ಲಿ ಬಾಲ್ಯವಿವಾಹ ಅಪೇಕ್ಷಣೀಯವಲ್ಲವೆಂದು, ವಿವಾಹಕ್ಕೆ ವಯಸ್ಸಿನ ಕನಿಷ್ಠ ಮಿತಿಯೊಂದು ಇರಬೇಕೆಂದು ಒಬ್ಬ ಸಾಂಪ್ರದಾಯಿಕ ಮಹಿಳೆ ಧೈರ್ಯವಾಗಿ ಮಂಡಿಸಿದ ಬಗೆಯನ್ನು ಮೈಸೂರು ಮನೆತನದ ಯುವರಾಜರಾದಿಯಾಗಿ ಎಲ್ಲರೂ ಮೆಚ್ಚಿಕೊಂಡರು. ಮೈಸೂರು ವಿಶ್ವವಿದ್ಯಾನಿಲಯದ ಆಹ್ವಾನದ ಮೇರೆಗೆ 1927ರ ಏಪ್ರಿಲ್ ಎಂಟರಂದು 'ವುಮೆನ್ಸ್‌ಅಡ್ವಾನ್ಸಮೆಂಟ್, ಸಮ್ಮೆಸೆಂಟ್ನೀಡ್ಸ್' ಎಂಬ ವಿಷಯದ ಬಗ್ಗೆ ತಜ್ಞರ ಎದುರಿಗೆ ಪರಿಣಾಮಕಾರಿ ಉಪನ್ಯಾಸವನ್ನು ನೀಡಿದರು.

ಬೆಂಗಳೂರಿನಲ್ಲಿ ಇವರು ಮಹಿಳೆಯರ ಶ್ರೇಯಸ್ಸಿಗಾಗಿ ಕೆಲವು ಗಣ್ಯ ವ್ಯಕ್ತಿಗಳೊಂದಿಗೆ ಸೇರಿ 1913ರ ಅಕ್ಟೋಬರ್‌ರಂದು ಸೇವಾ ಸದನ ಸೊಸೈಟಿ ಎಂಬ ಸಂಸ್ಥೆಯನ್ನು ಸ್ಥಾಪನೆ ಮಾಡಿದರು. ಇದರ ಪ್ರಮುಖ ಗುರಿ ಎಂದರೆ ಮಹಿಳೆಯರಿಗೆ ಶಿಕ್ಷಣ, ಗೃಹಿಣಿಯಾಗಿ ನಿರ್ವಹಿಸಬೇಕಾದ ಕರ್ತವ್ಯಗಳು, ವೈದ್ಯಕೀಯ ಹಾಗೂ ಸೇವಾಕಾರ್ಯಗಳಲ್ಲಿ ತರಬೇತಿ ಮುಂತಾದ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರ ಅರಿವಿನ ಪರಿಧಿಯನ್ನು ವಿಸ್ತಾರಗೊಳಿಸುವುದು. ಮುಂದೆ ಇದೇ ಸಂಸ್ಥೆ ಮಹಿಳಾ ಸೇವಾ ಸಮಾಜ ಎಂಬ ಹೆಸರನ್ನು ಪಡೆದು ದಕ್ಷಿಣ ಬೆಂಗಳೂರಿನ ಒಂದು ಪ್ರಮುಖ ಮಹಿಳಾ ಶಿಕ್ಷಣ ಸಂಸ್ಥೆಯಾಗಿ ಬೆಳೆದು ನೂರು ವರ್ಷಗಳ ನಂತರವೂ ಇಂದಿಗೂ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿದೆ.

ಇದಲ್ಲದೆ, ಇವರು ಶಿಶು ಕಲ್ಯಾಣ ಸಂಸ್ಥೆಗೆ ಅಧ್ಯಕ್ಷರಾಗಿದ್ದರು. ಸಿವಿಕ್ ಅಂಡ್ಸೋಶಿಯಲ್ಪ್ರೋಗ್ರೆಸ್ ಅಸೋಸಿಯೇಷನ್, ನಿಮ್ಹಾನ್ಸ್ ವುಮೆನ್ ಇಂಡಿಯನ್ ಅಸೋಸಿಯೇಷನ್, ಗರ್ಲ್ಗೈಡ್ಸ್, ಸೈಂಟ್ಜಾನ್ಸ್ ಆಂಬುಲೆನ್ಸ್ ಅಸೋಸಿಯೇಷನ್ ಮುಂತಾದ ಸೇವಾ ಸಂಸ್ಥೆಗಳಲ್ಲಿ ಜವಾಬ್ದಾರಿಯುತ ಸ್ಥಾನಗಳಲ್ಲಿ ಸಮರ್ಪಕವಾಗಿ ಸೇವೆಸಲ್ಲಿಸಿದರು.

ಇವರ ವೈವಿಧ್ಯಮಯ ಸಮಾಜ ಸುಧಾರಣಾ ಸೇವಾಕಾರ್ಯಗಳನ್ನು ಗಮನಿಸಿ ಮೈಸೂರು ಮಹಾರಾಜರು 1917ರಲ್ಲಿ ಪ್ರತಿಷ್ಠಿತವಾದ ಪುರಸ್ಕಾರವನ್ನು ನೀಡಿದ್ದರು. ಆಂಗ್ಲ ಸರ್ಕಾರವು 1927ರಲ್ಲಿ ಜನವರಿಯಲ್ಲಿ ಕೈಸರ್ಇ ಹಿಂದ್ ಎಂಬ ಗೌರವವನ್ನು ನೀಡಿತು. ಇದು ಇಡೀ ಭಾರತೀಯ ಮಹಿಳಾ ವೃಂದಕ್ಕೆ ಕೀರ್ತಿಕಾರಕವೆಂದು ಆಗಿನ ಕಾಲದ ಮಹಾನ್ಗಣ್ಯವ್ಯಕ್ತಿಗಳಾಗಿದ್ದ ರೈಟ್ಹಾನರೆಬಲ್ವಿ. ಎಸ್ಶ್ರೀನಿವಾಸ ಶಾಸ್ತ್ರಿಗಳು ಮೆಚ್ಚುಗೆ ಸೂಚಿಸಿದ್ದರು. 1927ರಲ್ಲಿ ಮಹಾರಾಜರ ಸರ್ಕಾರವು ಬೆಂಗಳೂರು ಜಿಲ್ಲಾ ಮಂಡಳಿಗಳಿಗೆ ಇವರನ್ನುಸದಸ್ಯರನ್ನಾಗಿ

ನೇಮಿಸಿತು. ಈ ಮಂಡಳಿಯ ಎಲ್ಲ ಕಾರ್ಯ ಕಲಾಪಗಳಲ್ಲಿಯೂ ಇವರು ಪ್ರಮುಖ ಪಾತ್ರವಹಿಸಿದ್ದರು.

ಮಹಿಳೆಯರ ಸ್ಥಿತಿಗತಿಗಳ ಬಗ್ಗೆ ಆಗಿನ ವೈಸ್ರಾಯ್ ಅವರ ಗಮನವನ್ನು ಸೆಳೆಯಲು ಅವರಿಗೆ ಮನವಿ ಒಂದನ್ನು ಸಲ್ಲಿಸಲು ನ್ಯಾಯಾಧೀಶರು ಆಗಿದ್ದ ಪತಿಯ ಜೊತೆಯ ನಿಗಮದೊಂದಿಗೆ ದೆಹಲಿಗೆ 1928ರ ಫೆಬ್ರವರಿ ಐದರಂದು ತೆರಳಿದರು. ಆದರೆ ತಾವು ತಂಗಿದ್ದ ಮನೆಯಲ್ಲೇ ಅಪಘಾತಕ್ಕೆ ಒಳಗಾಗಿ 1928ರ ಫೆಬ್ರುವರಿ 19 ರಂದು ದೆಹಲಿಯಲ್ಲಿಯೇ ದೈವಾಧೀನರಾದರು. ಇವರ ನಿಧನ ಸಮಾಜಕ್ಕೆ ಒಂದು ದೊಡ್ಡ ಆಘಾತವನ್ನೇ ತಂದೊಡ್ಡಿತ್ತು. ದಿವಾನ್ಸರ್. ಎಂ ವಿಶ್ವೇಶ್ವರಯ್ಯ, ಮುಂತಾದ ಗಣ್ಯಾತಿಗಣ್ಯರು ಇವರ ನಿಧನಕ್ಕೆ ಶ್ರದ್ಧಾಂಜಲಿಯನ್ನು ಅರ್ಪಿಸಿದರು.

ಪಾರ್ವತಿ ಅವರು ಬೆಳಗಿನ ವೇಳೆ ತಮ್ಮ ಮಹಿಳಾ ಸೇವಾ ಸಮಾಜದ ಎದುರುಗಿನ ಕೆ ಆರ್ ರಸ್ತೆಯಲ್ಲಿ ಬೆಳಗಿನ ವೇಳೆ ಓಡಾಡುತ್ತಿದ್ದರು. ಅವರ ನಿಧನದ ನಂತರ ಪತಿ ಕೆ ಎ ಸ್ಚಂದ್ರಶೇಖರ್ ಅಯ್ಯರ್‌ರವರು ತಮ್ಮ ಪತ್ನಿಯ ನೆನಪಾಗಿ ಎಲ್ಲರಿಗೂ ಬೆಳಗಿನ ವಾಯು ವಿಹಾರಕ್ಕೆ ಅನುಕೂಲ ವಾಗಲೆಂದು ಶಿವ ಶಂಕರ್ವೃತ್ತದಿಂದ ನ್ಯಾಷನಲ್ ಹೈ ಸ್ಕೂಲ್‌ವರೆಗೂ ರಸ್ತೆಯ ಎರಡು ಬದಿಯಲ್ಲಿ ವಿಶಾಲವಾದ ಉದ್ಯಾನವನವನ್ನು ನಿರ್ಮಿಸಿದರು. ಈ ಕ್ರಮಕ್ಕೆ ಬುಲ್ವಾರ್ಡ್ ಎನ್ನುತ್ತಾರೆ. ನ್ಯಾಷನಲ್ ಹೈ ಸ್ಕೂಲ್ ಬದಿಯಲ್ಲಿ ರಸ್ತೆಯ ಪ್ರಾರಂಭದಲ್ಲೇ ಪಾರ್ವತಿ ಚಂದ್ರಶೇಖರ್ ಬುಲ್ವಾರ್ಡ್ ಎಂಬ ಸಿಮೆಂಟಿನಲ್ಲಿ ಮಾಡಿದ ಫಲಕವನ್ನು ಹಾಕಿಸಿದ್ದರು. ಹಾಗೆಯೇ ವಾಣಿವಿಲಾಸ್ ಆಸ್ಪತ್ರೆಯ ಶುಶ್ರೂಷೆ ವಿಭಾಗದ ನಿರ್ಮಾಣಕ್ಕಾಗಿ ಪತ್ನಿಯ ನೆನಪಿನಲ್ಲಿ ಹಣವನ್ನುನೀಡಿದ್ದರು. ಇಂದಿಗೂ ಆ ಸುಂದರ ಕಟ್ಟಡದ ಮೇಲೆ ಪಾರ್ವತಿ ಚಂದ್ರಶೇಖರ್ವುಮೆನ್ಸ್ವಿಸ್ವಾರ್ಡ್ ಎಂಬ ಬರಹವನ್ನು ಕಾಣಬಹುದು. ಆದರೆ, ನ್ಯಾಷನಲ್ಕಾಲೇಜ್ಮೆಟ್ರೋ ಸ್ಟೇಷನ್ಮಾಡ ಬೇಕಾದರೆ ಅವರ ಹೆಸರಿನ ಕಾಂಕ್ರೀಟ್ಫಲಕವನ್ನು ತೆಗೆದು ಹಾಕಲಾಯಿತು. ಉದ್ಯಾನವನವು ಆಧುನಿಕೀಕರಣಕ್ಕೆ ಬಲಿಯಾಯಿತು. ಈ ಫಲಕವನ್ನು ಮಹಿಳಾ ಸೇವಾಸಮಾಜದಲ್ಲಿ ಇರಿಸಲಾಗಿತ್ತು. ಇತ್ತೀಚಿಗೆ ಆ ಸಂಸ್ಥೆಯವರು ಇದನ್ನು ತಮ್ಮ ಸಂಸ್ಥೆಯ ಗೇಟಿನಬಳಿ ರಸ್ತೆಗೆ ಅಭಿಮುಖವಾಗಿ ಗೋಡೆಯ ಮೇಲೆ ಮೇಲೆ ಅಳವಡಿಸಿ ಪಲಕವನ್ನು ಸಂರಕ್ಷಿಸಿದ್ದಾರೆ.

ಒಟ್ಟಿನಲ್ಲಿ ಪಾರ್ವತಿ ಚಂದ್ರಶೇಖರ್ ಅಯ್ಯರ್‌ವರು ಬೆಂಗಳೂರಿನ ಬೆಳವಣಿಗೆಗೆ ಮತ್ತು ಮಹಿಳೆಯರ ಅಭಿವೃದ್ಧಿಗೆ ನೀಡಿರುವ ಕೊಡುಗೆ ಅಪಾರ.


ಜಾಹಿರಾತು

# ಶ್ರೀ ವಾದಿರಾಜ ವಿಜಯ ಧಾರ್ಮಿಕ ಮಂದಿರ

# 124, 2ನೇ ಮುಖ್ಯರಸ್ತೆ, ಶ್ರೀ ಮಂಜುನಾಥ ದೇವಸ್ಥಾನದ ಎದುರು, ಸೀತಾ ಸರ್ಕಲ್,
ಬ್ಯಾಂಕ್ ಕಾಲೋನಿ, ಬೆಂಗಳೂರು–560 050.

## ಸ್ಥಳದ ಬಾಡಿಗೆ ಇರುವುದಿಲ್ಲ

ಉಪನಯನ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮಹವನ,
ಸತ್ಯನಾರಾಯಣ ಪೂಜೆ, ಇನ್ನಿತರ ದೇವತಾ ಕಾರ್ಯಗಳು,
ವೈಕುಂಠ ಸಮಾರಾಧನೆ ಪ್ರಯುಕ್ತ ಅನ್ನದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು
ಇತರ ಶುಭ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.
ಅಡಿಗೆಯನ್ನು ಮಡಿಯಲ್ಲಿ ಮಾಡಲಾಗುವುದು.

**ವಿವರಗಳಿಗೆ ಕಾರ್ಯಾಲಯವನ್ನು ಸಂಪರ್ಕಿಸಿ :**

**ದೂರವಾಣಿ : 080–26793054 ಮೊಬೈಲ್ 8277433666**

## ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬ್ರಾಹ್ಮಣರ ಪಾತ್ರ-6

## "ಸ್ವರಾಜ್ಯ ತಿಲಕ"

# ಲೋಕಮಾನ್ಯ ಬಾಲಗಂಗಾಧರ ತಿಲಕ್

**ಛಾಯಾಪತಿ ಕೆ.ಎನ್.**



***ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು ಇದನ್ನು ಪಡದೇ ಪಡೆಯುವೆ* ಈ ಘೋಷಣೆ ಇಡೀ ಭಾರತೀಯರನ್ನು ಬಡಿದೆಬ್ಬಿಸಿತು ಸ್ವರಾಜ್ಯಎಂದರೇನು, ಸ್ವಾತಂತ್ರ್ಯ ಎಂದರೇನು ಎಂಬುದು ಮೇಲಿನ ವಾಕ್ಯದಿಂದಲೇ ಪೂರ್ಣಾರ್ಥವಾಯಿತು ಇಡೀ ಭಾರತದಲ್ಲಿ ಎಲ್ಲಾ ಜನಮನದಲ್ಲಿ ಎಲ್ಲರ ಬಾಯಿಗಳಲ್ಲಿ ಪ್ರತಿಧ್ವನಿಸಿ ಸ್ವಾತಂತ್ರ್ಯ ಹೋರಾಟಕ್ಕೆ ಒಂದು ಹೊಸ ದಿಕ್ಕನ್ನೇ ಕೊಟ್ಟಿತು.**

ಮೇಲಿನ ವಾಕ್ಯಕ್ಕೆ ಜನ್ಮ ಕೊಟ್ಟವರೇ ಲೋಕಮಾನ್ಯ ಬಾಲಗಂಗಾಧರ ತಿಲಕರು. ಬ್ರಾಹ್ಮಣರಿಗೆ ಹೋರಾಟಕ್ಕೆ ಖಡ್ಗ ಚೂರಿ ಬಂದೂಕು ಪಿಸ್ತೂಲಿನಂತ ಕ್ರೂರ ಅಸ್ತ್ರಗಳು ಬೇಕಿಲ್ಲ. ಆ ಎಲ್ಲಾ ಕೆಲಸವನ್ನು ಲೇಖನಿಯೇ ಮಾಡುತ್ತದೆ. ಎಂಬುದನ್ನು ಸಾಬೂಹಿತ ಪಡಿಸಿದವರು ಚಿತ್ಪಾವನ ಬ್ರಾಹ್ಮಣ ಪಂಗಡಕ್ಕೆ ಸೇರಿದ ಬಾಲಗಂಗಾಧರ ತಿಲಕರು. ಇವರು ಪ್ರಾರಂಭಿಸಿದ ಕೇಸರಿ ಹೆಸರಿನ ಪತ್ರಿಕೆಯಲ್ಲಿ ಬರುತ್ತಿದ್ದ ಇವರ ಸತ್ಯ ನಿಷ್ಠುರಲೇಖನಗಳು ಎಂಥವರಿಗು ಸ್ಫೂರ್ತಿ ಕೊಟ್ಟು ಸಂಗ್ರಾಮಕ್ಕೆ ಬಡಿದೆಬ್ಬಿಸುತ್ತಿತ್ತು. ಕ್ರಾಂತಿಕಾರಿಗಳು ಕೈಯಲ್ಲಿ ಖಡ್ಗ ಹಿಡಿದು ಹೋರಾಡಿ ಸೆರೆವಾಸ ಅನುಭವಿಸಿದರೆ ಇವರ ಕೈಲಿದ್ದ ಲೇಖನಿಯೇ ಇವರನ್ನು ಜೈಲಿಗೆ ತಳ್ಳುತ್ತಿತ್ತು. ಖಡ್ಗಕ್ಕಿಂತಲೂ ಹರಿತವಾಗಿರುತ್ತಿತ್ತು ಇವರ ಲೇಖನಗಳು. ಸೆರೆಯಲ್ಲಿದ್ದಾಗಲೂ ಬ್ರಾಹ್ಮಣರ ನಿತ್ಯ ಕರ್ಮಗಳಾದ ಸ್ನಾನ, ಸಂಧ್ಯಾವಂದನೆ, ಸೂರ್ಯೋಪಾಸನೆ, ಗಾಯಿತ್ರೀಜಪ, ದೇವರಧ್ಯಾನ ನಂತರ ಓದುಬರಹ. ಇವರು ದೂರದ ಮಾಂಡಲೆಯಲ್ಲಿದ್ದಾಗಲೇ ಪತ್ನಿ ಕಾಲವಾದರು. ಅಂತಿಮದರ್ಷನವೂ ಮಾಡಲಾಗಲಿಲ್ಲ.

ಬಾಲಗಂಗಾಧರ ತಿಲಕರೆಂದರೆ ಕೇವಲ ಸ್ವಾತಂತ್ರ ಹೋರಾಟಗಾರ ಮಾತ್ರವಲ್ಲ.ಧಾರ್ಮಿಕ ಸ್ವಾತಂತ್ರ್ಯ ಮೂಡಿಸಿದ ಧೀಮಂತ ನಾಯಕ, ಪರಮ ದೇಶಭಕ್ತ, ಪ್ರಖರ ಹಿಂದುತ್ವವಾದಿ, ಎಲ್ಲರಲ್ಲೂ ಸ್ವದೇಶಿ ಭಾವನೆ ಮೂಡಿಸಿದ ದಾರ್ಷನಿಕ. ಗಣೇಶನ ಹಬ್ಬ ಸ್ವಾತಂತ್ರ್ಯ ತಂದುಕೊಡುವಲ್ಲಿ ಮಹತ್ವದ ಪಾತ್ರವಹಿಸಿತ್ತು. ಮನೆಯಲ್ಲಿದ್ದ ಗಣೇಶನನ್ನು ಬೀದಿಗೆ ತಂದು ಎಲ್ಲಾ ಜನರು ಜಾತಿ ಮತ ಪಂಥಗಳನ್ನು ಮರೆತು ಪಾಲ್ಗೊಳ್ಳುವಂತೆ ಮಾಡಿದ್ದು ತಿಲಕರ ಸಾಧನೆ. ಆ ಪೆಂಡಾಲುಗಳಲ್ಲಿ ರಾಷ್ಟೀಯತೆಯ ಚರ್ಚೆ ನಡೆಯುವಂತೆ ಮಾಡಿದ್ದೂ ಅವರೆ.ಆ ಮೂಲಕ ತಾಯಿ ಭಾರತಿಯ ಪಾಲಿಗೆ ಸ್ವಾತಂತ್ರ್ಯತಿಲಕವಾದರು. ಇಂದಿಗೂ ನಮ್ಮ ದೇಶದಲ್ಲಿ ಬೀದಿಬೀದಿಯಲ್ಲಿ ಗಣೇಶನನ್ನು ಕೂರಿಸುವ ಪದ್ಧತಿ ಶುರುಮಾಡಿಸಿದ್ದೂ ತಿಲಕರೆ.ಇಲ್ಲಿ ಮಾತ್ರವಲ್ಲ ದೇಶ ವಿದೇಶಗಳಲ್ಲೂ ಗಣೇಶನನ್ನು ಕೂರಿಸುವುದು ತಿಲಕರ ಕೊಡುಗೆಯೇ. ಶಿವಾಜಿ ಜಯಂತಿಯನ್ನು ಸಾರ್ವಜನಿಕವಾಗಿ ಆಚರಿಸುವಂತೆ ಮಾಡಿದವರೂ ತಿಲಕರೆ. ಈ ಕಾರ್ಯಕ್ರಮಗಳಿಗೆ ಸೇರುತ್ತಿದ್ದ ಜನರಿಗೆ ದೈವ ಭಕ್ತಿಯ ಜೊತೆಗೆ ದೇಶಭಕ್ತಿಯನ್ನೂ ಮೂಡಿಸಿ ಸ್ವಾತಂತ್ರ್ಯ ಹೋರಾಟಕ್ಕೆ ಸಜ್ಜುಗೊಳಿಸುತ್ತಿದ್ದ ಏಕೈಕ ಜನ ನಾಯಕ. ಬ್ರಿಟಿಷರು ತಿಲಕರನ್ನು **"ಭಾರತೀಯರ ಅಶಾಂತಿಯ ಪುರುಷ"** ಎಂದು ಕರೆದರೆ ಭಾರತೀಯರು ಅವರನ್ನು **"ಲೋಕಮಾನ್ಯ"** ಎಂದು ಕರೆದರು.

ಸಮಷ್ಠಿಯ ಹಿತವೇ ನನ್ನ ಹಿತವೆಂದು ತನ್ನ ಜೀವಮಾನವನ್ನೇ ಸಮಾಜಕ್ಕೋಸ್ಕರ ಮುಡಿಪಾಗಿಟ್ಟ ಶ್ರೇಷ್ಠ ವ್ಯಕ್ತಿಯ ಜೀವನಚಕ್ರವನ್ನು ತಿಳಿಯುವುದು ನಮ್ಮೆಲ್ಲರ ಕರ್ತವ್ಯ 1856 ಜುಲೈ 23ರಂದು ಜನಿಸಿ 1920 ಆಗಸ್ಟ್ ಒಂದರಂದು ಕಾಲವಾದ ತಿಲಕರು 64 ವರ್ಷ ಜೀವಿತಾವಧಿಯಲ್ಲಿ ಅನೇಕ ಏಳುಬೀಳುಗಳು, ಕಷ್ಟಕಾರ್ಪಣ್ಯಗಳು, ಜೈಲುವಾಸ ಹೀಗೆ ನಾನಾ ರೀತಿಯ ಸವಾಲುಗಳನ್ನು ಎದುರಿಸುತ್ತಾರೆ. ತಿಲಕರ ಪೂರ್ವಜರು ಚಿತ್ಪಾವನ ವಂಶದ ಮಧ್ಯಮವರ್ಗದ ಬ್ರಾಹ್ಮಣರು.ಪಾಳುಬಿದ್ದ ಜಮೀನಿನಲ್ಲಿ ಕೃಷಿ ಕಾರ್ಮಿಕರಿಂದ ಸಾಗುವಳಿ ಮಾಡಿಸಿ ಬ್ರಿಟಿಷರಿಗೆ ಕಂದಾಯ ಕಟ್ಟುವ ಕಾಯಕ ಇವರದಾಗಿತ್ತು. ಸರಳ ಬದುಕು ಉನ್ನತ ಚಿಂತನೆ ಮಿತವ್ಯಗಳು ತಿಲಕರ ತಂದೆ ಗಂಗಾಧರಶಾಸ್ತ್ರಿಗಳದ್ದಾಗಿತ್ತು. ಅವರ ತಾಯಿ ಪಾರ್ವತಿಭಾಯಿ 18 ತಿಂಗಳು ಸತತವಾಗಿ ಸೂರ್ಯೋಪಾಸನೆಯ ಉಗ್ರವ್ರತ ಆಚರಿಸಿ ಗಂಡು ಮಗುವಿಗೆ ಜನ್ಮವಿತ್ತರು. ಅವರೇ ಲೋಕಮಾನ್ಯ ಬಾಲಗಂಗಾಧರ ತಿಲಕರು. ತಂದೆ ದೊಡ್ಡ ಸಂಸ್ಕೃತ ವಿದ್ವಾಂಸರು.ಮತ್ತು ಶಾಲಾ ಶಿಕ್ಷಕರೂ ಆಗಿದ್ದರು. ಪ್ರಾರಂಭದಲ್ಲಿ ತಿಲಕರಿಗೆ ಕೇಶವ ಗಂಗಾಧರ ಎಂಬ ಹೆಸರಿದ್ದು,ನಂತರದ ದಿನಗಳಲ್ಲಿ ಬಾಲ ಗಂಗಾಧರನಾದ. ಬೆಳೆವ ಸಿರಿ ಮೊಳಕೆಯಲ್ಲಿ ಎಂಬಂತೆ ತಿಲಕರು ಬಾಲ್ಯದಲ್ಲೇ ಪ್ರತಿಭಾವಂತರಾಗಿದ್ದರು. ಅವರ ತಾತ ಕಾಗಕ್ಕ ಗುಬ್ಬಕ್ಕನ ಕಥೆ ಹೇಳದೆ 1857ರಲ್ಲಿ ನಡೆದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಹೀರೋಗಳಾಗಿದ್ದ ಮಂಗಳ ಪಾಂಡೆ, ನಾನಾಸಾಹೇಬ, ತಾತ್ಯಾ ಟೋಪಿ, ಜಾನ್ಸಿ ರಾಣಿ ಲಕ್ಷ್ಮೀಬಾಯಿ ಅವರ ನಿಜ ಘಟನೆಗಳನ್ನು ಹೇಳುತ್ತಿದ್ದರು.ತ್ಯಾಗ ಸಾಹಸದ ಪುಷ್ಪಮಾಲೆಯನ್ನು ತಾಯಿ ಭಾರತಿಗೆ ಅರ್ಪಣೆ ಮಾಡಿದವರ ಜೀವನವನ್ನೇ ಇವರು ಜೀವನದ ಗುರಿಯನ್ನಾಗಿ ನಿಶ್ಚಯಿಸಿದರು. ಇವರಿಗೆ ಸ್ಫೂರ್ತಿದಾತನೇ ಕ್ರಾಂತಿಕಾರಿ ವಾಸುದೇವ ಬಲವಂತ ಪಡಿಕೆ. ತಿಲಕರು ಬಾಲ್ಯದಿಂದಲೇ ಲೆಖ್ಖದಲ್ಲಿ ಬಹು ಪರಿಣಿತರು ಒಮ್ಮೆ ಶಿಕ್ಷಕರು ವಿದ್ಯಾರ್ಥಿಗಳಿಗೆ ಪ್ರಶ್ನೆ ಕೇಳುತ್ತಾರೆ. ಐದು ಕುರಿಗಳು ಒಂದು ಹುಲ್ಲುಗಾವಲನ್ನು 28 ದಿನಗಳಲ್ಲಿ ಮೇಯಬಲ್ಲವು ಅದೇ ಹುಲ್ಲುಗಾವಲನ್ನು 20 ದಿನದಲ್ಲಿ ಮೇಯಲು ಎಷ್ಟು ಕುರಿಗಳು ಬೇಕು ಎಂದು ಹೇಳಿ ಮುಗಿಸುವಷ್ಟರಲ್ಲಿ ಏಳು ಕುರಿಗಳು ಎಂದು ಒಬ್ಬ ಕೂಗಿ ಹೇಳಿದ. ಯಾರೆಂದು ಕೇಳಿದಾಗ ಬಾಲ ಎಂದು ಬೇರೆ ಹುಡುಗರಿಂದ ಉತ್ತರ ಬಂತು. ಹತ್ತಿರ ಬಂದ ಶಿಕ್ಷಕರು ಟಿಪ್ಪಣಿ ಪುಸ್ತಕ ನೋಡಿದರೆ

ಅದರಲ್ಲಿ ಲೆಕ್ಕ ಮಾಡಿದ ಕುರುಹೆ ಇರಲಿಲ್ಲ. ಎಲ್ಲಿ ಲೆಕ್ಕ ಮಾಡಿದೆ ತೋರಿಸು ಎಂದು ಕೇಳಿದರು. ಬಾಲಕ ತನ್ನ ಬೆರಳಿಂದ ತನ್ನ ತಲೆಯನ್ನು ತೋರಿಸಿದ. ಗುರುಗಳಿಗೆ ವಿಸ್ಮಯ ಸಂತೋಷ ಕೋಪ ಎಲ್ಲವೂ ಒಟ್ಟಿಗೆ ಬಂದು ಬೆನ್ನು ತಟ್ಟಿದರು. ಹೀಗೆ ಬಾಲ್ಯದ ಘಟನೆಗಳನ್ನು ಬರೆಯುತ್ತಾ ಹೋದರೆ ಒಂದು ಪುಟವೇ ಬೇಕಾಗುತ್ತದೆ. ಬಾಲನಿಗೆ ಗಣಿತವೆಂದರೆ ಸುಲಿದ ಬಾಳೆಯ ಹಣ್ಣಿನಂತೆ.ಹೀಗೆ ಪ್ರಾಥಮಿಕ ಶಾಲೆಯನ್ನು ರತ್ನಗಿರಿಯಲ್ಲಿ ಮುಗಿಸಿದರು ಬಾಲ್ಯಾವಸ್ತೆಯಲ್ಲಿರುವಾಗಲೇ ತಿಲಕರಿಗೆ ಕಷ್ಟಕಾರ್ಪಣ್ಯಗಳು ಒಂದಾದ ಮೇಲೊಂದ ರಂತೆ ಬರತೊಡಗಿದವು. ತಿಲಕರತಾಯಿ ಶಾರೀರಿಕವಾಗಿ ದುರ್ಬಲ ಮಹಿಳೆ. ಆಕೆಯು18 ತಿಂಗಳು ಸೂರ್ಯೋ ಪಾಸನೆಯ ಉಗ್ರವ್ರತ ಫಲದಿಂದಲೇ ತಿಲಕರನ್ನು ಪಡೆದದ್ದು. ವ್ರತ ನೇಮ ನಿಷ್ಠೆಗಳಿಂದ ತಾಯಿ ಮನಸ್ಸು ಪಕ್ವವಾಗಿತ್ತು. ಆದರೆ ಶರೀರ ಕೃಷವಾಗುತ್ತಾ ಹೋಯಿತು. ಕಾಯಿಲೆ ಬಂದು ತಿಲಕರು ಬಾಲಕನಿದ್ದಾಗಲೇ ಅವರು ಕಾಲವಾದರು. ಆಗ ತಿಲಕರ ತಂದೆ ತನ್ನ ತಮ್ಮನಾದ ಗೋವಿಂದರಾಯ ತಿಲಕರ ಮನೆಯಲ್ಲಿ ಮಗ ಬಾಲಗಂಗಾಧರರನ್ನು ಬಿಟ್ಟು ಅವರನ್ನೇ ಪೋಷಕರನ್ನಾಗಿ ಮಾಡಿ ಓದಿಸುತ್ತಾರೆ. 16ನೇ ವರ್ಷದಬಾಲ ಗಂಗಾಧರನಿಗೆ ತಾಪಿಬಾಯಿ ಎಂಬ ಹೆಣ್ಣಿನ ಜೊತೆ ಮದುವೆಯಾಗುತ್ತದೆ.

ಅದೇ ವರ್ಷ ತಂದೆಯವರು ಕಾಲವಾಗುತ್ತಾರೆ. ವಿವಾಹ ಬಂಧನ,ಸಾಮಾಜಿಕ ಕೆಲಸ, ವಿದ್ಯಾದಾಹ, ಇವೆಲ್ಲದರ ನಡುವೆಯೂ ವಿದ್ಯಾಭ್ಯಾಸ ಮುಂದುವರಿಸುತ್ತಾರೆ. 1873 ರಲ್ಲಿ ಪುಣೆಯ ಡೆಕ್ಕನ್ ಕಾಲೇಜು ಸೇರುತ್ತಾರೆ. 1876 ರಲ್ಲಿ ಗಣಿತದಲ್ಲಿ ಪದವೀಧರಾಗುತ್ತಾರೆ. ಆದರೆ ಮುಂದೆ ಆರಿಸಿಕೊಂಡಿದ್ದು ಕಾನೂನು ವಿಷಯ. ಎಲ್ ಎಲ್ ಬಿ ಕಾನೂನು ಪದವೀಧರಾದರು. ಲಾಯರ್ಗಿರಿ ಮಾಡಲಿಲ್ಲ ಸಮಾಜವೆಂಬ ನ್ಯಾಯಾಲಯದಲ್ಲಿ ನ್ಯಾಯವಾದಿಯಾದರು. ಆಂಗ್ಲರ ಪ್ರಭಾವದಿಂದ ಅವರ ಹಿಡಿತದಿಂದ ವಿದ್ಯಾವಾಹಿನಿ ಎತ್ತಲೋ ಸಾಗುತ್ತಿತ್ತು. ಭಾರತೀಯ ಯುವಕರಿಗೆ ಶಿಕ್ಷಣ ಗುಣಮಟ್ಟ ಸುಧಾರಿಸಿ ನಮ್ಮ ಸಂಸ್ಕೃತಿ ಧರ್ಮ ಆಚಾರ ವಿಚಾರಗಳನ್ನು ಕಲಿಸಿಕೊಡಲು ನಿಶ್ಚಯಿಸಿದರು. ಸಮಾನ ಮನಸ್ಕರಾದ ಶ್ರೀಯುತ ಆಗರ್ಕರ್, ಮಹದೇವ ಬಲ್ಲಾಳನಾಮಜೋಷಿ ಮತ್ತು ವಿಷ್ಣುಶಾಸ್ತ್ರಿ ಚಿಪಳೂಣಕರ್ ಇವರೊಂದಿಗೆ ಮಾಧ್ಯಮ ಶಿಕ್ಷಣ ನೀಡಲು ನ್ಯೂ ಇಂಗ್ಲಿಷ್ ಶಾಲೆ ಸ್ಥಾಪಿಸಿದರು. ಈ ಶಾಲೆ ಬಹಳಬೇಗ ಯಶಸ್ವಿಯಾಯಿತು 1884 ರಲ್ಲಿ ಡೆಕ್ಕನ್ ಎಜುಕೇಶನ್ ಸೊಸೈಟಿ ಪ್ರಾರಂಭಿಸಿದರು. ನಂತರ 1885ರಲ್ಲಿ ಸ್ನಾತಕೋತ್ತರ ಪದವಿಗಾಗಿ ಪರ್ಗುಸನ್ ಕಾಲೇಜನ್ನು ಸ್ಥಾಪಿಸಿದರು. ಹೀಗೆ ಸಾಮಾಜಿಕ ಸೇವೆ ಪ್ರಾರಂಭವಾಯಿತು. ಎರಡು ಪದವಿಯನ್ನು ಗಳಿಸಿದ್ದ ತಿಲಕರು ಆಂಗ್ಲರ ಅಧೀನದಲ್ಲಿ ಯಾವುದಾದರೂ ಒಂದು ದೊಡ್ಡ ಹುದ್ದೆ, ಕೈತುಂಬ ಸಂಬಳ, ಅನೇಕ ಅನುಕೂಲತೆಗಳನ್ನು ಪಡೆಯಬಹುದಿತ್ತು. ಆದರೆ ಚಿಕ್ಕವಯಸ್ಸಿನಲ್ಲೇ ನಿರ್ಧರಿಸಿದಂತೆ ದೇಶಸೇವಾವ್ರತವನ್ನು ಆರಿಸಿಕೊಂಡರು. ಆಂಗ್ಲರು ಭಾರತೀಯರ ಮೇಲೆ ಮಾಡುತ್ತಿದ್ದ ದಬ್ಬಾಳಿಕೆ, ಹಿಂಸಾಚಾರ, ಅನ್ಯಾಯಗಳನ್ನ ಬಹಿರಂಗಪಡಿಸಬೇಕು.ಇದೆಲ್ಲದರ ವಿರುದ್ಧ ಭಾರತೀಯರನ್ನು ಬಡಿದೆಬ್ಬಿಸಬೇಕು. ಸ್ವಾತಂತ್ರ್ಯ, ಸ್ವರಾಜ್ಯ, ಸ್ವದೇಶಿ ಭಾವನೆಗಳನ್ನು ಜನ ಮನದಲ್ಲಿ ಬೇರೂರುವಂತೆ ಮಾಡಬೇಕು.ಹೀಗೆ ಬ್ರಿಟಿಷ್ ಆಳ್ವಿಕೆ ವಿರುದ್ಧ ಹೋರಾಡಲು ಎಲ್ಲಾ ಭಾರತೀಯರಿಗೆ ಸುದ್ದಿ ಮುಟ್ಟಿಸಲು ಒಂದು ಪತ್ರಿಕಾ ಮಾಧ್ಯಮ ಬೇಕಿತ್ತು.ಹಾಗಾಗಿ ಕೇಸರಿ ಎಂಬ ಮರಾಠಿ ಪತ್ರಿಕೆ ಮತ್ತು ಮರಾಠ ಎಂಬ ಇಂಗ್ಲೀಷ್ ಪತ್ರಿಕೆ ಪ್ರಾರಂಭಿಸಿದರು. ಕೇಸರಿ ಪತ್ರಿಕೆ ಬಹುಬೇಗನೆ ಪ್ರಭುದ್ಧಮಾನಕ್ಕೆ ಬಂದು 35 ಸಹಸ್ರ ಜನರು ಚಂದಾದಾರರಾದರು. ಪತ್ರಿಕೆಯಲ್ಲಿ ಜನಸಾಮಾನ್ಯರಿಗೆ ತಿಳುವಳಿಕೆ ವಿಷಯಗಳಿರುತ್ತಿದ್ದತಿದ್ದವು. ಅದಲ್ಲದೆ ದೇಶೀಯಸಂಸ್ಥಾನದ ರಾಜರುಗಳು, ದಿವಾನರುಗಳಿಗೂ ಆಗ್ರಹ ಪೂರಕ ಸೂಚನೆಗಳು ಇರುತ್ತಿದ್ದವು. ಅದೆಂದರೆ ಪಾಶ್ಚಿಮಾತ್ಯ ಸಂಸ್ಕೃತಿಯ ಪರಂಪರೆಗಳನ್ನ ಜನಸಾಮಾನ್ಯರ ಮೇಲೆ ಹೇರಿ ಪಾಶ್ಚಾತ್ಯ ಆಡಳಿತ ಪದ್ಧತಿಯನ್ನು ನಕಲು ಮಾಡದಂತೆ ಅವರಲ್ಲಿ ವಿನಂತಿಸಿಕೊಳ್ಳುತ್ತಿದ್ದರು. ಅವರವರ ಅರಸು ಮನೆತನದ ಹಿರಿಮೆ ಗರಿಮೆಗಳನ್ನು ನೆನಪಿಸಿ ಸ್ವಾಭಿಮಾನ ಸ್ವಾವಲಂಬನೆಗಳನ್ನು ಅವರಲ್ಲಿ ತುಂಬುತ್ತಿದ್ದರು. ಭಾರತದ ಅರಸರು ತಮ್ಮದೇ ನಾಣ್ಯ, ಶಸ್ತಾಸ್ತ್ರ ಸಂಗ್ರಹ ಹಾಗೂ ನ್ಯಾಯ ತೀರ್ಮಾನ ಪದ್ಧತಿ ಅನುಸರಿಸುವಂತೆ ಆಗ್ರಹಿಸುತ್ತಿದ್ದರು. ಹೀಗೆ ಎಲ್ಲರಿಗೂ ಹಿಂದಿನ ಹಿರಿಮೆ ಗರಿಮೆ ನೆನಪು ಮಾಡಿ ಬ್ರಿಟಿಷರ ವಿರುದ್ಧ ಎದ್ದು ನಿಲ್ಲುವಂತೆ ಸಿದ್ಧ ಮಾಡುವ ಕೆಲಸವನ್ನು ಅವರ ಪತ್ರಿಕೆಗಳು ಮಾಡುತ್ತಿದ್ದವು. ಕೇವಲ ಜಾಹೀರಾತು, ಹಣಕಾಸು ಸಂಪಾದನೆ, ಓಲೈಕೆ ಗೋಸ್ಕರ ಇವರ ಪತ್ರಿಕೆ ಇರಲಿಲ್ಲ. ರಾಷ್ಟ್ರೀಯ ವಿಚಾರಧಾರೆಯೇ ಇವರ ಪತ್ರಿಕೆಯ ಹೂರಣವಾಗಿತ್ತು. ಹೀಗೆ ಪತ್ರಿಕಾರಂಗದ ಘನಉದ್ದೀಶ್ಯವನ್ನು ಸಾರಿದರು. ಇಂದೂಸಹ ಪತ್ರಿಕಾರಂಗ ಇದನ್ನು ಅನುಸರಿಸಿದ್ದರೆ ಬದಲಾಗುತ್ತಿರುವ ದೇಶದ ಚಿತ್ರಣಕ್ಕೆ ಪುಷ್ಠಿ ಸಿಗುತ್ತಿತ್ತು.

ತಿಲಕರ ವಿಶೇಷವೆಂದರೆ ಕ್ರಾಂತಿಕಾರಿಗಳ ರೀತಿ ಕೈಯಲ್ಲಿ ಶಸ್ತಾಸ್ತ್ರಗಳನ್ನು ಹಿಡಿಯುವುದಾಗಲಿ, ಬಾಂಬುಗಳನ್ನು ಎಸೆಯುವುದಾಗಲಿ ಮತ್ತು ಬ್ರಿಟಿಷ್ ಅಧಿಕಾರಿಗಳನ್ನು ಕೊಲ್ಲುವುದಾಗಲಿ ಮಾಡಲಿಲ್ಲ. ಅಂದಮಾತ್ರಕ್ಕೆ ಆ ಬಗೆಯ ಹೋರಾಟವನ್ನು ವಿರೋಧಿಸಲಿಲ್ಲ. ಆದರೂ ಇವರಿಗೆ ಸೆರೆವಾಸಗಳು ತಪ್ಪಲಿಲ್ಲ. ಕೊಲ್ಲಾಪುರ ಸಂಸ್ಥಾನದ ಮಹಾರಾಜ ರಾಜಾರಾಮ್ ಸಂತಾನವಿಲ್ಲದೆ ತೀರಿಕೊಂಡಮೇಲೆ ದತ್ತು ಪುತ್ರ ಶಿವಾಜಿ ರಾವ್ ದೊರೆಯಾದ.ಆತನ ಮೇಲೆ ಬ್ರಿಟಿಷರಿಂದ ಅತ್ಯಾಚಾರ ಹಿಂಸೆ ನಡೆಯಿತು ಅದನ್ನು ಖಂಡಿಸಿ ಉಗ್ರವಾದ ಲೇಖನವನ್ನು ಕೇಸರಿ ಪತ್ರಿಕೆಯಲ್ಲಿ ಪ್ರಕಟಿಸಿದರು ಇದು ಜನರಿಗೆ ತಿಳಿಯುತ್ತಿದ್ದಂತೆ ಪುಣೆ ಮತ್ತು ಕೊಲ್ಲಾಪುರದಲ್ಲಿ ಅಶಾಂತಿ ತಾಂಡವಾಡಿತು.ಆಗ ಕೇಸರಿ ಪತ್ರಿಕೆಯ ಮೇಲೆ ಬ್ರಿಟಿಷ ಸರ್ಕಾರ ಮುಖದ್ದಮೆ ಹೂಡಿತು. ಸತ್ಯ ಸಂಗತಿ ಪ್ರಕಟಿಸಿದ ತಪ್ಪಿಗೆ ಸಂಪಾಧಕರಾಗಿದ್ದ ಅಗರ್ಕರ್ ಮತ್ತು ತಿಲಕರನ್ನು ಜೈಲಿಗೆಟ್ಟಿದರು.

1996ರಲ್ಲಿಭಯಾನಕ ಕ್ಷಾಮ ತಲೆದೋರಿತು. ಅದರ ಬೇಗೆಯಲ್ಲೇ ಜನ ಸಂಕಷ್ಟದಲ್ಲಿರುವಾಗ ಪ್ಲೇಗ್ ಕಾಯಿಲೆ ಅಮರಿಕೊಂಡಿತು. ಸರ್ಕಾರ ಇದನ್ನು ಅಸಡ್ಡೆಯಿಂದ ಕಂಡಿತು. ಮತ್ತು ಜನರಿಗೆ ಕಿರುಕುಳವನ್ನು ಕೊಡಲು ಪ್ರಾರಂಭಿಸಿತು.ಆದಕಾರಣ ಚಾಪೇಕರ್ ಸಹೋದರರಿಂದ ದಬ್ಬಾಳಿಕೆ ನಡೆಸುತ್ತಿದ್ದ ಪ್ಲೇಗ್ ಅಧಿಕಾರಿಯಾದ ರ್ಯಾಂಡ್ ನ ಕೊಲೆಯಾಯಿತು. ಇದೆಲ್ಲವನ್ನು ಕೇಸರಿ ಪತ್ರಿಕೆ ಖಂಡಿಸಿ ಲೇಖನವನ್ನು ಬರೆಯಿತು. ಇದನ್ನೇ ನೆಪ ಮಾಡಿಕೊಂಡ ಅಂದಿನ ಸರ್ಕಾರ ತಿಲಕರನ್ನು ಬಂಧಿಸಿ ವಿಚಾರಣೆ ಮಾಡಿ ಜೈಲಿಗಟ್ಟಿತು.

**"ನಿಂದಂತು ನೀತಿ ನಿಪುಣಾಃ ಯದೀವ ಸ್ತುವಂತು ಲಕ್ಷ್ಮಿ: ಸಮಾವಿಶತು ಗಚ್ಚತು ವಾ ಯಥೇಚ್ಛಂ ಅಧ್ಯೈವಾ ಮರಣಮಸ್ತು ಯುಗಾಂತರೇವಾ ನ್ಯಾಯಾತ್ ಪಥಃ ವಿಚಲಂತಿ ಪದಂ ನ ಧೀರಾಃ"** ಎಂಬ ಸಂಸ್ಕೃತ ಸುಭಾಷಿತವು ತಿಲಕರ ಧೀರನಡೆತೆಗೆ ಸರಿಹೊಂದುತ್ತದೆ.ಸಂಪತ್ತು ಬರಲಿ ಹೋಗಲಿ ,ಜನರು ಹೊಗಳಲ್ಲಿ ತೆಗಳಲಿ, ಮರಣವೂ ಇಂದೇ

ಇರಲಿ ಅಥವಾ ಯುಗ ಯುಗಾಂತರ ಕಳೆದು ಬರಲಿ, ಎಷ್ಟೇ ಪ್ರತಿಕೂಲ ಪರಿಸ್ಥಿತಿ ಎದುರಾದರೂ ಸಹ ನ್ಯಾಯಮಾರ್ಗವನ್ನು ಬಿಡದವನೇ ಧೀರ ಎನ್ನುತ್ತದೆ ಈ ಸುಭಾಷಿತ. ತಿಲಕರು ಇದನ್ನು ಮೈಗೂಡಿಸಿಕೊಂಡ್ಡಿದ್ದರು.

ತಿಲಕರು ಕಾರಣಾಂತರಗಳಿಂದ ಶಿಕ್ಷಣ ಕ್ಷೇತ್ರವನ್ನು ಅನಿವಾರ್ಯವಾಗಿ ಬಿಡಬೇಕಾಯಿತು. 1890 ರಿಂದ 1897ರ ವರೆಗೆ ತಿಲಕರ ಜೀವನದಲ್ಲಿ ಮಹತ್ತರ ದಿನಗಳು. ಶಿಕ್ಷಕರಾಗಿದ್ದ ಅವರು ರಾಜಕಾರಣಿ ಯಾದದ್ದು, ಸಂಸ್ಥೆಯೊಂದರ ಮೇಲ್ವಿಚಾರಕರಾಗಿದ್ದು, ಅವರು ರಾಷ್ಟ್ರೀಯ ನಾಯಕರಾಗಿ ಬದಲಾಗಿದ್ದು, ಸಮಾಜ ಸುಧಾರಣೆ ವಿಷಯವಾಗಿ ಸಮರವನ್ನೇ ಸಾರಿದ್ದು, ಬಾಲ್ಯ ವಿವಾಹ ಪದ್ಧತಿಯನ್ನು ವಿರೋಧಿಸಿದ್ದು, ಗಣಪತಿ ಶಿವಾಜಿ ಉತ್ಸವ ಸಾರ್ವಜನಿಕಗೊಳಿಸಿದ್ದು, ಪುಣೆಯ ಪುರಸಭಾ ಸದಸ್ಯರಾಗಿದ್ದು, ಮುಂಬೈ ಶಾಸನಸಭಾ ಸದಸ್ಯರಾಗಿದ್ದು, ಮುಂಬೈ ವಿಶ್ವವಿದ್ಯಾನಿಲಯದ ಚುನಾಯಿತ ಫೆಲೋ ಆಗಿದ್ದು, ಕಾಂಗ್ರೆಸ್ ಅಧಿವೇಶನದಲ್ಲಿ ಮುಖ್ಯ ಪಾತ್ರ ವಹಿಸಿದ್ದು, ಓರಿಯನ್ ಎಂಬ ಪುಸ್ತಕ ಬರೆದದ್ದು ಇವೆಲ್ಲವನ್ನೂ ಕೇವಲ ಏಳು ವರ್ಷಗಳಲ್ಲಿ ಸಾಧಿಸಿದ್ದರು ತಿಲಕರು.

ದೇಶದ ದೌರ್ಭಾಗ್ಯವೋ ಏನೋ ಬ್ರಿಟಿಷರು ಬಂಗಾಳವನ್ನು ಒಡೆದರು ಇದನ್ನು ವಿರೋಧಿಸಿ ಬಹಿಷ್ಕಾರ ಚಳುವಳಿ ಭುಗಿಲೆದ್ದಿತು.ಕುದಿರಾಮ್ ಬೋಸ್ ಎಂಬ ವ್ಯಕ್ತಿಯು ಅಲ್ಲಿಯ ಜಿಲ್ಲಾಧಿಕಾರಿಯ ಮೇಲೆ ಬಾಂಬ್ ಎಸೆದನು. ಆದರೆ ಅವನು ಸಿಗಲಿಲ್ಲ. ಆಗ ಇನ್ನಾರೋ ಸಿಕ್ಕರು ನಿರಪರಾಧಿಯಾದ ಅವರಮೇಲೆ ಮೊಕದ್ದಮೆ ಹೂಡಿ ಹತ್ತು ವರ್ಷ ಜೈಲು ಶಿಕ್ಷೆ ವಿಧಿಸಿ ಅಂಡಮಾನ್ಗೆ ಕಳುಹಿಸಿದರು. ಇದೆಲ್ಲವನ್ನು ಕೇಸರಿ ಪತ್ರಿಕೆಯಲ್ಲಿ ವರದಿ ಮಾಡುತ್ತಾ ಇದು ದೇಶದ ದುರ್ಭಾಗ್ಯ ,ಬಾಂಬ್ ತಯಾರಿಕೆ ತಪ್ಪು ಆದರೆ ಬಾಂಬ್ ಎಸೆಯುವಂತ ಪರಿಸ್ಥಿತಿಯನ್ನು ಸರ್ಕಾರ ನಿರ್ಮಾಣ ಮಾಡಿತು. ಸರ್ಕಾರದ ಅನ್ಯಾಯ ಆಡಳಿತವೇ ಇದಕ್ಕೆ ಕಾರಣ ಎಂದು ತಿಲಕರು ಬರೆದರು. ಇದರಿಂದ ರೊಚ್ಚಿಗೆದ್ದ ಬ್ರಿಟಿಷರು 1908 ಜೂನ್ 24ರಂದು ತಿಲಕರನ್ನು ಮುಂಬೈನಲ್ಲಿ ಬಂಧಿಸಿ ವಿಚಾರಣೆಗೆ ಒಳಪಡಿಸಿ ಆರು ವರ್ಷಗಳ ಕರಿನೀರಿನ ಶಿಕ್ಷೆ ವಿಧಿಸಿದರು ಈ ವೇಳೆಗಾಗಲೇ 52 ವರ್ಷದ ತಿಲಕರು ಹೋರಾಟ ಮಾಡಿ ಮಾಡಿ ಶರೀರ ದಣಿದು ಬಲಹೀನವಾಗಿತ್ತು. ಹೇಗೆ ತಾನೆ ಆರು ವರ್ಷ ಜೈಲಲ್ಲಿ ಕಳೆದಾರು. ಕಿರಿದಾದ, ಗಾಳಿಯೂ ಆಡದ, ತಿಗಣೆ ಸೊಳ್ಳೆಗಳಿಂದ ತುಂಬಿದ್ದ, ಓಡಾಡಲೂ ಆಗದಷ್ಟು ಚಿಕ್ಕ ಕೋಣೆಯಲ್ಲಿ ಬಂಧಿಸಿಟ್ಟಿದ್ದರು.ಸರಿಯಾದ ಆಹಾರವಿಲ್ಲ, ಆರೈಕೆ ಇಲ್ಲ ಸೋತು ಸೊರಗಿದರು ತಿಲಕರು. ಷರತ್ತಿನ ಮೇಲೆ ಸರ್ಕಾರ ಬಿಡಲು ಸಿದ್ಧವಿತ್ತು ಆದರೆ ದಾಸ್ಯದ ಶರತ್ತುಗಳಿಗಿಂತ ಸೆರೆಮನೆಯೇ ವಾಸಿ ಎಂದು ಅಲ್ಲೇ ಉಳಿದರು.

**ಭಾರತದ ಕೇಸರಿ ಕಣ್ಮರೆಯಾಗುವ ದಿವಸಗಳು :** 1914 ಜೂನ್ 8ರಂದು ತಿಲಕರ ಬಿಡುಗಡೆಯಾಯಿತು.16 ರಂದು ಕೊನೆಗೆ ಪೂನಾಕ್ಕೆ ಕರೆತಂದು ಬಿಡಲಾಯಿತು. ದೇಹ ಕೃಶವಾಗಿತ್ತು ದೊಡ್ಡ ದೊಡ್ಡ ಸಭೆ ಸಮಾರಂಭಗಳಲ್ಲಿ ಸನ್ಮಾನಿತರಾದರು. ಆರು ವರ್ಷ ಸೆರೆವಾಸದಲ್ಲಿದ್ದರೂ ನಾನು ನಿಮ್ಮನ್ನು ಮರೆತಿಲ್ಲ. ಸ್ವರಾಜ್ಯ ಕಲ್ಪನೆ ಕಡಿಮೆಯಾಗಿಲ್ಲ. ಹಿಂದಿನ ನನ್ನ ನಿರ್ಧಾರಗಳಲ್ಲಿ ಯಾವ ಬದಲಾವಣೆಯೂ ಇಲ್ಲ ಅವು ಹಾಗೆಯೇ ಮುಂದುವರೆಯುತ್ತವೆ. ಆಸಮಯದಲ್ಲಾಗಲೇ ಕಾಂಗ್ರೆಸ್ ಒಡೆದು ಎರಡಾಗಿತ್ತು. ಸೇರಿಸಲು ಪ್ರಯತ್ನ ಪಟ್ಟರು ಆಗಲಿಲ್ಲ.ಆಗ ಬೇರೊಂದು ಸಂಸ್ಥೆ ಕಟ್ಟಿದರು. ಅದೇ **"ಹೋಂ ರೂಲ್ ಲೀಗ್"** ಅಂದರೆ ನಮ್ಮ ಮನೆಯನ್ನು ನಾವೇ ಆಳುವುದು. ನಮ್ಮನೆಗೆ ಪಕ್ಕದ ಮನೆಯವ ಯಜಮಾನಾಗುವುದು ಬೇಡ. ಬ್ರಿಟಿಷರು ಇಂಗ್ಲೆಂಡಿನಲ್ಲಿ ಸ್ವತಂತ್ರವಾಗಿರುವಂತೆ ಭಾರತೀಯರು ಭಾರತದಲ್ಲಿ ಸ್ವತಂತ್ರವಾಗಿರಬೇಕು. ಇದು ಹೋಂ ರೂಲ್ ಸಂಘಟನೆಯ ಮುಖ್ಯತತ್ವ ಹೀಗೆ ಸಮಾಜ ಜಾಗೃತಿ ಕಾರ್ಯದಲ್ಲಿ ಮತ್ತೆ ಪೂರ್ಣ ತೊಡಗಿಸಿ ಕೊಂಡರು. ಮತ್ತೆ ಪ್ರಕರಣವೊಂದರಲ್ಲಿ ವಿನಾಕಾರಣ ಆರೋಪಿಯಾದರು.ವಾದ ಮಾಡಲು ಇಂಗ್ಲೆಂಡಿಗೆ ಹೋಗಬೇಕಾಯಿತು. ಇಂಗ್ಲೆಂಡಿನಲ್ಲಿದ್ದ ಆ ಸಮಯದಲ್ಲಿ ಭಾರತದಲ್ಲಿ ಜಲಿಯನ್ ವಾಲಾಬಾಗ್ ಹತ್ಯಾಕಾಂಡ ನಡೆಯಿತು, ಮತ್ತೆ ಭಾರತಕ್ಕೆ ತಿಲಕರು ದೌಡಾಯಿಸಿದರು. ಎಂತಹ ವಿಪತ್ತು ಬಂದರೂ ಬೇಡಿಕೆ ಈಡೇರುವವರೆಗೆ ಚಳುವಳಿ ನಿಲ್ಲಸಬಾರದೆಂದು ಕರೆಕೊಟ್ಟರು. ಸೋತ ಶರೀರದಲ್ಲೇ ಜನಜಾಗೃತಿ ಪ್ರವಾಸ ಕೈಗೊಂಡರು. 1920 ಜುಲೈ ತಿಂಗಳಲ್ಲಿ ಆರೋಗ್ಯ ಪೂರ್ಣ ಹದಗೆಟ್ಟಿತು. 1920 ಆಗಸ್ಟ್ ಒಂದರಂದು ಮುಂಜಾನೆ ಅವರ ಪ್ರಾಣಜ್ಯೋತಿ ತಾಯಿ ಭಾರತೀಯ ಮಂದಿರದಲ್ಲಿ ಲೀನವಾಯಿತು.

ಅವರ ಅಂತಿಮ ಯಾತ್ರೆಯಲ್ಲಿ ಸುಮಾರು ಎರಡು ಲಕ್ಷ ಜನ ಭಾಗವಹಿಸಿದ್ದರು. ಮಹಾತ್ಮ ಗಾಂಧಿ, ಚೌಕತಾಲಿ, ಜವಾಹರ್ಲಾಲ್ ನೆಹರು ಭಾಗವಹಿಸಿ ದೇಹವಿದ್ದ ಪಲ್ಲಕ್ಕಿಗೆ ಹೆಗಲುಕೊಟ್ಟರು.

**ಸಾಗರದ ನೀರಲ್ಲಿ ಒಂದು ಉದ್ಧರಣೆ ನೀರನ್ನು ನಿಮಗೆ ಕೊಟ್ಟಿರುವೆ.**

***ಭಾರತ್ ಮಾತಾಕೀ ಜೈ***


**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)**

**ವಧು-ವರ ಮಾಹಿತಿ ಕೇಂದ್ರ, ಬೆಂಗಳೂರು**

**ಸ್ಥಳ : ಗಾಯತ್ರಿ ಭವನ**

**ನಂ.3070, 14ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ,**

**ಬನಶಂಕರಿ 2ನೆ ಹಂತ, ಬೆಂಗಳೂರು-70.**

**ದೂರವಾಣಿ : 080-26770066/26771695**

**ಸಮಯ : ಸಂಜೆ 5.00 ರಿಂದ 7.00 ರವರೆಗೆ**

**ಮಂಗಳವಾರ ಮತ್ತು ಶನಿವಾರ**

**ನಿಯಮಗಳು :**

1. ವರ/ವಧು ಅಥವಾ ತಾಯಿ ತಂದೆ ಯಾರಾದರು ಒಬ್ಬರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸದಸ್ಯರಾಗಿರಬೇಕು.
2. ವಧು/ವರರ ಪೋಸ್ಟ್ ಕಾರ್ಡ್ ಫೋಟೋ ಮತ್ತು ವಿವರ ತರಬೇಕು.
3. ಶುಲ್ಕ ರೂ. 500/=

**ಸಂಚಾಲಕರು : ಶ್ರೀಮತಿ ಜಯಲತಾ ಸತ್ಯನಾರಾಯಣ್**

**ಮೊ. : 9916325902**

**ಸದಸ್ಯರು**

**ಶ್ರೀಮತಿ ನಳಿನಿ ನಟರಾಜ್, ಮೊ. : 9481788495**

**ಶ್ರೀಮತಿ ಗಾಯತ್ರಿ ರಾವ್, ಮೊ>9980481245**

## ॥ ಜೈ ರಘುವೀರ ಸಮರ್ಥ ॥

# ಯೋಗಿವರ್ಯ ಶ್ರೀ ಶ್ರೀಧರ ಮಹಾಸ್ವಾಮಿಜೀ

– ಶ್ರೀಮತಿ ಸಂತೋಷಿ ಶ್ರೀಧರ್, ಹಾಸನ.

ಮಹಾನ್ ತಪಸ್ವಿ ಎಂದೆನಿಸಿಕೊಂಡ ಶ್ರೀ ಶ್ರೀಧರಸ್ವಾಮಿಜೀ ತನ್ನ ಸದ್ಗುರುಗಳಾದ ಶ್ರೀ ಸಮರ್ಥ ರಾಮದಾಸರ ಆಧ್ಯಾತ್ಮಿಕ, ಧಾರ್ಮಿಕ–ತತ್ವ, ನೀತಿ ಚಿಂತನೆಯ ಸಾಧನೆ, ಸೂಚನೆ ಮತ್ತು ನಂಬಿಕೆಗಳ ಮಾರ್ಗಸೂಚಕರಾಗಿ ಹಿಂದೂ ಧರ್ಮದ ಪಾಯವನ್ನು ಮತ್ತಷ್ಟು ಪ್ರಬಲಗೊಳಿಸಿದ್ದರು.

ಶ್ರೀ ಶ್ರೀಧರ ಸ್ವಾಮಿಜೀಯವರು ಶ.ಶ.1931ನೇ ಕೀಲಕ ನಾಮ ಸಂವತ್ಸರ ಮಾರ್ಗಶೀರ್ಷ, ಶುದ್ಧ ಪೌರ್ಣಮೀ ಸೋಮವಾರ 07.12.1908ರಂದು ಕರ್ನಾಟಕದ ಲಾಡ್ ಚಿಂಚೋಳಿಯಲ್ಲಿ (ಗುಲ್ಬರ್ಗಾ ಜಿಲ್ಲೆ, ಗಾಣಗಾಪುರದ ಸಮೀಪ) ಶ್ರೀ ನಾರಾಯಣರಾಯರು ಮತ್ತು ಶ್ರೀಮತಿ ಕಮಲಾಬಾಯಿರವರಿಗೆ ಶ್ರೀ ಕ್ಷೇತ್ರ ಗಾಣಗಾಪುರದಲ್ಲಿ ಭಗವಾನ್ ದತ್ತಾತ್ರೇಯರ ವರಪ್ರಸಾದವಾಗಿ ಜನಿಸಿದ್ದರು.

ತಮ್ಮ ಬಾಲ್ಯ–ವಿದ್ಯಾ–ತಪಸ್ಸಾಧನೆಗಳನ್ನು ಕರ್ನಾಟಕ, ಆಂಧ್ರ, ಮಹಾರಾಷ್ಟ್ರದಲ್ಲಿ ಮುಗಿಸಿ, ತಮ್ಮ ಗುರುಗಳಾದ ಶ್ರೀ ಸಮರ್ಥ ರಾಮದಾಸರ ಅಪ್ಪಣೆಯಂತೆ ಪುನಃ ಕರ್ನಾಟಕಕ್ಕೆ ಬಂದು ತಿರ್ಯಾಶ್ರಮವನ್ನು ಹೊಂದಿ ಪರಿವ್ರಾಜಕರಾಗಿ ಹಿಮಾಚಲದವರೆಗೆ ಸಂಚರಿಸಿ ಧರ್ಮ ಜಾಗೃತಿಯಿಂದ ಲೋಕ ಅಭಿವೃದ್ಧಿಯನ್ನು ಮಾಡುತ್ತಾ ಸತತವಾಗಿ ಆರು ದಶಕಗಳ ಕಾಲ ಶ್ರಮಿಸಿದರು. 1954ರಂದು ಕರ್ನಾಟಕದ ಸಾಗರ ತಾಲ್ಲೂಕಿನಲ್ಲಿರುವ ವರದಪುರದಲ್ಲಿ ಏಕಾಂತ ತಪಸ್ಸನ್ನಾಚರಿಸುತ್ತಾ ಧರ್ಮ ಧ್ವಜವನ್ನು ನೆಟ್ಟಿ ಹಾರಿಸಿದರು. ಈ ಧರ್ಮಧ್ವ ಸನಾತನ ಧರ್ಮದ ಪುನರುಜ್ಜೀವನ, ಪುನರುತ್ಸಾಹ, ಭಕ್ತ್ಯಭಿವೃದ್ಧಿ ಹಾಗೂ ಧಾರ್ಮಿಕ ಜಾಗೃತಿಯ ಮೂಲ ಉದ್ದೇಶದ ತತ್ವವೆಂದೆನಿಸಿಕೊಂಡಿದೆ.

ಇವರ ಪೂರ್ವಾಶ್ರಮದ ಹೆಸರು ಶ್ರೀಧರ ದೇಗ್‌ಲುಕರ್, ತಮ್ಮ ಮೂರನೆಯ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡು ಶ್ರೀಧರರು ತನ್ನ ಅಣ್ಣನಾದ ತ್ರ್ಯಂಬಕನ ಪೋಷಣೆಯಲ್ಲಿ ಬೆಳೆದರುಇ. ವಿಧಿವಶಾತ್ ತ್ರ್ಯಂಬಕನು ಸಹ ಕೊನೆ ಉಸಿರೆಳೆದನು. ಹತಾಶಳಾದ ತಾಯಿಗೆ ಬಾಲಕ ಶ್ರೀಧರ ನೀಡಿದ್ದ ಸಾಂತ್ವನ ಹೀಗಿತ್ತು: "ಆತ್ಮಕ್ಕೆ ಸಾವಿಲ್ಲ. ದೇಹಕ್ಕೆ ಮಾತ್ರ ಮೃತ್ಯು. ದೇಹ ಕೊಳೆಯುವುದು, ಆದರೆ ಆ ದೇಹದಲ್ಲಿ ಅಡಗಿರುವ ಆತ್ಮ ಬೇರೊಂದು ದೇಹವನ್ನೇ ಸೇರಿ ಉಸಿರಾಡುವುದು. ಈ ಒಂದು ಸನ್ನಿವೇಶದಲ್ಲಿ ಶೋಕಕ್ಕಾಗಲಿ, ಕಣ್ಣೀರಿಗಾಗಲಿ ಜಾಗವಿಲ್ಲ."

ಬಾಲ್ಯದಿಂದಲೇ ಶ್ರೀ ಶ್ರೀಧರರಿಗೆ ತಪಸ್ಸಿನ ಹೆಬ್ಬಯಕೆ ಮೂಡಿತು. ಸಮಯದ ಅರಿವೇ ಇಲ್ಲದೇ ಶ್ರೀರಾಮನ ಮೂರ್ತಿಯ ಮುಂದೆ ಕುಳಿತು ಅಖಂಡ ರಾಮನಾಮ ಜಪದಲ್ಲಿ ಕಾಲ ಕಳೆಯುಉತ್ತಿದ್ದರು. ಹೀಗಿರುವಾಗ ಒಮ್ಮೆ ಓರ್ವನೊಬ್ಬನು, "ಎಲೈ ಬಾಲಕ! ಯಾವ ಹಿಂಜರಿಕೆಯಿಲ್ಲದೇ ಆ ಹರಿಯುತ್ತಿರುವ ಹೊಳೆಯಲ್ಲಿ ಧುಮುಕಿ ಬಿಡು, ನೋಡೋಣ ಅದ್ಯಾವ ರಮನುಇ ನಿನ್ನನ್ನು ಕಪಾಡುವನೋ ಎಂದು ಹೇಳುತ್ತಾ ಶ್ರೀಧರನನ್ನು ಅಪಹಾಸ್ಯ ಮಾಡಿದನುಇ. ಬಾಲಕ ಶ್ರೀಧರ ಯಾವುದೇ ಅನುಮಾನವಿಲ್ಲದೇ ತಾನು ನಂಬಿದ ಶ್ರೀರಾಮನ ಮೇಲೆ ಸಂಪೂರ್ಣ ವಿಶ್ವಾಸವಿಟ್ಟುಇ ಆ ಹೊಳೆಯಲ್ಲಿ ಧುಮುಕಲು ಸಿದ್ಧನಾದ. ಆಗ ಅಲ್ಲಿ ಉಪಸ್ಥಿತ ಜನರು ಬಾಲಕ ಶ್ರೀಧರನನ್ನು ಎಳೆದುಕೊಂಡುಇ ಕಾಪಾಡಿದರು.

### ಮಹಾರಾಜರಲ್ಲಿ ಅಡಗಿದ್ದ ಸುಪ್ತಚೇತನದ ಗುರುತು:

1948ರಲ್ಲಿ ಶ್ರೀ ಶ್ರೀಧರ ಮಹಾಸ್ವಾಮಿಗಳು ಉತ್ತರ ಕಾಶಿಯಲ್ಲಿ ತನ್ನ ದೀರ್ಘಕಾಲದ ಘೋರ ತಪಸ್ಸಿನ ಬಳಿಕ ಹೃಷಿಕೇಶಕ್ಕೆ ಆಗಮಿಸಿದರು. ಅಲ್ಲಿ ಡಿವೈನ್ ಲೈಫ್ ಸೊಸೈಟಿಯ ಸ್ಥಾಪಕರಾದ ಸ್ವಾಮಿ ಶಿವಾನಂದಜೀ ಈ ಮಹಾತಪಸ್ವಿಯಲ್ಲಿ ಅಡಗಿರುವ ದೈವಿಕ ತೇಜಸ್ಸನ್ನು ಗುರುತಿಸಿ, "ಶ್ರೀ ಶ್ರೀಧರನು "ಅಖಂಡ ಬ್ರಹ್ಮನಿಷ್ಠ ಪೂರ್ಣ ಜ್ಞಾನಿ" ಈ ತರಹದ ಅತ್ಯುತ್ತಮ ಸಾಧಕರನ್ನು ಈ ಜಗತ್ತಿನಲ್ಲೇ ಇರಲಿಲ್ಲ., ಇಲ್ಲ, ಮುಂದೆಯುಉ ಇರಲು ಸಾಧ್ಯವಿಲ್ಲವೆಂದು ಹೇಳುತ್ತಾ, ಶ್ರೀ ಶ್ರೀಧರರಿಗೆ ತಮ್ಮ ಆಶ್ರಮದಲ್ಲಿ ವಿಜೃಂಭಣೆಯ ಸ್ವಾಗತವನ್ನು ಏರ್ಪಾಟು ಮಾಡಿದ್ದರು.

ಕಾಶಿಯ ಕಾರಪತ್ರಿಜೀ ಮಹಾರಾಜರು ಶ್ರೀ ಶ್ರೀಧರ ಮಹಾಸ್ವಾಮಿಜೀಯವರನ್ನುಇ ಆಧ್ಯಾತ್ಮಿಕ ಹಾಗೂ ಧಾರ್ಮಿಕ ನಾಯಕನೆಂದು ಬಿರುದು ನೀಡಿ ಅವರ ಧರ್ಮ ಸ್ಥಾಪನೆಯ ಮುಇಖಾಂತರ ಸಾಮಾಜಿಕ ರೂಪಾಂತರವನ್ನು ತಂದಿರುವರು ಎಂದು ಹೇಳುಇತ್ತಾ ಈ ಮಹಾಯೋಗಿಯ ಸಕರ್ಮಿಕ ಸಾಧನೆಯನ್ನು ಅದ್ಭುತವಾದ ಪ್ರಶಂಸೆಯಿಂದ ಕೊಂಡಾಡಿದ್ದಾರೆ.

ಮಾತ ಅಮೃತನಂದಮಯಿ, ಪಾರಮಾರ್ಥದ ಬೆಟ್ಟವನ್ನುಇ ಏರುತ್ತಿರುವ ಮಾನವನಿಗೆ ಬೆಟ್ಟದ ತುಟ್ಟ ತುದಿಯಲ್ಲಿ ಕಾದು ಕುಳಿತಿರುವ ಈ ಮಹಾನ್ ಯೋಗಿ ಶ್ರೀ ಶ್ರೀಧರಸ್ವಾಮಿಜೀಯವರ ಭೇಟಿಯಾಗುವುದು ಎಂದು ತಮ್ಮ ಶ್ರೀ ಶ್ರೀಧರ ಸ್ವಾಮಿಜೀಯುವರ ಮೇಲೆ ಇರುವ ಅಪಾರ ನಂಬಿಕೆ, ಗೌರವ, ಭಕ್ತಿ ಮತ್ತು ಅಭಿಮಾನವನ್ನು ವ್ಯಕ್ತಪಡಿಸಿದ್ದಾರೆ.

ಸದ್ಗುರು ಭಗವಾನ್ ಶ್ರೀ ಶ್ರೀಧರ ಸ್ವಾಮಿಗಳು ತಮ್ಮ ಜೀವನ ಕ್ರಮದಿಂದಲೇ ನರನು ನಾರಾಯಣನಾಗಬಲ್ಲನೆಂಬುವುದನ್ನು ಸಾಧಿಸಿ ತೋರಿಸಿ ಮಾನವ ಜನ್ಮದ ಅಂತಿಮ ಗುರಿಯ ಸ್ವರೂಪವನ್ನು ಅರಿತು ಅದರಲ್ಲೇ ಲೀನನಾಗಬೇಕೆಂದು ಸಾರಿದರು.

"ಜಗತ್ತಿನಲ್ಲಿ ಸರ್ವರೂ ನನ್ನನ್ನು ಸರ್ವಧರ್ಮ ಪರಮಾತ್ಮನೆಂದು ಕಾಣಬೇಕು. ಆಯಾ ಧರ್ಮದ ಅನುಯಾಯಿಗಳಿಗೆ ಆಯಾ ಧರ್ಮದ ಪ್ರಭುವಾಗಿ ಕಂಡು ಅವರೆಲ್ಲರಲ್ಲಿ ಶಾಶ್ವತ ಸತ್ಯ ಸುಖವು ದೊರಕುವಂತೆ ಮಾಡಬೇಕು" ತನ್ನ ಜೀವನದ ಧ್ಯೇಯ, ಆಧ್ಯಾತ್ಮ ಹಾಗೂ ಧಾರ್ಮಿಕ ಚಿಂತನೆಯನ್ನು ಸಾರಿದರು.

# ದೈವ ಮತ್ತು ಪುರುಷ ಪ್ರಯತ್ನ

## ಕೃಪೆ: ಆರ್ಯಸಂಸ್ಕೃತಿ ಮಾಸಪತ್ರಿಕೆ, ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ, ಮೈಸೂರು

**– ಡಾ। ಕೆ. ಎಲ್ ಶಂಕರನಾರಾಯಣ ಜೋಯ್ಸ್**

ಒಬ್ಬನು ತನ್ನ ನಿರೀಕ್ಷೆಗೆ ತಕ್ಕಂತೆ ಕಾರ್ಯವಾಗದಿದ್ದಾಗ ಅಥವಾ ನಿರೀಕ್ಷೆಗೆ ವ್ಯತಿರಿಕ್ತವಾದ ಕರ್ಮಫಲವು ಉಂಟಾದಾಗ ವಿಧಿಯನ್ನು ನಿಂದಿಸುತ್ತಾನೆ. 'ಅಯ್ಯೋ ವಿಧಿಲಿಖಿತವೇ! 'ಎಂದೋ' ಅಯ್ಯೋ ನನ್ನ ಹಣೆಬರಹವೇ!' ಎಂದೋ ತನ್ನ ನೋವನ್ನು ವ್ಯಕ್ತಪಡಿಸುತ್ತಾನೆ. ವಿಧಿಯು ಒಬ್ಬನಿಗೆ ಅನಿಷ್ಟ ಫಲವನ್ನು ಕೊಡುವ–ಸಂಕಲ್ಪವುಳ್ಳದ್ದೇ? ಇಲ್ಲಿ 'ಹಣೆಬರಹ' ಎಂಬ ಮಾತಿನ ಅರ್ಥವಾದರೂ ಏನು? ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ.

ನಾವು ನಿತ್ಯದಲ್ಲಿ ವಿದ್ಯುತ್ತಿನ ಬಳಕೆಯನ್ನು ಹೊಂದಿದ್ದೇವಷ್ಟೆ! ವಿದ್ಯುದ್ದೀಪ, ಫ್ಯಾನ್, ಮಿಕ್ಸರ್, ಫ್ರಿಜ್, ಟೇಪ್‌ರೆಕಾರ್ಡರ್, ಟೆಲಿವಿಷನ್, ಕಂಪ್ಯೂಟರ್ ಮೊದಲಾದ ವಿದ್ಯುತ್ತಿನ ಉಪಕರಣಗಳನ್ನು ಬಳಸುವಾಗ ಹಿಗ್ಗುತ್ತೇವೆ. ಆದರೆ ಒಮ್ಮೆ ಎಚ್ಚರತಪ್ಪಿ ವಿದ್ಯುತ್‌ತಂತಿಯನ್ನು ಮುಟ್ಟಿದರೆ ಆಘಾತವಾಗುತ್ತದೆ. ಆಗ ವಿದ್ಯುತ್ ಬಗ್ಗೆಯೋ ಅದನ್ನು ಬಳಕೆಗೆ ತಂದವನ ಬಗ್ಗೆಯೋ ಉಪಕರಣಗಳನ್ನು ತಯಾರಿಸಿದವನ ಬಗ್ಗೆಯೋ ಸಲ್ಲದ ಮಾತುಗಳನ್ನಾಡುವುದುಂಟು. ಆದರೆ ವಿದ್ಯುತ್ತೆಂಬುದು ಸೃಷ್ಟಿಯಲ್ಲಿರುವ ಒಂದು ಶಕ್ತಿ. ಅದು ಒಬ್ಬರಿಗೆ ಹಿತವನ್ನಾಗಲೀ ಮತ್ತೊಬ್ಬರಿಗೆ ಅಹಿತವನ್ನಾಗಲೀ ಉಂಟುಮಾಡುವ ಸಂಕಲ್ಪವುಳ್ಳದ್ದಲ್ಲ. ಅದನ್ನು ಪತ್ತೆಹಚ್ಚಿ ಲೋಕಕ್ಕೆ ತಂದವನಿಗೂ ಯಾರ ಬಗ್ಗೆಯೂ ಕೆಡಕನ್ನುಂಟು ಮಾಡಲಿ ಎಂಬ ಉದ್ದೇಶವಿರುವುದಿಲ್ಲ. ವಿದ್ಯುತ್‌ನ ಬಳಕೆಯಲ್ಲಿ ಎಚ್ಚರಿಕೆಯಿರಬೇಕು. ಅದು ವ್ಯತ್ಯಾಸವಾದಾಗ ತನ್ನತನ ತೋರಿದರೆ ಅಪರಾಧವೇನು?

ಇದೇ ರೀತಿ ಜೀವಿಗಳ ಹಿತಕ್ಕಾಗಿ ಸೃಷ್ಟಿಯೇರ್ಪಟ್ಟಿದೆ. ಅದರ ನಿಯಮವನ್ನರಿತು ಬಳಸಿದಾಗ ಅದರಿಂದ ಹಿತವಾಗಬಹುದು. ವ್ಯತಿರಿಕ್ತವಾಗಿ ವರ್ತಿಸಿದಾಗ ಅಹಿತವಾದ ಪರಿಣಾಮವುಂಟಾಗಬಹುದು. ಆದರೆ ಅದು ನಾವೇ ಮಾಡಿದ ಕರ್ಮದ ಫಲವಾಗಿರುತ್ತದೆ. ಹೀಗೆ ಒಂದು ಜನ್ಮದಲ್ಲಿ ಮಾಡಿದ ಕರ್ಮದ ಫಲವು ಇನ್ನೊಂದು ಜನ್ಮದಲ್ಲಿ ಫಲಿಸುವಂತಾದಾಗ ವಿಧಿಯೆಂಬ ವ್ಯವಹಾರ ಬಂದಿದೆ. ಬ್ರಹ್ಮನ ಸೃಷ್ಟಿಯಲ್ಲಿರುವ ನಿಯಮದಂತೆ ವಿಧಿಯಂತೆ ಉಂಟಾಗುವ ಪರಿಣಾಮವಾದ್ದರಿಂದ ವಿಧಿಯೆಂಬ ವ್ಯವಹಾರ. ಹಿಂದೆ ಮಾಡಿದ ಕರ್ಮ ಇಂದು ವಿಧಿಯೆನ್ನಿಸಿಕೊಳ್ಳುತ್ತದೆ. ಇಂದು ಮಾಡುತ್ತಿರುವ ಕರ್ಮವು ಇನ್ನೊಮ್ಮೆ ಮುಂದೆ ಫಲ ಕೊಡುವಾಗ ವಿಧಿಯೆನ್ನಿಸಿಕೊಳ್ಳುತ್ತದೆ. ಆದ್ದರಿಂದ ಇಲ್ಲಿ ವಿಧಿಯನ್ನು ನಿಂದಿಸಲು ವಿಷಯವಿಲ್ಲ. ನಾವು ಹಿಂದೆ ಅರಿತೋ ಅರಿಯದೆಯೋ ಮಾಡಿದ ಕರ್ಮವನ್ನು ಭಾವಿಸಿ ಪಶ್ಚಾತ್ತಾಪ ಪಡುವ ವಿಷಯವಿದೆ. ಮುಂದೆ ಹಾಗೆ ಆಗದಂತೆ ಎಚ್ಚರಿಕೆಯಿಂದ ವರ್ತಿಸುವ ಬಗ್ಗೆ ನಿರ್ಣಯಿಸಿಕೊಳ್ಳುವ ವಿಷಯವಿದೆ.

ಇನ್ನು ವಿಧಿಲಿಖಿತ, ಹಣೆಯ ಬರಹ ಎಂಬ ಮಾತುಗಳಿಗೆ ಅರ್ಥವೇನು? ಬ್ರಹ್ಮನು ಬರೆಯುವುದುಂಟೇ? ಅದೂ ಹಣೆಯಲ್ಲೇ? ಎಂದು ಪ್ರಶ್ನೆಗಳು ಉದ್ಭವಿಸಬಹುದು. ಇಲ್ಲಿ 'ಬರಹ' ಎಂದೊಡನೆ ನಾವು ಬಳಸುವ ಬಿಳಿಯ ಕಾಗದ, ಇಂಕಿನ ಲೇಖನೀ ಅಥವಾ ಹಿಂದಿನ ಕಾಲದ ಓಲೆಯಗರಿ ಮೊದಲಾಗಿ ನೆನೆಪಿಸಿಕೊಳ್ಳಬೇಕಾಗಿಲ್ಲ. ಬ್ರಹ್ಮನ ಶಾಸ್ತ್ರವೆಂಬುದು ಸೃಷ್ಟಿಯಲ್ಲಿ ತನ್ನತನವನ್ನಿಟ್ಟುಕೊಂಡು ಕಾರ್ಯವೆಸಗುತ್ತಿದೆ. ಅದು ವಾಗ್‌ರೂಪದಲ್ಲಿ ಗೋಚರವಾಗದಿರುವುದರಿಂದ ಶಾಸನ. ಆದರೆ ಈ ಶಾಸನ ನಮ್ಮ ಬರಹದಂತಲ್ಲ. ಅದು ಸೃಷ್ಟಿಯಲ್ಲಿ ಮೊಳಗುತ್ತಿರುವ ಶಾಸನ. ಯೋಗದೃಷ್ಟಿಗೆ ಗೋಚರವಾಗಬಲ್ಲ ಶಾಸನ. ಆ ಶಾಸನದ ಗುರುತಗಳು ಅದಕ್ಕೆ ಒಳಪಡುವ ದೇಹಿಯಲ್ಲಿ ಅನೇಕ ರೀತಿಯಲ್ಲಿ ಮನೆ ಮಾಡಿಕೊಂಡಿರುತ್ತವೆ. ಸೃಷ್ಟಿಯಲ್ಲಿ ಲೆಕ್ಕಾಚಾರವಾಗಿ ಆ ಶಾಸನದ ಗುರುತುಗಳು ಏರ್ಪಡುವುದರಿಂದ ಅದನ್ನು ಬರಹ ಎಂದು ವ್ಯವಹರಿಸಿದ್ದಾರೆ. ಈ ಬರಹವು ಒಬ್ಬನ ಹಣೆಯಲ್ಲಿ ಮಾತ್ರವಲ್ಲದೇ ದೇಹದ ಬೇರೆ ಬೇರೆ ಭಾಗಗಳಲ್ಲೂ ವ್ಯಕ್ತವಾಗಬಹುದು. ಇದನ್ನು ಲೆಕ್ಕಾಚಾರವಾಗಿ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವುಳ್ಳವನಿಗೆ ಅವುಗಳು ಆಗುಹೋಗುಗಳ ಪರಿಚಯವನ್ನು ನೀಡಬಲ್ಲವು. ಒಬ್ಬನ ಆಕಾರ ನಡೆ–ನುಡಿಗಳೆಲ್ಲವೂ ಅವನು ಹೊತ್ತುತಂದಿರುವ ಪಾಪಪುಣ್ಯಗಳನ್ನು, ಸಂಸ್ಕಾರಗಳನ್ನು ಸದಾ ವ್ಯಕ್ತಪಡಿಸುತ್ತಲೇ ಇರುತ್ತವೆ!

ಈ ಹಿನ್ನೆಲೆಯಲ್ಲೇ ಮಹಾಕವಿ ಕಾಳಿದಾಸನು ರಘುವಂಶದ ಮಹಾರಾಜರನ್ನು ವರ್ಣಿಸುವಾಗ **'ಆಕಾರಸದೃಶಪ್ರಜ್ಞಃ** । – ಆಕಾರಕ್ಕೆ ಸ್ರದಶವಾದ ಪ್ರಜ್ಞೆಯುಳ್ಳವನು ಎಂದು ವರ್ಣಿಸಿರುವುದನ್ನು ಗಮನಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ಒಂದು ಶಾಸ್ತ್ರವು **'ಸಾಮುದ್ರಿಕ'** ಎಂದು ರೂಪುಗೊಂಡಿತು. ತಾನು ಮಾಡಿದ ಕರ್ಮವು ಸೂಕ್ಷ್ಮರೂಪದಲ್ಲಿ ಮನೋಮಯವಾದ ಕೋಶದಲ್ಲಿ ನೆಲೆಸಿ, ಅಲ್ಲಿ ಒಂದು ರೀತಿಯಲ್ಲಿ ಸಮ್ಮುದ್ರಿತವಾಗಿದ್ದರೆ ಇನ್ನೊಂದು ರೀತಿಯಲ್ಲಿ ಆಪಾದಮಸ್ತಕದಲ್ಲೂ ರೋಮರೋಮಗಳಲ್ಲೂ ಸಮ್ಮುದ್ರಿತವಾಗಿರುತ್ತದೆ. ನಡೆ–ನುಡಿಗಳಲ್ಲೂ ಅದರ ಮುದ್ರೆಯಿರುತ್ತದೆ. ಅವು ಜನ್ಮಜನ್ಮಾಂತರದ ಕರ್ಮಗಳನ್ನು ಜ್ಞಾಪಿಸುವ ಪರ್ಯಾಯವಾಗಿ ಈ ಜನ್ಮದ ಆಗುಹೋಗುಗಳನ್ನು ಸೂಚಿಸುತ್ತಲೇ ಇರುತ್ತವೆ. ಇವು ಅಳಿಸದ ಬರಹಗಳು. ಬಚ್ಚಿಡಲು ಸಾಧ್ಯವಾಗದ ಬರಹಗಳು. ಹಣೆಯಲ್ಲಿ ಒಂದು ಬೋರ್ಡ್ ಕಟ್ಟಿಕೊಂಡು ಹೊರಟರೆ ಹೇಗೋ ಹಾಗೆ ಇವುಗಳು ಸದಾ ಇವನು ಇಂಥವನು ಎಂಬುದನ್ನು ಸಾರುತ್ತಲೇ ಇರುತ್ತವೆ. ಇದು ಪ್ರಕೃತಿಯು ಅನುಗ್ರರೂಪದಲ್ಲಿ ಒದಗಿಸಿಕೊಟ್ಟಿರುವ ಗುರುತುಗಳು. ನಾವೊಮ್ಮೆ ಲೆಕ್ಕಾಚಾರದಲ್ಲಿ ತಪ್ಪಿದರೂ ಪ್ರಕೃತಿಯು ತಪ್ಪುವುದಿಲ್ಲ. ಅದು ಮಾಡಿದ ಕರ್ಮಗಳಿಗೆ ಫಲವನ್ನು ಕೊಡುವುದು ಮಾತ್ರವಲ್ಲದೇ ತಾನು ಕೊಡುವ ಫಲಗಳನ್ನು ಬಗೆ ಬಗೆಯಾಗಿ ತನ್ನ ಭಾಷೆಯಲ್ಲಿ ಜ್ಞಾಪಿಸುತ್ತಿದೆ. ಅದು ನೀಡುವ ಸೂಚನೆಗಳನ್ನು ಅರಿತು ಜೀವನವನ್ನು ರೂಪಿಸಿಕೊಳ್ಳುವವನಿಗೆ ಅದರ ಉಪಕಾರ ಮಹತ್ತರವಾಗಿದೆ.


ಒಂದು ಸಿಂಹವನ್ನು ಗಮನಿಸಿದರೆ ಅದರ ನಡುಕೃಶವಾಗಿರುತ್ತದೆ. ಬಹಳ ಭದ್ರವಾದ ಬಲಿಷ್ಠ ಪಾದಗಳು. ಅಗಲವಾದ ಮುಖ. ಒಮ್ಮೆ ಎಲ್ಲ ಪ್ರಾಣಿಗಳನ್ನು ನಡುಗಿಸುವಷ್ಟು ಜೋರಾಗಿ ಘರ್ಜನೆ ಮಾಡಬಲ್ಲ ಬಾಯಿ ಮತ್ತು ಕಂಠ. ಅದರ ನೋಟವೇ ಒಂದು ರೀತಿಯಲ್ಲಿ ಅದರ ಬಲ, ಪರಾಕ್ರಮಗಳನ್ನು ತೋರುವಂತಿರುತ್ತದೆ. ಅದರ ನಡೆಯು ಅದರ ಧೈರ್ಯ, ಗಾಂಭೀರ್ಯ, ಶೌರ್ಯಗಳನ್ನು ಸಾರುವಂತಿರುತ್ತದೆ. ಸಿಂಹದ ಬಲ, ಪರಾಕ್ರಮ, ಧೈರ್ಯ, ಶೌರ್ಯ ಮೊದಲಾದ ಭಾವಗಳು ವ್ಯಕ್ತವಾಗಬೇಕಾದರೆ ಅದಕ್ಕನುಗುಣವಾದ ದೇಹ ರಚನೆಯಿದ್ದಾಗ ಮಾತ್ರ ಸಾಧ್ಯ. ನಡೆ ನುಡಿಯಿದ್ದಾಗ ಸಾಧ್ಯ. ನರಿಯ ದೇಹವನ್ನು ಬಳಸಿಕೊಂಡು ಸಿಂಹದ ಗುಣಗಳು ಅಭಿವ್ಯಕ್ತವಾಗಲಾರವು. ಕಾರಣ ಯಾವುದೇ ಒಳಭಾವವು ವ್ಯಕ್ತಾಗಬೇಕಾದರೆ ಅದಕ್ಕನುಗುಣವಾದ ಹೊರ ಅವಯವ ಸೌಲಭ್ಯವಿರಬೇಕು. ಈ ಒಳ ಹೊರ ಸಾಮರಸ್ಯದೊಂದಿಗೇ ಸೃಷ್ಟಿ ಮುಂದುವರಿಯುತ್ತಿದೆ. ಇದರ ಮರ್ಮವರಿತವರಿಗೆ ಒಳಗುಣ ಧರ್ಮಗಳನ್ನು ಅರಿತು ಅದರ ಹೊರ ಲಕ್ಷಣಗಳೇನು ಎಂಬುದನ್ನು ನಿರ್ಣಯಿಸಲು ಸಾಧ್ಯವಾಗುವುದು. ಅಂತೆಯೇ ಹೊರ ರೂಪುರೇಷೆಗಳನ್ನು ಗುರುತಿಸಿ ಒಳ ಸ್ವರೂಪವೇನು ಎಂಬುದನ್ನು ನಿಶ್ಚಯಿಸಲೂ ಸಾಧ್ಯವಾಗುವುದು. ಈ ನೇರದಲ್ಲಿ ಅಂಗಸಾಮುದ್ರಿಕ ಎಂಬ ವಿದ್ಯೆಯು ಬೆಳೆದು ಬಂದಿದೆ. ಒಬ್ಬನ ಹಣೆಯ ಉದ್ದ, ಅಗಲ, ಉಬ್ಬು ತಗ್ಗುಗಳು, ರೇಖೆಗಳು ಮೊದಲಾಗಿ ಅವನ ಜೀವನದ ಕರ್ಮಗತಿಗಳನ್ನು ವ್ಯಕ್ತಪಡಿಸುತ್ತವೆ. ಇದನ್ನು ಒಂದು ನೇರದಲ್ಲಿ **'ಹಣೆಯಬರಹ', 'ವಿಧಿಲಿಖಿತ'** ವೆಂದರೆ ತಪ್ಪೇನು?

ಅಂಗೈ ಹಾಗು ಹೆಬ್ಬೆರಳು ಒಬ್ಬೊಬ್ಬನಿಗೂ ಭಿನ್ನಭಿನ್ನವಾದ ರೂಪರೇಖೆಗಳಿಂದ ಕೂಡಿರುತ್ತದೆಯಷ್ಟೆ. ಆದ್ದರಿಂದಲೇ ವ್ಯಕ್ತಿಯ ಗುರುತಾಗಿ ಸಹಿಯ ಸ್ಥಾನದಲ್ಲಿ ಹೆಬ್ಬೆರಳಿನ ಮುದ್ರೆಯನ್ನು ಬಳಸುವ ಕ್ರಮ ಬಂದಿದೆ. ಇದೇ ರೀತಿ ಅಂಗೈನ ಗೆರೆಗಳೂ ಸಹ ಪ್ರತಿವ್ಯಕ್ತಿಗೆ ಭಿನ್ನವಾಗಿವೆ. ಹಾಗೆ ವಿಭಿನ್ನವಾಗಿ ರೂಪಿತವಾಗಲು ಕಾರಣವೇನು? ಆಕಸ್ಮಿಕವಾಗಿ ಆಗಿದೆಯೇ? ಸೃಷ್ಟಿಯಲ್ಲಿ ಯಾವುದೇ ವಿಷಯವು ಕಾರ್ಯಕಾರಣ ಭಾವದ ಸಂಬಂಧವಿಲ್ಲದೇ ನಡೆಯುವುದಿಲ್ಲವಷ್ಟೆ. ಆದ್ದರಿಂದ ಅದರ ಮರ್ಮವರಿತವರು ಅದು ಜೀವನದ ಘಟನಾವಳಿಗಳನ್ನು ವ್ಯಕ್ತಪಡಿಸುತ್ತದೆ ಎಂದು ಸಾರಿದರು. ಹಸ್ತಸಾಮುದ್ರಿಕವೆಂದು ಹೆಸರಿಸಿದರು. ಒಬ್ಬ ತನ್ನ ಹಾವಭಾವದಿಂದ ತನ್ನ ಆಶಯವನ್ನು ವ್ಯಕ್ತಪಡಿಸಬಲ್ಲನಷ್ಟೆ. ಹಾಗಿದ್ದಾಗ ಇನ್ನು ಮಾತಿನ ಅವಶ್ಯಕತೆಯೇನಿದೆ ಎನ್ನಬಹುದಲ್ಲವೇ? ಹಾವಭಾವವು ವ್ಯಕ್ತಪಡಿಸಿದ ಅಂಶವನ್ನೇ ವಾಕ್ಕಿನಿಂದಲೂ ವ್ಯಕ್ತಪಡಿಸಲು ಸೌಲಭ್ಯವಿದ್ದಾಗ ಅರ್ಥಮಾಡಿಕೊಳ್ಳುವವನಿಗೆ ಹೆಚ್ಚಿನ ಸೌಕರ್ಯವಾಗಬಹುದಲ್ಲವೇ? ಅಲ್ಲದೇ ಹಾವಭಾವವು ಒಂದು ವಿಷಯವನ್ನು ಚೆನ್ನಾಗಿ ವ್ಯಕ್ತಪಡಿಸಿದರೆ ಮಾತು ಇನ್ನೊಂದು ವಿಷಯವನ್ನು ಚೆನ್ನಾಗಿ ಹೊರತರಬಲ್ಲುದಾಗಿದೆ. ಹಾವಭಾವದಿಂದ ವ್ಯಕ್ತವಾಗಬೇಕಾದ ವಿಚಾರ ಮಾತಿನಿಂದ ವ್ಯಕ್ತವಾದರೆ ಚೆನ್ನು. ಅದರಂತೆ ಅಂಗಪ್ರತ್ಯಂಗಗಳು ಒಂದು ರೀತಿಯಲ್ಲಿ ಕರ್ಮದ ಗತಿಯನ್ನು ವ್ಯಕ್ತಪಡಿಸಿದರೆ ಇನ್ನೊಂದು ವಿಧದಲ್ಲಿ ಹಸ್ತದ ರೇಖಾವಿನ್ಯಾಸಗಳು ಅದೇ ಸತ್ಯವನ್ನು ಇನ್ನೊಂದು ವಿಧದಲ್ಲಿ ವ್ಯಕ್ತಪಡಿಸುತ್ತದೆ. ಹೀಗೆ ಅಂಗ ಸಾಮುದ್ರಿಕ ಹಸ್ತಸಾಮುದ್ರಿಕಗಳು ಪರಸ್ಪರ ಸಾಮರಸ್ಯದಿಂದ ಪರಸ್ಪರ ಪೂರಕವಾಗಿ ಕರ್ಮದ ಗತಿಯನ್ನು ವ್ಯಕ್ತಪಡಿಸುತ್ತಿವೆ.

ಸೃಷ್ಟಿಯಲ್ಲಿ ರೇಖಾವಿನ್ಯಾಸಗಳಿಗೆ ಒಂದು ಸ್ಥಾನವಿದೆ. ಅವುಗಳು ಒಂದೊಂದು ಸತ್ಯಾಂಶವನ್ನು ಹೊತ್ತುತರುತ್ತವೆಯೆಂಬುದು ಯೋಗಿಗಳ ನೋಟವಾಗಿದೆ. ಪೃಥ್ವಿ, ಅಪ್, ತೇಜಸ್, ವಾಯು, ಆಕಾಶಗಳು ಯಾವ ಐದು ತನ್ಮಾತ್ರರೂಪವಾದ ಶಕ್ತಿಗಳಿಂದ ರೂಪಿತವಾಗಿದೆಯೋ ಆ ಶಕ್ತಿಗಳನ್ನು ಯೋಗದೃಷ್ಟಿಯಿಂದ ದರ್ಶನ ಮಾಡುವುದುಂಟು. ಅಲ್ಲಿ ರೇಖಾವಿನ್ಯಾಸರೂಪದಲ್ಲಿ ಆ ಶಕ್ತಿಗಳು ಗೋಚರವಾಗುತ್ತವೆ. ಭೂತತ್ತ್ವವು ಅಷ್ಟಭುಜದ ವಜ್ರಾಕೃತಿಯನ್ನು ಅಳವಡಿಸಿಕೊಂಡಿರುವ ಸಮಚತುರಸ್ರರೂಪವಾಗಿದೆ. ಜಲತತ್ತ್ವವು ಎರಡು ಕಮಲ ಮಧ್ಯದಲ್ಲಿರುವ ಅರ್ಧಚಂದ್ರನಂತೆ ಇರುವುದು. ಅಗ್ನಿತತ್ತ್ವವು ಸ್ವಸ್ತಿಕ ಚಿಹ್ನೆಯಿಂದ ಕೂಡಿರುವ ಸಮಬಾಹುವಾದ ಊರ್ಧ್ವಮುಖ ತ್ರಿಕೋಣ ರೂಪದಲ್ಲಿರುವುದು. ವಾಯುತತ್ತ್ವವು ಆರು ಬಿಂದುಗಳನ್ನು ಪರಿಧಿಯಲ್ಲಿ ಹೊಂದಿರುವ ವೃತ್ತವಾಗಿರುವುದು. ಆಕಾಶ ತತ್ತ್ವವು ಶುದ್ಧ ವೃತ್ತವಾಗಿರುವುದು. ಇದೇ ರೀತಿ ಮನಸ್ತತ್ತ್ವ–ಬುದ್ಧಿತತ್ತ್ವಗಳೂ ಸಹ ಒಂದೊಂದು ರೇಖಾವಿನ್ಯಾಸದರೂಪದಲ್ಲಿ ಇರುವುದುಂಟು. ಇದರ ಮರ್ಮವರಿತವರು ಇದನ್ನು ಯಂತ್ರವಿದ್ಯೆಯಾಗಿ ತಂದಿದ್ದಾರೆ. ಈ ಮಾನವ ದೇಹವೇ ಸಕಲ ಸತ್ಯಗಳಿಗೆ ಆಕರವಾಗಿರುವುದರಿಂದ ಇದರ ಒಳಕೇಂದ್ರಗಳಲ್ಲಿ ಗೋಚರವಾಗುವ ಅನೇಕ ಸತ್ಯಗಳು ದೇಹದ ಬೇರೆ ಬೇರೆ ಭಾಗಗಳಲ್ಲೂ ರೇಖಾವಿನ್ಯಾಸದರೂಪದಲ್ಲಿ ಗೋಚರಿಸುವುದುಂಟು. ಅದು ವಿಶೇಷವಾಗಿ ಅಂಗೈನಲ್ಲಿ ರೇಖಾತ್ಮವಾಗಿ ಅಭಿವ್ಯಕ್ತವಾಗಿದೆ. ವ್ಯಕ್ತಿಯ ಕರ್ಮದ ಗತಿಯನ್ನೂ ಅವನ ಸಹಜ ಸ್ಥಿತಿಯನ್ನೂ ವ್ಯಕ್ತಪಡಿಸುವ ಅಂಗೈರೇಖೆಗಳು ಒಂದು ವಿಧವಾದ ಬ್ರಹ್ಮಲಿಪಿಯಾಗಿದೆ.

ಆದರೆ ಇಂದು ಈ ಎಲ್ಲ ವಿದ್ಯೆಗಳೂ ದೇಶದಲ್ಲಿ ಮಸುಕಾಗಿವೆ. ಯಾವ ವಿದ್ಯೆಗಳೆಲ್ಲವೂ ಯೋಗಭೂಮಿಯಲ್ಲಿ ಪ್ರವೇಶಿಸಿದ ಯೋಗಿಗಳಿಂದ ಲೋಕಹಿತಕ್ಕಾಗಿ ಬಿತ್ತರಿಸಲ್ಪಟ್ಟವೋ ಅವು, ಯೋಗಾನುಭವದ ಹೆಜ್ಜೆ ಜೀವನದಲ್ಲಿ ಮರೆಯಾಗಿರುವುದರಿಂದ ಮಸುಕಾಗಿವೆ, ಹರಕು ಮುರುಕಾಗಿ. ಈ ಹರಕು ಮುರುಕಾದ ವಸ್ತುಗಳನ್ನು ಮುಂದಿಟ್ಟುಕೊಂಡು ವಿದ್ಯೆಗಳ ಬಗ್ಗೆ ಇವು ವೈಜ್ಞಾನಿಕವೇ ಅಲ್ಲವೇ? ಎಂಬುದನ್ನು ನಿರ್ಣಯಿಸ ಹೋಗುವುದು ಮೂರ್ಖತನವಾದೀತು. ವಿಷಯವರಿತು ಇವುಗಳ ಮೂಲರೂಪವನ್ನು ಮತ್ತೊಮ್ಮೆ ಬರಮಾಡಿಕೊಂಡು ಅದರ ಯಥಾರ್ಥತೆಯನ್ನು ಭಾವಿಸಬೇಕಾಗಿದೆ. ಆ ನೇರದಲ್ಲಿ ಯೋಗ ಭೂಮಿಯತ್ತ ಭಾರತ ಜನತೆಯ ಮನಸ್ಸುಪ್ರವೃತ್ತವಾಗಿ ಮತ್ತೊಮ್ಮೆ ಸಂಫುಲ್ಲಿತವಾದ ವಿದ್ಯಾಲತೆಗಳಿಂದ ಕಂಗೊಳಿಸುವ ಸುಮನಸೋದ್ಯಾನದಲ್ಲಿ ವಿಹರಿಸುವಂತಾಗಲಿ ಎಂದು ಬಯಸೋಣ.

(ಮುಂದುವರೆಯುವುದು)



# ಶ್ರೀ ಧನ್ವಂತರಿ ಸೇವಾ ಪ್ರತಿಷ್ಠಾನ (ರಿ)

ಹೊನ್ನೇನಹಳ್ಳಿ ಗ್ರಾಮ, ಗಾವಡಗೆರೆ ಹೋಬಳಿ, ಹುಣಸೂರು ತಾ||, ಮೈಸೂರು ಜಿಲ್ಲೆ

## ಸರ್ವರೋಗ ನಿವಾರಕ ಮಹಾವಿಷ್ಣು ಸ್ವರೂಪಿ

## ಶ್ರೀ ಧನ್ವಂತರಿಸ್ವಾಮಿಯ "ವೈಭವದ ದೇಗುಲ ನಿರ್ಮಾಣ"



## ಶ್ರೀ ಅಮೃತಬಿಂದು ಕ್ಷೇತ್ರ

ಸಕಲ ರೋಗ ನಿವಾರಕ ಶ್ರೀ ಧನ್ವಂತರಿ ದೇವಾಲಯ ನಿರ್ಮಾಣವು ಅಂದಾಜು ರೂ. 13,82,00,000/- (ರೂ. ಹದಿಮೂರು ಕೋಟಿ ಎಂಬತ್ತೆರಡು ಲಕ್ಷ)ವೆಚ್ಚದಲ್ಲಿ ನಿರ್ಮಾಣಗೊಳ್ಳುತ್ತಿರುವುದು. ಈ ಪವಿತ್ರ ವೈಭವದ ದೇವಾಲಯ ನಿರ್ಮಾಣ ಕಾರ್ಯದಲ್ಲಿ ನಾಡಿನ ಕೋಟಿ ಕೋಟಿ ಸಂಖ್ಯೆಯ ಭಕ್ತಾಧಿಗಳು ಅತ್ಯಂತ ಶ್ರದ್ಧಾಭಕ್ತಿಗಳಿಂದ ತಮ್ಮ ತನು-ಮನ-ಧನದ ಮೂಲಕ ತಮ್ಮ ಇಚ್ಛಾನುಸಾರ ಸೇವೆಯನ್ನು ಸ್ವಾಮಿಗೆ ಸಮರ್ಪಿಸಿ ಶ್ರೀ ಭಗವಂತನ ಕೃಪೆಗೆ ಪಾತ್ರರಾಗಬೇಕೆಂದು ವಿನಂತಿ.

**ವಿಶೇಷ ಸೂಚನೆ : ಶ್ರೀ ಧನ್ವಂತರಿ ಸ್ವಾಮಿಯ ದೇಗುಲ ನಿರ್ಮಾಣಕ್ಕಾಗಿ ತಾವು ನೀಡುವ ದೇಣಿಗೆಗೆ ಭಾರತ ಸರ್ಕಾರದ ಆದಾಯ ತೆರಿಗೆ 80 ಕಾಯ್ದೆಯಡಿಯಲ್ಲಿ ತೆರಿಗೆ ವಿನಾಯಿತಿ ಸೌಲಭ್ಯವಿರುತ್ತದೆ.**

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ :

ಬೆಂಗಳೂರು ಕಛೇರಿ : 080-35816865
9880777545 / 9900319932

ಹುಣಸೂರು ಕಛೇರಿ : 08222-295374
9902360398 / 9740132374

ತಮ್ಮ ಅಮೂಲ್ಯ ಕಾಣಿಕೆಯು ಡಿಡಿ / ಚೆಕ್ / ಆನ್‌ಲೈನ್ ರೂಪದಲ್ಲಿರಲಿ

**Bank Details :**

Account Name : Sri Dhanvantari Seva Pratishtana (R), Name of the Bank : State Bank of India (SBI)
Branch : J.P. Nagar 2nd Phase, Bangalore. C A/c. No. : 41100807414 | IFSC : SBIN0017649

PERIODICAL RATE
VIPRANUDI KANNADA MONTHLY
RNI No. KARKAN/2009/29931. Posted at BG PSO, Mysore Road, Bangalore-560 026,
Permitted to Post on 24-03-2023 Date of Publishing 23-03-2023


# ಶುಭಾಶಯಗಳು

## ಡಾ|| ಉದಯ್ ಬಿ. ಗರುಡಾಚಾರ್

## ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ



**Dr. Uday B. Garudachar**

**MLA, Chickpet Assembly Constituency**

/BGUdayBJP www.udaygarudachar.in


If undelivered please return to :

**VIPRANUDI**

Akhila Karnataka Brahmana Mahasabha (R.)
"Gayathri Bhavana", No. 3070, 9th Main Road
Gayathri Bhavana Road, (14th Cross) BSK 2nd Stage
BANGALORE-560 070. Phone : 26771695

VIPRANUDI-Kannada Monthly, Published & Owned by President, On behalf of Akhila Karnataka Brahamana Mahasabha (R)
"Gayathri Bhavana", No. 3070, 9th Main Road, Gaythri Bhavana Road (14th Cross) BSK 2nd Stage, Bangalore-560 070.
And Printed at Parimala Mudranalaya, No. 184, Allama Prabhu Road, 14th Main, Hanumanthanagar, Bangalore-560 050, Editor : Prof. M.K. Sridhar